ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 5 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 80

ಪುಟಗಳು: 12 ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ಮೈಸೂರು ಮಿತ್ರ ಶುಕ್ರವಾರ 5 ಜುಲೈ 2024

ಮೈಸೂರು ಎಸ್ಪಿ ಎನ್.ವಿಷ್ಣುವರ್ಧನ್ ಅಧಿಕಾರ ಸ್ವೀಕಾರ

ಮೈಸೂರು ನಗರ ಪೊಲೀಸ್ ಆಯುಕ್ತರ ಹುದ್ದೆ ಅಲಂಕರಿಸದ ಸೀಮಾ ಲಾಟ್ಕರ್; ಆಯುಕ್ತರಾಗಿ ಬಿ.ರಮೇಶ್ ಮುಂದುವರಿಕೆ



ಎನ್.ವಿಷ್ಣುವರ್ಧನ್



ಸೀಮಾ ಲಾಟ್ಕರ್



ಬಿ.ರಮೇಶ್

ಮೈಸೂರು, ಜು.4(ಆರ್‌ಕೆ)–ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಎನ್.ವಿಷ್ಣುವರ್ಧನ್, ಇಂದು ಮೈಸೂರಿನ ನಜರ್‌ಬಾದ್‌ನಲ್ಲಿರುವ ಎಸ್ಪಿ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡರು.

ಈ ಮಧ್ಯೆ, ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ವರ್ಗಾವಣೆಗೊಂಡಿದ್ದ ಸೀಮಾ ಲಾಟ್ಕರ್ ಅವರು, ಸರ್ಕಾರದಿಂದ ಮೌಖಿಕ ಆದೇಶದ ಹಿನ್ನೆಲೆಯಲ್ಲಿ ನೂತನ ಎಸ್ಪಿಗೆ ಅಧಿಕಾರ ವಹಿಸಿಕೊಟ್ಟರಲ್ಲದೇ ತಾವು ವರ್ಗಾವಣೆಯಾಗಿದ್ದ ಪೊಲೀಸ್ ಆಯುಕ್ತರಾಗಿ ಇನ್ನು ಅಧಿಕಾರ ಸ್ವೀಕರಿಸಿಲ್ಲ.

ಹಾಗಾಗಿ ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಬಿ.ರಮೇಶ್ ಮುಂದುವರಿದಿದ್ದಾರೆ. ಸರ್ಕಾರದ ಆದೇಶದಂತೆ ಅಧಿಕಾರ ಹಸ್ತಾಂತರಿಸಿ ಬಳಿಕವೇ ನೀವು ರಿಲೀವ್ ಆಗಬೇಕೆಂದು ಸರ್ಕಾರ ಮೂವ್‌ಮೆಂಟ್ ಆರ್ಡರ್‌ನಲ್ಲಿ ಸೂಚಿಸಿರುವುದರಿಂದ ತಾವು ಅದನ್ನು ಪಾಲನೆ ಮಾಡಬೇಕಿದೆ ಎಂದು ಬಿ.ರಮೇಶ್ ತಿಳಿಸಿದ್ದಾರೆ.

ಸರ್ಕಾರ ವರ್ಗಾವಣೆ ಮಾಡಿ, ನಂತರ ನಾವು ಹೇಳುವವರೆಗೆ ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಅಧಿಕಾರ ವಹಿಸಿಕೊಳ್ಳಬೇಡಿ ಎಂದು ಇಲಾಖೆ ಉನ್ನತ ಅಧಿಕಾರಿಗಳು ದೂರವಾಣಿ ಮೂಲಕ ಸೂಚನೆ ನೀಡಿರುವುದರಿಂದ ಸೀಮಾ ಲಾಟ್ಕರ್ ಅವರು ಮುಂದಿನ ಆದೇಶಕ್ಕಾಗಿ ಕಾಯುತ್ತಿದ್ದಾರೆನ್ನಲಾಗಿದೆ. ಸರ್ಕಾರದ ಈ ದ್ವಂದ್ವ ನಿಲುವು ಅಧಿಕಾರಿಗಳಲ್ಲಿ ಕಸಿವಿಸಿ ಉಂಟು ಮಾಡದೇ ಇರದು.

ಸಿಎಂ ಸ್ಥಾನದಿಂದ ಸಿದ್ದು ಕೆಳಗಿಳಿಸಿದಲ್ಲಿ ಅಹಿಂದದಿಂದ ರಾಜ್ಯಾದ್ಯಂತ ಪ್ರತಿಭಟನೆ

ಮೈಸೂರು,ಜು.4(ಜಿಎ)–ಪ್ರಾಮಾಣಿಕ ಹಾಗೂ ಸಾಮಾಜಿಕ ಬದ್ಧತೆ ಹೊಂದಿರುವ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿದಲ್ಲಿ ಅಹಿಂದ ಸಂಘಟನೆ ಆಶ್ರಯದಲ್ಲಿ ವಿವಿಧ ಸಂಘಟನೆಗಳು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅಹಿಂದ ಸಂಘಟನೆಯ ರಾಜ್ಯ ಜಂಟಿ ಸಂಚಾಲಕ ಎಂ.ಲೋಕೇಶ್ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಮೂಲತಃ ರಾಮ್‌ಮನೋಹರ್ ಲೋಹಿಯಾ ಅವರ ಅನುಯಾಯಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನದ ಆಶಯ ಸಾಕಾರಗೊಳಿಸುವ ನಿಟ್ಟಿನಲ್ಲಿ ಆಡಳಿತ ನಡೆಸುತ್ತಿದ್ದಾರೆ. ತಾವು ಅಧಿಕಾರಕ್ಕೆ ಬಂದಾಗಲೆಲ್ಲ ಅನೇಕ ಜನೋಪಯೋಗಿ ಭಾಗ್ಯ ಕಾರ್ಯಕ್ರಮ ನೀಡಿದ್ದಾರೆ. ಇದರಿಂದಾಗಿ ಬಡತನ ರೇಖೆಗಿಂತ ಕೆಳಗಿನ ಅಹಿಂದ ಸಮುದಾಯದ ಶೇ.80ರಷ್ಟು ಕುಟುಂಬಗಳು ಮೂರು ಹೊತ್ತು ಊಟ ಮಾಡುವಂತಾಗಿದೆ ಎಂದರು.

ಅಹಿಂದ ಸಮುದಾಯಗಳು ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಕೈಹಿಡಿಯುತ್ತಿವೆ. ಆದರೆ ಅನೇಕರು ಅವರ ಸ್ಥಾನವನ್ನು ಅಸ್ಥಿರಗೊಳಿಸುವ ಹುನ್ನಾರ ನಡೆಸುತ್ತಿದ್ದಾರೆ. ಆದ್ದರಿಂದ ಒಂದು ವೇಳೆ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿದಲ್ಲಿ ಹೋರಾಟ ನಡೆಸಬೇಕಾಗುತ್ತದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಇನ್ನಿತರ ಸಂಘಟನೆಗಳ ಮುಖಂಡರಾದ ಜಗದೀಶ ಚೌಡಹಳ್ಳಿ, ಬಂಗವಾದಿ ನಾರಾಯಣಪ್ಪ, ನಂಜುಂಡಸ್ವಾಮಿ, ಶಿವಣ್ಣ ಕಂದೇಗಾಲ, ಪಿ.ದೇವರಾಜು, ಎಸ್.ಮಹದೇವ, ಬೋರಲಿಂಗೇಗೌಡ, ವಿ.ಮಹದೇವ್ ಉಪಸ್ಥಿತರಿದ್ದರು.

ಮುಡಾ ಹಗರಣ ಸಿಬಿಐಗೆ ಕೊಡುವ ಪ್ರಕರಣವೇ ಅಲ್ಲ



ಬೆಂಗಳೂರು, ಜು.4– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಿಬಿಐ ತನಿಖೆ ನಡೆಸಬೇಕೆಂಬ ಬಿಜೆಪಿಯ ಬೇಡಿಕೆಯನ್ನು ಸ್ಪಷ್ಟವಾಗಿ ತಿರಸ್ಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದು ಸಿಬಿಐಗೆ ಕೊಡುವ ಪ್ರಕರಣವೇ ಅಲ್ಲ ಎಂದು ಗುರುವಾರ ಹೇಳಿದ್ದಾರೆ.

ಇಂದು ವಿಧಾನಸೌಧದಲ್ಲಿ ಮುಡಾ ಹಗರಣದ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ನನ್ನ ಅವಧಿಯಲ್ಲಿ 7 ಪ್ರಕರಣಗಳನ್ನು ಸಿಬಿಐಗೆ ಕೊಟ್ಟಿದ್ದೇನೆ. ನಾವು ಹಲವು ಪ್ರಕರಣ ಸಿಬಿಐಗೆ ಕೊಡುವಂತೆ ಕೇಳಿದ್ದೆವು. ಅವರೇನಾದರೂ (ಬಿಜೆಪಿಯವರು) ಒಂದಾದರೂ ಕೊಟ್ಟಿದ್ರಾ ಎಂದು ಪ್ರಶ್ನಿಸಿದರು. ಇದು ಸಿಬಿಐಗೆ ಕೊಡುವ ಪ್ರಕರಣ ಅಲ್ಲ, ಮುಡಾ ಹಗರಣ ಆರೋಪದ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಬಿಜೆಪಿಗರು ಕೇಳುತ್ತಾರೆ ಎಂದು ಎಲ್ಲವನ್ನೂ ಸಿಬಿಐಗೆ ಕೊಡಲು ಆಗಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಇದೇ ವೇಳೆ ಇಂಧನ ಸಚಿವ ಕೆ.ಜೆ. ಜಾರ್ಜ್ ಮಾತನಾಡಿ, ಮುಡಾ ನಿವೇಶನ ಹಂಚಿಕೆಗೆ 50:50 ಅನುಪಾತದ ಆದೇಶ ಮಾಡಿದ್ದು, ನಮ್ಮ ಸರ್ಕಾರ ಅಲ್ಲ. ಯಾರ ಕಾಲದಲ್ಲಿ ಸೈಟುಗಳು ಹಂಚಿಕೆ ಆಗಿವೆ ಬಿಜೆಪಿ ಕಾಲದಲ್ಲಿ ಒಂದಾದರೂ ಸಿಬಿಐಗೆ ನೀಡಿದ ಉದಾಹರಣೆ ಇದೆಯಾ. ತನಿಖೆ ನಡೆಯುತ್ತಿದೆ, ತನಿಖೆ ಆದ ಮೇಲೆ ಎಲ್ಲ ವಿವರ ಹೊರ ಬರುತ್ತದೆ. ನ್ಯಾಯಯುತವಾಗಿ ಹಂಚಿಕೆ ಮಾಡಿದ್ದಕ್ಕೂ ಸಿಬಿಐಗೆ ನೀಡಿ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ಶಾಲಾ–ಕಾಲೇಜು ಮಕ್ಕಳಿಗೆ ನಿತ್ಯವೂ ಇಲ್ಲಿ ರಾಶಿ ರಾಶಿ ಕಸ ದರ್ಶನ!



ಮೈಸೂರು, ಜು.4(ಎಂಕೆ)– ಸರ್ಕಾರಿ ಶಾಲಾ–ಕಾಲೇಜು ಮಕ್ಕಳಿಗೆ ನಿತ್ಯ ದುರ್ವಾಸನೆ ಅನುಭವಿಸುವ... ತ್ಯಾಜ್ಯ ದರ್ಶನ ಮಾಡುವ ಭಾಗ್ಯ ಕರುಣಿಸಲಾಗಿದೆ...!

ಮೈಸೂರಿನ ನಜರ್‌ಬಾದ್‌ನಲ್ಲಿರುವ ವಿಭಜಿತ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಎದುರು ರಾಶಿ ರಾಶಿ ಕಸ ಬೀಳುತ್ತಿದ್ದು, ಪ್ರತಿನಿತ್ಯ ದುರ್ವಾಸನೆಯ ನಡುವೆ ಕಸದ ರಾಶಿಯನ್ನು ದಾಟಿಕೊಂಡೇ ವಿದ್ಯಾರ್ಥಿಗಳು ಶಾಲಾ–ಕಾಲೇಜು ಆವರಣಕ್ಕೆ ಬರಬೇಕಾದ ದುಸ್ಥಿತಿ ಉಂಟಾಗಿದೆ.

ದಿನವೂ ಕಾಲೇಜು ಗೇಟ್ ಬಳಿ ಪೌರಕಾರ್ಮಿಕರು ಕಸ ವಿಲೇವಾರಿ ಮಾಡಿದ ಕೆಲವೇ ಗಂಟೆಗಳಲ್ಲಿ ಅದೇ ಸ್ಥಳದಲ್ಲಿ ಮತ್ತೆ ಕಸದ ರಾಶಿ ನಿರ್ಮಾಣವಾಗುತ್ತದೆ. ಇದರಿಂದ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಬಾರೀ ತೊಂದರೆಯಾಗುತ್ತಿದ್ದು, ಶಾಲೆ ಮತ್ತು ಕಾಲೇಜಿನಲ್ಲಿ 400ಕ್ಕೂ ಹೆಚ್ಚು ಮಕ್ಕಳ ವಿದ್ಯಾಭ್ಯಾಸ ಮಾಡುತ್ತಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಹೆಚ್ಚಾಗಿದೆ. ಸ್ಥಳಿಯ ಜನರಿಗೆ ಎಷ್ಟೇ ಹೇಳಿದರೂ ಕೇಳುತ್ತಿಲ್ಲ. ಕಾಲೇಜು ಗೇಟ್ ಮುಂದೆಯೇ ಕಸ ತಂದು ಸುರಿಯುತ್ತಾರೆ. ಅಲ್ಲದೆ ದನ–ಕರುಗಳನ್ನು ಗೇಟ್‌ಗೆ ಕಟ್ಟಿ ಹಾಕುತ್ತಾರೆ. ಕಾಲೇಜು ಮುಂದೆ ಕಸದ ತಿಪ್ಪೆಯಾಗಿರುತ್ತದೆ. ಪೌರಕಾರ್ಮಿಕರು ಕಸ ಸಂಗ್ರಹಣೆಗೆ ಬಂದರೂ ಕಸ ನೀಡದೆ ಕಾಲೇಜು ಮುಂದೆ ಸುರಿಯುತ್ತಾರೆ. ಇದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು 'ಮೈಸೂರು ಮಿತ್ರ'ನಿಗೆ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರೊಬ್ಬರು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ತೊಂದರೆಗಳ ಮಾಹಿತಿ ನೀಡಿದರು.

ದಂಡ ವಿಧಿಸಿ, ಸಿಸಿಟಿವಿ ಅಳವಡಿಸಿ: ಪಾಲಿಕೆ ಅಧಿಕಾರಿಗಳು ಕೂಡಲೇ ಕಾಲೇಜು ಗೇಟ್ ಎದುರು ಸಿಸಿಟಿವಿ ಕ್ಯಾಮರಾ ಅಳವಡಿಸಿ, ಕಸ ಸುರಿಯುವವರಿಗೆ ಬಾರೀ ದಂಡ ವಿಧಿಸಬೇಕು. ಹಾಗೆಯೇ ಇಲ್ಲಿ ದಂಡ ಸುರಿಯದಂತೆ ಎಚ್ಚರಿಕೆ ಬೋರ್ಡ್ ಅಳವಡಿಸಬೇಕು ಆಗ್ರಹಿಸಿದರು.

ಕಾವೇರಿ ಒಡಲು ಸೇರುತ್ತಿದೆ ಕಲುಷಿತ ನೀರು

ಮಾಲಿನ್ಯ ನಿಯಂತ್ರಣ ಮಂಡಳಿಯ ಮುಖ್ಯ ಪರಿಸರ ಅಧಿಕಾರಿ ನೇತೃತ್ವದಲ್ಲಿ ಅಧ್ಯಯನ ಸಮಿತಿ ರಚನೆ

● 10 ದಿನದಲ್ಲಿ ತುರ್ತು ಮಾರ್ಗೋಪಾಯವುಳ್ಳ ವರದಿ ನೀಡಲು ಸೂಚನೆ ● ಕಲುಷಿತ ನೀರು ಸೇರ್ಪಡೆ ಬಗ್ಗೆ ಪತ್ರ ಬರೆದು ಗಮನ ಸೆಳೆದಿದ್ದ ಶಾಸಕ ದಿನೇಶ್ ಗೂಳಿಗೌಡ



ದಿನೇಶ್ ಗೂಳಿಗೌಡ

ಬೆಂಗಳೂರು, ಜು.4– ರಾಜ್ಯದ ಜೀವನದಿ ಕಾವೇರಿ ನದಿಗೆ ಕಲುಷಿತ ನೀರು ಸೇರ್ಪಡೆಗೊಳ್ಳುತ್ತಿರುವ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ರಾಜ್ಯ ಸರ್ಕಾರ, ಪರಿಸರ ಇಲಾಖೆ ತಜ್ಞರ ಸಮಿತಿಯನ್ನು ರಚಿಸಿ ಆದೇಶಿಸಿದೆ. ಕಾವೇರಿ ನದಿಗೆ ಒಳಚರಂಡಿ ನೀರು, ಘನ ತ್ಯಾಜ್ಯ, ಕೈಗಾರಿಕ ತ್ಯಾಜ್ಯ ಹಾಗೂ ಇತರೆ ಸ್ವರೂಪದ ಮಲಿನಕಾರಕ ವಸ್ತುಗಳು ಸೇರ್ಪಡೆಗೊಂಡು ನೀರು ನೈಸರ್ಗಿಕ ಗುಣ ಕಳೆದುಕೊಂಡು ಮಾಲಿನ್ಯ ಉಂಟಾಗುತ್ತಿದೆ. ಸಾರ್ವಜನಿಕರು ಮತ್ತು ಜಲಚರಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದರ ಬಗ್ಗೆ ಶಾಸಕ ದಿನೇಶ್ ಗೂಳಿಗೌಡರು ಸರ್ಕಾರದ ಗಮನ ಸೆಳೆದಿದ್ದ ಹಿನ್ನೆಲೆಯಲ್ಲಿ ಈ ಸಮಿತಿ ರಚಿಸಿ ಆದೇಶಿಸಿದ್ದು, 10 ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಕಾವೇರಿ ನದಿ ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ ಶಾಸಕ ದಿನೇಶ್ ಗೂಳಿಗೌಡರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಈಶ್ವರ ಖಂಡ್ರೆ ಅವರಿಗೆ ಪತ್ರ ಬರೆದು ಸಮಸ್ಯೆಯ ಗಂಭೀರತೆಯನ್ನು ವಿವರಿಸಿದ್ದರು. ಈ ಹಿನ್ನೆಲೆಯಲ್ಲಿ ಪರಿಸರ ಇಲಾಖೆಯ ಸಚಿವರೂ ಆದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಪರಿಸ್ಥಿತಿಯ ಗಂಭೀರತೆ ಅರಿತು ಸಮಿತಿ ರಚಿಸಿರುವುದಾಗಿ ದಿನೇಶ್ ಗೂಳಿಗೌಡರಿಗೆ ಪತ್ರ ಬರೆದು ತಿಳಿಸಿದ್ದಾರೆ. ಕಾವೇರಿ ನದಿಗೆ ಒಳಚರಂಡಿ ನೀರು, ಘನ ತ್ಯಾಜ್ಯ, ಕೈಗಾರಿಕೆ ತ್ಯಾಜ್ಯ ಹಾಗೂ ಇತರೆ ಮಲಿನಕಾರಕ ವಸ್ತುಗಳು ಸೇರ್ಪಡೆಗೊಂಡು ನೀರು ಕಲುಷಿತವಾಗಿ ಪರಿಸರಕ್ಕೆ ಆಗಿರುವ ಅನಾಹುತ ತಡೆ ಯುವ ಬಗ್ಗೆ ಪರಿಶೀಲಿಸಿ 10 ದಿನಗಳ ಒಳಗಾಗಿ ವರದಿ ಸಲ್ಲಿಸಲು ರಚಿಸಲಾದ ತಜ್ಞರ ಸಮಿತಿಗೆ ಪರಿಸರ ಇಲಾಖೆ ಸೂಚನೆ ನೀಡಿದೆ.



ಸಮಿತಿಯಲ್ಲಿ ಯಾರಿದ್ದಾರೆ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಬೆಂಗಳೂರು)ಯ ಮುಖ್ಯ ಪರಿಸರ ಅಧಿಕಾರಿ ನಿರಂಜನ್ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಸಮಿತಿಯ ಸದಸ್ಯರಾಗಿ ಕಾವೇರಿ ನೀರಾವರಿ ನಿಗಮ ನಿಯಮಿತ (ಮೈಸೂರು)ದ ಅಧೀಕ್ಷಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ (ಮೈಸೂರು)ಯ ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆಯ ಅಧೀಕ್ಷಕ ಅಭಿಯಂತರರು, ಮೈಸೂರು ವಿಶ್ವವಿದ್ಯಾಲಯದ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥರು, ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜ್ ಆಫ್ ಮೈಸೂರಿನ ಪ್ರಾಧ್ಯಾಪಕ ಡಾ.ಬಿ.ಮನೋಜ್‌ಕುಮಾರ್, ಮೈಸೂರಿನ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರರು, ಮೈಸೂರಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿವೃತ್ತ ಹಿರಿಯ ಪರಿಸರ ಅಧಿಕಾರಿ ಎಂ.ಬಿ.ಪ್ರಕಾಶ್ ಅವರನ್ನು ನೇಮಕ ಮಾಡಲಾಗಿದೆ. ಇದೇ ರೀತಿ ಮೈಸೂರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮೈಸೂರು ಹಿರಿಯ ಪರಿಸರ ಅಧಿಕಾರಿಯನ್ನು ಸದಸ್ಯ ಸಂಯೋಜಕರಾಗಿ ನೇಮಕ ಮಾಡಲಾಗಿದೆ. ಈ ಆದೇಶ ತಲುಪಿದ

10 ದಿನಗಳ ಒಳಗಾಗಿ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ದಿನದಂದು ಸಮಿತಿಯ ಕಾರ್ಯಾವಧಿ ಮುಕ್ತಾಯಗೊಳ್ಳುತ್ತದೆ ಎಂದು ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅಧೀನ ಕಾರ್ಯದರ್ಶಿ ಯು.ಶಾಂತಲಕ್ಷ್ಮಿ ತಿಳಿಸಿದ್ದಾರೆ.

ಸಚಿವರು, ಸರ್ಕಾರಕ್ಕೆ ಅಭಿನಂದನೆ: ರಾಜ್ಯ ಸರ್ಕಾರವು ಈ ನೆಲ, ಜಲ, ರೈತರ, ನಾಗರಿಕರ ರಕ್ಷಣೆಗೆ ಸದಾ ಒಂದು ಹೆಜ್ಜೆ ಮುಂದೆ ಇರುತ್ತದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದೆ. ಜೀವನದಿ ಕಾವೇರಿ ಉಳಿವಿಗಾಗಿ ಈಗ ಸಮಿತಿಯನ್ನು ರಚನೆ ಮಾಡಿರುವುದು ಅಭಿನಂದನೀಯ ಕ್ರಮವಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ್, ಈಶ್ವರ ಖಂಡ್ರೆ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಶಾಸಕ ದಿನೇಶ್ ಗೂಳಿಗೌಡ ಪ್ರತಿಕ್ರಿಯೆ ನೀಡಿದ್ದಾರೆ.

ಸೃಜನಾತ್ಮಕವಾಗಿ ಯೋಚಿಸಿದರೆ ಕವಿ ಇಲ್ಲವೆ ಸಿನಿಮಾ ನಿರ್ದೇಶಕರಾಗಬಹುದು

ಕಾಲೇಜು ಮಕ್ಕಳಲ್ಲಿ ಸ್ಫೂರ್ತಿ ತುಂಬಿದ ಆಕಾಶವಾಣಿಯ ಅಬ್ದುಲ್ ರಷೀದ್

ಮೈಸೂರು,ಜು.4(ಎಂಟಿವೈ)–ವಿದ್ಯಾರ್ಥಿ ಜೀವನದಲ್ಲಿಯೇ ಸೃಜನಾತ್ಮಕವಾಗಿ ಯೋಚನೆ ಮಾಡಲು ಮುಂದಾದರೆ ಕಥೆಗಾರರು, ಕವಿಗಳು, ಸಿನಿಮಾ ನಿರ್ದೇಶಕರಾಗಿ ಹೊರಹೊಮ್ಮಬಹುದು ಎಂದು ಮೈಸೂರು ಆಕಾಶವಾಣಿ ಸಹಾಯಕ ಕಾರ್ಯಕ್ರಮ ನಿರ್ವಾಹಕ ನಿರ್ದೇಶಕ ಅಬ್ದುಲ್ ರಷೀದ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಮಾತೃಮಂಡಲಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಆಕಾಶವಾಣಿ ಸಹಾಯಕ ಕಾರ್ಯಕ್ರಮ ನಿರ್ವಾಹಕ ನಿರ್ದೇಶಕ ಅಬ್ದುಲ್ ರಷೀದ್ ಮಾತನಾಡಿದರು.

ಮೈಸೂರಿನ ವಿ.ವಿ.ಮೊಹಲ್ಲಾದ ಮಾತೃ ಮಂಡಲಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣ ಸದ್ಬಳಕೆ ಮಾಡಿಕೊಂಡರೆ ಸ್ವಾವಲಂಬನೆ ಸಾಧಿಸಬಹುದು. ಪ್ರಸ್ತುತ ಅನೇಕ ಯುವಕ–ಯುವತಿಯರು ಯುಟ್ಯೂಬರ್‌ಗಳಾಗಿ ಮತ್ತು ಬ್ಲಾಗ್‌ಗಳಲ್ಲಿ ಬರೆದು ಸಂಪಾದನೆ ಮಾಡುತ್ತಿದ್ದಾರೆ. ನಿಮ್ಮ ವಿಡಿಯೋಗಳಿಗೆ ಹೆಚ್ಚಿನ ವೀಕ್ಷಕರು ಲಭ್ಯವಾದರೆ ಹಣ ಸಂಪಾದನೆ ಮಾಡಬಹುದಾಗಿದೆ. ನಿಮ್ಮ ಊರಿನ ಬೆಟ್ಟಗುಡ್ಡ ಪರ್ವತ, ದೇವಾಲಯ, ಮಸೀದಿ, ಚರ್ಚುಗಳ ಹಿರಿಮೆಗಳು, ಜೋಗತಿ ಹಾಡು, ದಾಸರ ಪದ, ಮಲೆ ಮಹದೇಶ್ವರರ ಕಥೆಗಳು, ಔಷಧೀಯ ಗುಣವಿರುವ ಸಸ್ಯಗಳ ಬಗ್ಗೆ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಬಹುದು. ಇದರಿಂದ ಮುಂದೊಂದು ದಿನ ಒಳಿತು ಕಾಣಬಹುದು ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶ ಮಕ್ಕಳಲ್ಲಿ ರಾಷ್ಟ್ರ ಮತ್ತು ಭಾಷೆಯ ಭವಿಷ್ಯ ಅಡಗಿದೆ. ರಾಷ್ಟ್ರಕವಿ ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ದೇವನೂರ ಮಹಾದೇವ, ಅನಂತಮೂರ್ತಿ ಸೇರಿದಂತೆ ಅನೇಕರು ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಗ್ರಾಮೀಣ ಪ್ರದೇಶದ ಜನರ ಮನಸ್ಸು ಸೂಕ್ಷ್ಮವಾಗಿರುತ್ತದೆ. ಅವರು ಜೀವಂತವಾಗಿ ಬದುಕಿರುತ್ತಾರೆ ಎಂದರು.

ಮಾತೃ ಮಂಡಲಿ ವಿದ್ಯಾಸಂಸ್ಥೆ ಗೌರವಾಧ್ಯಕ್ಷೆ ವಿಜಯಲಕ್ಷ್ಮೀ ಅರಸ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ವಾಣಿ ಪ್ರಸಾದ್, ಗೌರವ ಸಹ ಕಾರ್ಯದರ್ಶಿ ಹೇಮ ಬಾಲಚಂದ್ರನ್, ಖಜಾಂಚಿ ವಿಜಯಲಕ್ಷ್ಮೀ ಮುರಳಿಧರ್, ಆಡಳಿತ ಮಂಡಲಿ ಸದಸ್ಯರು, ಪ್ರಾಂಶುಪಾಲರು, ಬೋಧಕ–ಬೋಧಕೇತರರು ಪಾಲ್ಗೊಂಡಿದ್ದರು.

ಏಷ್ಯನ್ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್‌ನಲ್ಲಿ ಆದ್ಯ ಎಸ್.ನಾಯಕ್‌ಗೆ 3ನೇ ಸ್ಥಾನ



ಮೈಸೂರು,ಜು.4–ಮೈಸೂರಿನ ಆಚಾರ್ಯ ವಿದ್ಯಾಕುಲದಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆದ್ಯ ಎಸ್.ನಾಯಕ್ ದುಬೈನಲ್ಲಿ ನಡೆದ ಪ್ರತಿಷ್ಠಿತ ಏಷ್ಯನ್ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್‌ನಲ್ಲಿ 3ನೇ ಸ್ಥಾನ ಪಡೆದಿದ್ದಾರೆ. ಈಕೆ ಸುಧಾಕರ್ ನಾಯಕ್ ಮತ್ತು ಶ್ರೀಮತಿ ಅಕ್ಷಯ ನಾಯಕ್ ದಂಪತಿ ಪುತ್ರಿ.

ಅರ್ಜಿ ಆಹ್ವಾನ

ಮೈಸೂರು, ಜು. 4– ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಒದಗಿಸಿದ್ದು, ಕಡಿಮೆ ಶುಲ್ಕ ಪಡೆದು ವಸತಿ ಮತ್ತು ಊಟ ನೀಡಲಾಗುತ್ತದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಸಂಘದ ಕಚೇರಿಯಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆದು ವಿದ್ಯಾರ್ಥಿ ನಿಲಯಕ್ಕೆ ಪ್ರವೇಶಾತಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಮೊ. 9632737 428, 9880301279 ಸಂಪರ್ಕಿಸಬಹುದು.

ಜು.7, ಮೈಸೂರಲ್ಲಿ ದೈವಿಕ ರಥಯಾತ್ರೆ

ಮೈಸೂರು,ಜು.4(ಜಿಎ)–ಮೈಸೂರಿನ ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜು.7ರಂದು ವಿಶ್ವೇಶ್ವರ ನಗರದಲ್ಲಿರುವ ಜಗನ್ನಾಥಸ್ವಾಮಿ ದೇವಾಲಯದಿಂದ ವಿದ್ಯಾರಣ್ಯಪುರಂ ಉದ್ಯಾನದವರೆಗೆ ದೈವಿಕ ರಥಯಾತ್ರೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಆಡಳಿತಾಧಿಕಾರಿ ಘನಶ್ಯಾಂ ಪ್ರಧಾನ್ ಈ ವಿಷಯ ತಿಳಿಸಿ, ಮಧ್ಯಾಹ್ನ 2 ಗಂಟೆಗೆ ರಥಯಾತ್ರೆ ಆರಂಭವಾಗಲಿದೆ.

ಇದಕ್ಕೂ ಮೊದಲು ಮಧ್ಯಾಹ್ನ 12ಕ್ಕೆ ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿವೆ. ಈ ವೇಳೆ ರಾಜವಂಶಸ್ಥರಾದ ಡಾ.ಪ್ರಮೋದಾದೇವಿ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯೆ ಶೋಭಾ ಸುನೀಲ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿ.ಎಂ.ಗೋಪಾಲ ಕೃಷ್ಣ, ಜಯಶಂಕರ್, ಮೋತಿಲಾಲ್ ಉಪಸ್ಥಿತರಿದ್ದರು.

ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಸುತ್ತೂರು ನಂಜುಂಡ ನಾಯಕ ಆಯ್ಕೆ




ನಂಜುಂಡ ನಾಯಕ

ಸುತ್ತೂರು, ಜು. 4– ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ವತಿಯಿಂದ ಪತ್ರಿಕಾ ದಿನಾಚರಣೆ ಮತ್ತು ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜು. 6ರಂದು ಶನಿವಾರ ಬೆಳಗ್ಗೆ 11 ಗಂಟೆಗೆ ನಂಜನಗೂಡು ಶ್ರಾವಣ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ತಾಲೂಕು ಪತ್ರ ಕರ್ತರ ಸಂಘದ ಸದಸ್ಯ ಸುತ್ತೂರು ನಂಜುಂಡ ನಾಯಕ ಅವರಿಗೆ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ನೀಡಿ, ಗೌರವಿಸಲಾಗುವುದು.

ಸಮಾಜ ಕಲ್ಯಾಣ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು.

ಶಾಸಕ ದರ್ಶನ್ ಧ್ರುವನಾರಾಯಣ್, ಸಂಸದ ಸುನೀಲ್ ಬೋಸ್, ಸುತ್ತೂರು ಜೆಎಸ್‌ಎಸ್ ಸಂಸ್ಥೆ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್, ಜೆಎಸ್‌ಎಸ್ ಸಂಸ್ಥೆ ಸಂಯೋಜನಾಧಿಕಾರಿ ಜಿ ಎಲ್.ತ್ರಿಪುರಾಂತಕ, ತಾಲೂಕು ಪತ್ರಿಕಾ ಸಂಘದ ಅಧ್ಯಕ್ಷ ಗಂಗಾಧರ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಸತ್ಯನಾರಾಯಣ್, ತಾಲೂಕು ಪತ್ರ ಕರ್ತರ ಸಂಘದ ಪದಾಧಿಕಾರಿಗಳು ಕಾರ್ಯ ಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.07.2024 ಶುಕ್ರವಾರ, ಮಳೆ ನಕ್ಷತ್ರ: ಆರ್ದ್ರಾ 22.06.2024 ರಿಂದ 05.07.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಆರ್ದ್ರಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9ರಿಂದ ಬೆನ್ನು ನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆಗಳ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಮೈಸೂರು ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯ ದತ್ತಿ ಉಪನ್ಯಾಸ ಯೋಜನೆ, ಆಂತರಿಕ ಗುಣಮಟ್ಟ ಖಾತರಿ ಘಟಕ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ:** ಪ್ರೊ.ಪಾಲ್ ನೀರ್‌ಗಾರ್ಡ್ ಮತ್ತು ಪ್ರೊ. ವೀಗೋ ಸೈಡೆಗಾರ್ಡ್ ದತ್ತಿ ಉಪನ್ಯಾಸ ಕಾರ್ಯಕ್ರಮ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಅನಿಲ್‌ಕುಮಾರ್ ತ್ರಿಪಾಠಿ ಅವರಿಂದ ಉಪನ್ಯಾಸ, ಉದ್ಘಾಟನೆ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪಸ್ಥಿತರು: ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.
- **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಮಂಡಲ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11.30ಕ್ಕೆ.
- **ರವಿವರ್ಮ ಆರ್ಟ್ ಇನ್‌ಸ್ಟಿಟ್ಯೂಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಪೇಯಿಂಟಿಂಗ್ ಮತ್ತು ಡ್ರಾಯಿಂಗ್ ಎಕ್ಸಿಬಿಷನ್, ಸ್ಥಳ: ರವಿವರ್ಮ ಆರ್ಟ್ ಇನ್‌ಸ್ಟಿಟ್ಯೂಟ್, ಚಾಮರಾಜಪುರಂ, ಮಧ್ಯಾಹ್ನ 12.30ಕ್ಕೆ
- **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ನಿರ್ದೇಶಕಿ ಪಿ.ಐ.ಶ್ರೀವಿದ್ಯಾ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಅತಿಥಿಗಳು: ಪೊಲೀಸ್ ಆಯುಕ್ತ ಬಿ.ರಮೇಶ್, ಇಂಡೆಕ್ಸ್–ಸಿ ವ್ಯವಸ್ಥಾಪಕ ನಿರ್ದೇಶಕ ಎನ್.ಡಿ.ಪರ್ಮಾರ್, ಜಿಪಂ ಸಿಇಓಕೆ.ಎಂ.ಗಾಯಿತ್ರಿ, ಮೈಸೂರು ನಗರಪಾಲಿಕೆ ಆಯುಕ್ತ ಆಶಾದ್ ಉರ್ ರಹಮಾನ್ ಶರೀಫ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ ನಿರ್ದೇಶಕ ಡಾ.ಯತೀಂದ್ರ ಲಕ್ಕಣ್ಣ, ಇಂಡೆಕ್ಸ್–ಸಿ ವ್ಯವಸ್ಥಾಪಕ ಆರ್.ಎಸ್.ಶಾ, ಹಿರಿಯ ಅಧಿಕಾರಿ ಎಸ್.ಆರ್. ಪ್ರಜಾಪತಿ, ವ್ಯವಸ್ಥಾಪಕ ಡಾ. ಸ್ನೇಹಲ್ ಮಕ್ವಾನಾ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಸಂಜೆ 4ಕ್ಕೆ.
- **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣಧಾಮ :** ಶ್ರೀ ಅದಮಾರು ಪೀಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದ ಗಳವರಿಂದ ಶ್ರೀಮದ್ ವಾದಿರಾಜ ವಿರಚಿತ ರುಕ್ಮಿಣೀಶ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಡಾ. ಎಸ್. ವಿ. ನರಸಿಂಹನ್, ಪ್ರಸ್ತುತಿ– ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಡಾ. ಶರಣಪ್ಪ. ವಿ. ಹಲಸೆ, ಮಾನ್ಯ ಕಲಪತಿಗಳು, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ–ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್. ಪದ್ಮನಾಭ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸೈಕಲ್ ಸವಾರಿ ಮಾತುಗಳ ಲಹರಿ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.30 ದೇವರನಾಮ–ಗಿರಿಜಾ ರಾಜ್‌ಕುಮಾರ್, 12.45 ಕಾದಂಬರಿ ವಿಹಾರ – ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್. ಎಸ್, 1.20 ಭಾವಗೀತೆಗಳು–ಶ್ರೀಮತಿ ದೇವಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ– ತುಮಕೂರು ಬಿ. ರವಿಶಂಕರ್, 4.00 ಮಹಿಳಾರಂಗ–ಸಖೀ ಸಂವಾದ, ಪ್ರಸ್ತುತಿ : ಸಹನಾ, 4.30 ವೃತ್ತಿ ಮಾರ್ಗದರ್ಶನ : 'ಭೂಗೋಳ ಶಾಸ್ತ್ರ ಅಂದರೆ ಜಿಯಾಗ್ರಫಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಚಂದ್ರಶೇಖರ ವೈ.ಪಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 5.30 ಪಶುಧನ್ ಸೆ ಬೆಹತರ್ ಜೀವನ್, ಪ್ರಾಯೋಜಕರು: ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ–ಮುಂಗಾರಿಗೆ ಕೃಷಿ ಇಲಾಖೆ ಯೋಜನೆಗಳು. ಈ ಕುರಿತು ಮೈಸೂರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಡಾ. ಬಿ.ಎಸ್. ಚಂದ್ರಶೇಖರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಜ್ಞಾನ ಭಾರತೀ : ಸರಿಸೃಪಗಳು ಹಾಗೂ ಉಭಯಚರಿಗಳ ಕುರಿತು ಪರಿಸರವಾದಿ ಹಾಗೂ ವನ್ಯಜೀವಿ ಛಾಯಾಚಿತ್ರಗ್ರಾಹಕ ಸುಹಾಸ್ ಪ್ರೇಮ್ ಕುಮಾರ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಜಿ. ಶಾಂತಕುಮಾರ್ ಹಾಗೂ ಸಹನಾ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್‌ಗುಡಿ ಶ್ರೀಮತಿ ಬ್ರಹ್ಮನಂದನ್ ಮತ್ತು ಲಾಲ್ ಗುಡಿ ಆರ್. ರಾಜಲಕ್ಷ್ಮೀ–ಯುಗಳ ವೈಯೋಲಿನ್ ವಾದನ, 10.00 ತತ್ವ ಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು


ಸುಸ್ವಾಗತ
ಇಂದು ಚಾಮುಂಡಿ ಬೆಟ್ಟಕ್ಕೆ
ಆಗಮಿಸುತ್ತಿರುವ ಕೇಂದ್ರ ಉಕ್ಕು ಮತ್ತು
ಬೃಹತ್ ಕೈಗಾರಿಕಾ ಸಚಿವರಾದ
ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಅವರಿಗೆ ಹೃದಯ ಪೂರ್ವಕ
ಸ್ವಾಗತ .....ಸುಸ್ವಾಗತ

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪ ನಿಮಗೆ ಅಮ್ಮನ ಮೇಲೆ ಎಷ್ಟೊಂದು ಪ್ರೀತಿ, ಡೈಲಿ ಹೂ ತಂದುಕೊಡ್ತೀರಾ...

ಅಪ್ಪ : ಲೋ ದಡ್ಡ ಇದು ಅಮ್ಮನ ಮೇಲಿನ ಪ್ರೀತಿ ಅಲ್ಲೋ, ಹೂ ಮಾರುವ ಹುಡುಗಿ ಮೇಲಿನ ಪ್ರೀತಿ.

ಮೈಸೂರು ಮಿತ್ರ

ಶುಕ್ರವಾರ, 5 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಂಪರ್ಕ, ಪ್ರೀತಿ, ವಿಶ್ವಾಸ, ಗೌರವಗಳನ್ನು ಸಕಾಲಕ್ಕೆ ನವೀಕರಿಸಿಕೊಂಡಾಗ ಮಾತ್ರ ಸಂಬಂಧಗಳನ್ನು ತಾಜಾ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾವಣನ ಮಾತಿಗೆ ಮನಸೋತವ, ರಾಮನ ಮಾತಿಗೆ ಜಾಣನಾಗುವನೇ?

ನಿಮ್ಮ ಪತ್ರಗಳು

■ ಶ್ರೀರಂಗ ಅವ್ಯವಸ್ಥೆಯ ಆಗರ

ಮಾನ್ಯರೆ,



ಮೈಸೂರಿನ ಕಲಾಮಂದಿರದ ಹಿಂಭಾಗದಲ್ಲಿರುವ ಶ್ರೀ ರಂಗವು ಅನೇಕ ಸಾಂಸ್ಕೃತಿಕ ಚಟುವಟಿಕೆಗಳ ಮತ್ತು ರಂಗಭೂಮಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಕೇಂದ್ರವಾಗಿದೆ. ಇಲ್ಲಿ ಸುಮಾರು 100 ಜನರು ಕುಳಿತುಕೊಳ್ಳುವ ಆಸನ ವ್ಯವಸ್ಥೆ ಇದೆ. ಆದರೆ ಈ ಸಭಾಂಗಣಕ್ಕೆ ಒಂದು ಚೂರೂ ಸಹ ಗಾಳಿ-ಬೆಳಕಿನ ವ್ಯವಸ್ಥೆಯೇ ಇಲ್ಲ. ಇದನ್ನು ಒಂದು ರೀತಿಯಲ್ಲಿ ಅವೈಜ್ಞಾನಿಕವಾಗಿ ರೂಪಿಸಲಾಗಿದೆ. ಯಾವುದೋ ಹಳೇ ಕಾಲದ ಗುಹೆಗೆ ಹೋದಂತಹ ಅನುಭವವಾಗುತ್ತದೆ. ಇಲ್ಲಿ ಯಾವುದಾದರೂ ಕಾರ್ಯಕ್ರಮ ಎರಡು-ಮೂರು ಗಂಟೆಗಳ ಕಾಲ ನಡೆದು, ಆ ಕಾರ್ಯಕ್ರಮಕ್ಕೆ ಬಂದ ಪ್ರೇಕ್ಷಕ ಪೂರ್ಣ ಕಾರ್ಯಕ್ರಮದಲ್ಲಿ ಇದ್ದರೆ ಆತ ಉಸಿರು ಕಟ್ಟಿಸುವ ಪರಿಸ್ಥಿತಿ ಇದೆ. ಇಲ್ಲಿಗೆ ಬರುವ ಪ್ರೇಕ್ಷಕರೇನು ಪ್ರಾಣಿಗಳೇ?

ಕಲಾಮಂದಿರದ ಹಿಂಭಾಗದಲ್ಲಿರುವ ನೆಲಮಾಳಿಗೆಯನ್ನೇ 'ಶ್ರೀ ರಂಗ' ಎಂದು ಹೆಸರಿಟ್ಟಿದ್ದಾರೆ. ಇದು ಸಾಂಸ್ಕೃತಿಕ ನಗರ ಮೈಸೂರಿನ ರಂಗ ಚಟುವಟಿಕೆಗಳ ಕೇಂದ್ರ ಎನ್ನುತ್ತಾರೆ.

ಇದಕ್ಕೊಂದು ಉದಾಹರಣೆ ಎಂದರೆ, ಇತ್ತೀಚೆಗೆ ಇಲ್ಲಿ ನಡೆದ 'ಕೆ. ರಾಮದಾಸ್ ಒಂದು ನೆನಪು' ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ಅವರು ಮಾತನಾಡಲು ಪ್ರಾರಂಭಿಸಿದಾಗ ವಿದ್ಯುತ್ ಸಂಪರ್ಕ ಕಡಿತಕೊಂಡಿತು. ಮೊಬೈಲ್ ಫೋನ್‌ನ ಟಾರ್ಚ್ ಬೆಳಕಿನಲ್ಲೇ ಮಾತನಾಡಿದರು. ಶ್ರೀರಂಗ ಅವ್ಯವಸ್ಥೆಯ ಆಗರ. ಇದನ್ನು ಸಂಪೂರ್ಣವಾಗಿ ಮುಚ್ಚಿ, ಹೊಸದಾಗಿ ಪಕ್ಕದ ಜಾಗದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿ, ರಂಗ ಚಟುವಟಿಕೆಗಳಿಗೆ ಮತ್ತು ಸಣ್ಣ-ಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲು ಅನುಕೂಲ ಮಾಡಿಕೊಡಲಿ.

-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಪರೀಕ್ಷೆ ರದ್ದುಪಡಿಸಲು ಮೀನಾ ಮೇಷ ಏಕೆ?

ಮಾನ್ಯರೆ,

ಯುಜಿ ನೀಟ್ 2024ರ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಈ ಬಗ್ಗೆ ಸರ್ಕಾರದ ಮೇಲೆ ಮುಗಿ ಬೀಳುತ್ತಿವೆ. ಪರೀಕ್ಷೆಯನ್ನು ರದ್ದುಪಡಿಸಿ ಪುನಃ ಪರೀಕ್ಷೆ ನಡೆಸಬೇಕೆಂದು ವಿದ್ಯಾರ್ಥಿ ಸಂಘಟನೆಗಳು ದೇಶಾದ್ಯಂತ ಹೋರಾಟ ಮಾಡುತ್ತಿವೆ. ಪರೀಕ್ಷಾ ಹಗರಣ ಕುರಿತಂತೆ ಸರ್ಕಾರ ಸಿಬಿಐ ತನಿಖೆಗೆ ವಹಿಸಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯ ರೂವಾರಿಗಳು ಒಬ್ಬೊಬ್ಬರಾಗಿ ಸಿಬಿಐ ಗಾಳಕ್ಕೆ ಬೀಳುತ್ತಿದ್ದಾರೆ. ದೇಶಾದ್ಯಂತ ಈ ಮಾಫಿಯಾದ ಜಾಲ ಹರಡಿರುವುದು ಸ್ಪಷ್ಟವಾಗಿದೆ. ಹೀಗಿದ್ದು ಸರ್ಕಾರ ಪರೀಕ್ಷೆಯನ್ನು ರದ್ದುಪಡಿಸದೆ ಮೀನಾಮೇಷ ಎಣಿಸುತ್ತಿದೆ. ಪರೀಕ್ಷೆ ಅಳಿವು ಉಳಿವಿನ ಪ್ರಶ್ನೆ ಸುಪ್ರೀಂಕೋರ್ಟ್ ಅಂಗಳದಲ್ಲಿದ್ದು, ಜುಲೈ 8ರಂದು ಅಂತಿಮ ತೀರ್ಪು ಹೊರಬೀಳಲಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಈಗ ಸುಪ್ರೀಂನ ಅಂಗಳದಲ್ಲಿದೆ.

-ದೇವರಹಳ್ಳಿ ಲೋಕೇಶ್, ಪಾಂಡವಪುರ.

■ ಯಾರ್‍ರೀ ಮೂಢ......!!!

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA)ದಲ್ಲಿ ನಡೆದಿರುವ ನಿವೇಶನ ಹಗರಣ ಈಗ ರಾಜ್ಯದಲ್ಲಿ ದೊಡ್ಡ ಸದ್ದು ಮಾಡುತ್ತಿದೆ. ಹಿಂದಿನ ಸಿಐಟಿಬಿ, 90ರ ದಶಕದಲ್ಲಿ MUDA ಆಗಿ ಬದಲಾಯಿತು. ಆಗ ಮೈಸೂರಿನ ಝಾನ್ಸಿರಾಣಿ ಲಕ್ಷ್ಮಿ ಬಾಯಿ ರಸ್ತೆಯಲ್ಲೇ ಇರುವ ಮುಡಾಗೆ ನಗರ ಸಾರಿಗೆ ಬಸ್‌ನಲ್ಲಿ ಸಂಚರಿಸುವಾಗ ಮುಡಾ ಸ್ಟಾಪ್ ಬಂದಾಗ ಬಸ್‌ನ ಕಂಡಕ್ಟರ್, ಯಾರ್‍ರೀ ಮುಡಾ (ಇಳಿಯು ವವರು) ಎಂದೇ ಕೂಗುತ್ತಿದ್ದರು. (ಸಿಐಟಿಬಿ ಆಗಿದ್ದಾಗ, ಯಾರ್‍ರೀ ಸಿಐಟಿಬಿ ಎಂದು ಕೂಗುತ್ತಿದ್ದರು.)

ಆದರೆ ಒಮ್ಮೆ ಕಂಡಕ್ಟರ್ ಇದೇ ರೀತಿ, ಯಾರ್‍ರೀ ಮುಡಾ... (ಮುಡಾ ಸ್ಟಾಪ್) ಎಂದಾಗ ಓರ್ವ ಪ್ರಯಾಣಿಕ ಮತ್ತು ಕಂಡಕ್ಟರ್ ನಡುವೆ ಮಾರಾಮಾರಿಯೇ ನಡೆದು ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದ್ದನ್ನು ಅಂದಿನ ಪತ್ರಿಕೆಗಳಲ್ಲಿ ಓದಿದ ನೆನಪು. ಮುಡಾ ಎಂದರೆ ನನ್ನನ್ನು ಈ ಕಂಡಕ್ಟರ್ 'ಮೂಢ' ಎಂದು ಅಣಕಿಸುತ್ತಿದ್ದಾನೆ ಎಂದು ಪ್ರಯಾಣಿಕನಿಗೆ ಸಿಟ್ಟು ಬಂದಿತ್ತು! ಇದು ರಂಪಾಟಕ್ಕೆ ಕಾರಣವಾಗಿತ್ತು. ಈಗ ಹೇಳಿ ಯಾರ್‍ರೀ ಮುಡಾ! ಮೂಢ.

-ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಕನ್ನಡಿಗರಿಗೆ ಉದ್ಯೋಗಾವಕಾಶ ಕಲ್ಪಿಸಿ

ಮಾನ್ಯರೇ,

ತಮಿಳುನಾಡು, ಆಂಧ್ರ, ತೆಲಂಗಾಣ, ಮಧ್ಯಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ ಸೇರಿದಂತೆ ಬಹುತೇಕ ರಾಜ್ಯಗಳು ಸ್ಥಳೀಯರಿಗೆ ಉದ್ಯೋಗ ಸಿಗುವ ಹಾಗೆ ಕಾನೂನು ಮಾಡಿಕೊಂಡು ಜಾರಿಗೊಳಿಸಿವೆ. ಈ ಕೆಲಸ ಕರ್ನಾಟಕದಲ್ಲಿ ಯಾಕೆ ಇಲ್ಲ? ನಮ್ಮ ಸರಕಾರ ಇದರ ಬಗ್ಗೆ ಗಮನ ಹರಿಸಬೇಕು. ಡಾ. ಸರೋಜಿನಿ ಮಹಿಷಿ ವರದಿ ಜಾರಿಯಾಗಿ ಐವತ್ತು ವರ್ಷ ಸಂದಿದೆ. ಆದರೆ ಅದು ಸರಿಯಾಗಿ ಅನುಷ್ಠಾನವಾಗಲೇ ಇಲ್ಲ. ಆಳುವ ಸರ್ಕಾರಗಳು ಮನಸು ಮಾಡಿದ್ದರೆ ಕರ್ನಾಟಕದ ಉದ್ಯೋಗಗಳು ಕನ್ನಡಿಗರಿಗೇ ಸಿಗುತ್ತಿದ್ದವು. ಆದರೆ ಸರ್ಕಾರಗಳ ನಿರ್ಲಕ್ಷ್ಯದಿಂದ ಇವತ್ತು ನಮ್ಮ ರಾಜ್ಯದ ಯುವಕರು ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಕರ್ನಾಟಕದ ನೆಲದಲ್ಲಿ ಕನ್ನಡಿಗರಿಗೆ ಉದ್ಯೋಗ ಕೊಡಿ ಎಂದು ಚಳವಳಿ ಮಾಡುವಂತಹ ಸ್ಥಿತಿಗೆ ಸರಕಾರಗಳು ತಂದಿರುವುದು ನಾಚಿಕೆಗೇಡು. ಕನ್ನಡಿಗರು ಶಾಂತಿಪ್ರಿಯರು ಅದಕ್ಕಾಗಿಯೇ ನಮ್ಮ ಮೇಲೆ ಅನ್ಯರು ಸವಾರಿ ಮಾಡುತ್ತಿದ್ದಾರೆ. ಉದಾಹರಣೆಗೆ ಇತ್ತೀಚೆಗೆ ಕೆಪಿಟಿಸಿಎಲ್ ಹೊರ ರಾಜ್ಯದ ಜನತೆಗೆ ಉದ್ಯೋಗ ಅವಕಾಶ ನೀಡಿದೆ. ಇನ್ನೂ ಮುಂದಾದರು ರಾಜ್ಯ ಸರ್ಕಾರ ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುವಂತೆ ಮಾಡಲಿ.


-ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸಂಕಷ್ಟದಲ್ಲಿ ಸಾಂತ್ವನವೇ ಮಹಾಶಕ್ತಿ....



> ನಾವು ತೊಂದರೆಗೆ ಸಿಲುಕಿದಾಗ ನಮಗೆ ಸಾಂತ್ವನ ಹೇಳುವವರೂ ಬೇಕಾಗುತ್ತಾರೆ. ನಾವು ಅನಾರೋಗ್ಯಪೀಡಿತರಾದಾಗ, ಆಸ್ಪತ್ರೆ ಸೇರಿದಾಗ, ಶಸ್ತ್ರಚಿಕಿತ್ಸೆಗೆ ಒಳಗಾದಾಗ ನಮ್ಮ ಮೇಲೆ ಔಷಧಿ ಮಾತ್ರೆಗಳಿಗಿಂತ ಸಾಂತ್ವನದ ಮಾತುಗಳು ಹೆಚ್ಚು ಪರಿಣಾಮ ಕಾರಿಯಾಗಿ ಕೆಲಸ ಮಾಡುತ್ತವೆ. ನಿನಗೆ ಏನೂ ಆಗುವುದಿಲ್ಲ. ಕೆಲವೇ ದಿನಗಳಲ್ಲಿ ನೀನು ಮೊದಲಿನಂತೆಯೇ ಆಗುತ್ತೀಯೇ ಎಂದು ಹೇಳುವವರ ಮಾತುಗಳು ರೋಗಿಯು ಬೇಗ ಗುಣಮುಖನಾಗಲು ಸಹಕರಿಸುತ್ತದೆ. ರೋಗಿಯು ಶ್ರೀಮಂತನಾಗಿರಬಹುದು, ಐಷಾರಾಮಿ ಸೌಲಭ್ಯದ ಆಸ್ಪತ್ರೆಗೆ ದಾಖಲಾಗಿರಬಹುದು, ಆದರೆ ಅವನಿಗೆ ಸಾಂತ್ವನ ಹೇಳುವ, ಧೈರ್ಯ ತುಂಬುವವರು ಇಲ್ಲದಿದ್ದರೆ, ಅಂತಹವರು ಹೆಚ್ಚು ದಿನ ಆಸ್ಪತ್ರೆಗಳಲ್ಲೇ ಇರಬೇಕಾಗುತ್ತದೆ. ಅಲ್ಲಿ ಒಂಟಿತನ ಕಾಡಲಾರಂಭಿಸುತ್ತದೆ. ಆಗ ಹಣಕ್ಕಿಂತ ಜನರು ಮುಖ್ಯ ಎಂಬುದರ ಅರಿವಾಗುತ್ತದೆ.

ಇತ್ತೀಚೆಗೆ ಕಳ್ಳತನ ಹಾಗೂ ದರೋಡೆ ಪ್ರಕರಣಗಳೂ ಹೆಚ್ಚಾಗುತ್ತಿವೆ. ಕಳ್ಳತನ ಇಲ್ಲವೇ ದರೋಡೆ ಮಾಡುವವರಿಗೆ ತಾವು ಸಿಕ್ಕಿಹಾಕಿ ಕೊಂಡರೆ ಶಿಕ್ಷೆಯಾಗುತ್ತದೆ ಎಂದು ತಿಳಿದಿದ್ದರೂ ಈ ಹಾವಳಿ ಹೆಚ್ಚಾಗುತ್ತಿದೆ. ಆತ್ಮಹತ್ಯೆಯಿಂದ ಏನನ್ನೂ ಸಾಧಿಸಲಾಗದು ಎಂಬುದೂ ತಿಳಿದಿರುತ್ತದೆ. ಆದರೂ ಇಂತಹ ಕೃತ್ಯಕ್ಕೆ ಇಳಿಯುತ್ತಾರೆ. ಕೆಲವು ಸಲ, ಒಮ್ಮೆ ತಪ್ಪು ಮಾಡಿದಾಗ ಸಿಕ್ಕಿಹಾಕಿಕೊಳ್ಳದಿದ್ದರೆ, ನಾನು ಬುದ್ಧಿವಂತ. ಆದ್ದರಿಂದ ನಾನು ಸಿಕ್ಕಿಕೊಳ್ಳುವುದಿಲ್ಲ. ಆದ್ದರಿಂದ ನಾನು ಮತ್ತೆ ತಪ್ಪು ಮಾಡಬಹುದು ಎಂಬ ಮನೋಭಾವ ಸಹಜವಾಗಿ ಮೂಡುತ್ತದೆ. ಅಂತಹವರು ಮತ್ತೊಂದು ತಪ್ಪಿಗೆ ಕೈಹಾಕುತ್ತಾರೆ. ಆಗಲೂ ಸಿಕ್ಕಿಬೀಳದಿದ್ದಾಗ ಮತ್ತೊಂದು ಕೃತ್ಯದೆಡೆಗೆ ಮನಸ್ಸು ಸೆಳೆಯುತ್ತದೆ. ಆದರೆ ಮನದಲ್ಲಿ ನಾನು ಬುದ್ಧಿವಂತ ಎಂಬ ಅಹಂಭಾವ ಮೂಡಿದಾಗ ಆಗುವ ತಪ್ಪಿನಂತೆ ಮತ್ತೊಂದು ಕೃತ್ಯಕ್ಕೆ ಕೈಹಾಕಿದಾಗ ಸಿಕ್ಕಿಬೀಳುತ್ತಾರೆ. ಆಗ ಹಿಂದೆ ಮಾಡಿದ ತಪ್ಪುಗಳು ಸೇರಿ ದೊಡ್ಡದಾದ ಶಿಕ್ಷೆಯೇ ಆಗುತ್ತದೆ.

ಇದೇ ರೀತಿ ನಾವು ಕೆಲವು ಸಲ ತಪ್ಪು ಮಾಡುತ್ತೇವೆ. ಆದರೆ ಅದು ಯಾರಿಗೂ ತಿಳಿಯದು ಎಂದು ಭಾವಿಸಿ ಮತ್ತೊಂದು ಸಲ ತಪ್ಪಿಗೆ ಕೈಹಾಕಿದರೆ ಸಿಕ್ಕಿಬೀಳುತ್ತೇವೆ. ಇದು ಹಲವು ಸಲ ಕುಟುಂಬದಲ್ಲೂ ಸಂಭವಿಸುವುದುಂಟು. ಸಿಕ್ಕಿಕೊಂಡಾಗ ಇಡೀ ಕುಟುಂಬದವರ ಕೋಪಕ್ಕೆ ಕಾರಣವಾಗಬೇಕಾಗುತ್ತದೆ. ಆಗ ನಾನು ಏಕೆ ಹೀಗೆ ಮಾಡಿಕೊಂಡೆ ಎನ್ನಿಸುತ್ತದೆ. ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ ಎಂಬಂತೆ ನಂತರ ನಾವು ಏನೇ ಪಶ್ಚಾತ್ತಾಪಪಟ್ಟರೂ ಕಾಲ ಮಿಂಚಿರುತ್ತದೆ. ಅಕಸ್ಮಾತ್ ಕುಟುಂಬದವರು ನಮ್ಮನ್ನು ಕ್ಷಮಿಸಿದರೂ ಅವರಿಗೆ ನಮ್ಮ ಬಗ್ಗೆ ಮೊದಲಿದ್ದ ಅಭಿಮಾನ ಕಡಿಮೆಯಾಗಿರುತ್ತದೆ.

ಮಕ್ಕಳು ಶಾಲೆಯಲ್ಲಿ ಓದುವಾಗ ಹುಡುಗಾಟಕ್ಕೆ ಪಕ್ಕದವರ ಪೆನ್ಸಿಲ್, ಪೆನ್ ಕದಿಯುತ್ತಾರೆ. ಅದು ಕದಿಯುವುದು ಎಂದು ಅಲ್ಲದಿದ್ದರೂ ಹುಡುಗಾಟಿಕೆಯೂ ಆಗಿರಬಹುದು. ಅದು ಯಾರಿಗೂ ಗೊತ್ತಾಗಲಿಲ್ಲ, ತನಗೆ ಶಿಕ್ಷೆಯಾಗಲಿಲ್ಲ ಎಂದಾದಾಗ ಮತ್ತೆ ಮತ್ತೆ ಇತರರ ಸಾಮಗ್ರಿಗಳನ್ನು ಕದಿಯುವುದು ಆರಂಭವಾಗುತ್ತದೆ. ಆಗ ಅದು ಹುಡುಗಾಟ ಎನ್ನಿಸುವುದಿಲ್ಲ, ಬದಲಾಗಿ ಕಳ್ಳತನ ಎನ್ನಿಸಿಕೊಳ್ಳುತ್ತದೆ. ಒಮ್ಮೆ ಸಿಕ್ಕಿಕೊಂಡರೆ ತನ್ನ ಸಹಪಾಠಿಗಳೇ ತನ್ನನ್ನು ನಿಕೃಷ್ಟವಾಗಿ ನೋಡುತ್ತಾರೆ ಎಂದು ನಂತರವೇ ಅರಿವಾಗುತ್ತದೆ. ಆದರೆ ಅಷ್ಟರಲ್ಲಿ ಕಾಲ ಮಿಂಚಿರುತ್ತದೆ.

ಹೀಗಾಗಬಾರದು ಎಂದರೆ ನಮಗೆ ಬುದ್ದಿ ಹೇಳುವವರು ಬೇಕಾಗುತ್ತಾರೆ. ಅದೂ ತಾನು ವಿಶ್ವಾಸವಿಟ್ಟುಕೊಂಡಂತಹವರು ಹೇಳುವಂತಾಗಬೇಕು. ಮನೆಯಲ್ಲಿ ಕಿರಿಯರು ಜಗಳವಾಡಿ ಕೊಂಡರೆ ಹಿರಿಯರು ಅವರಿಗೆ ಬುದ್ದಿ ಹೇಳಬಹುದು. ಆದರೆ ಹಿರಿಯರೇ ಆ ರೀತಿ ಮಾಡಿದರೆ, ಅವರಿಗೆ ಬುದ್ದಿ ಹೇಳುವವರು ಯಾರೂ ಇಲ್ಲದಿದ್ದರೆ, ಅಂತಹ ಮನೆ ಅದ್ವಾನದ ತಾಣವಾಗುತ್ತದೆ ಹಾಗೂ ಆ ಮನೆಯ ಮಕ್ಕಳು ಸೂತ್ರವಿಲ್ಲದ ಗಾಳಿಪಟದಂತೆ ಎತ್ತೆತ್ತಲೋ ಸುತ್ತುವಂತಾಗುತ್ತದೆ. ಅಡ್ಡದಾರಿಯನ್ನೂ ಹಿಡಿಯಬಹುದು. ಹಾಗಾಗಿ ನಮಗೆ ಬುದ್ಧಿ ಹೇಳುವವರು ಬೇಕಾಗುತ್ತಾರೆ.

ಅದೇ ರೀತಿ ನಾವು ತೊಂದರೆಗೆ ಸಿಲುಕಿದಾಗ ನಮಗೆ ಸಾಂತ್ವನ ಹೇಳುವವರೂ ಬೇಕಾಗುತ್ತಾರೆ. ಅನಾರೋಗ್ಯಪೀಡಿತರಾದಾಗ, ಆಸ್ಪತ್ರೆ ಸೇರಿದಾಗ, ಶಸ್ತ್ರಚಿಕಿತ್ಸೆಗೆ ಒಳಗಾದಾಗ ನಮಗೆ ಔಷಧಿ ಮಾತ್ರೆಗಳಿಗಿಂತ ಸಾಂತ್ವನದ ಮಾತುಗಳು ಚೈತನ್ಯಕಾರಿಯಾಗಿ ಕೆಲಸ ಮಾಡುತ್ತವೆ. ನಿನಗೆ ಏನೂ ಆಗುವುದಿಲ್ಲ, ಕೆಲವೇ ದಿನಗಳಲ್ಲಿ ನೀನು ಮೊದಲಿನಂತೆಯೇ ಆಗುತ್ತೀಯೇ ಎಂದು ಹೇಳುವವರ ಮಾತುಗಳು ರೋಗಿಯಲ್ಲಿ ಆತ್ಮಸ್ಥೈರ್ಯ ತುಂಬಿ ಬೇಗ ಗುಣಮುಖನಾಗಲು ಸಹಕರಿಸುತ್ತದೆ. ರೋಗಿಯು ಶ್ರೀಮಂತನಾಗಿರ ಬಹುದು, ಐಷಾರಾಮಿ ಹೈಟೆಕ್ ಆಸ್ಪತ್ರೆಗೆ ದಾಖಲಾಗಿರ ಬಹುದು. ಅವನಿಗೆ ಸಾಂತ್ವನ ಹೇಳುವ, ಧೈರ್ಯ ತುಂಬುವ ವರು ಇಲ್ಲದಿದ್ದರೆ, ಅಂತಹವರು ತ್ವರಿತವಾಗಿ ಚೇತರಿಸಿ ಕೊಳ್ಳದೇ ಆಸ್ಪತ್ರೆಗಳಲ್ಲೇ ಕಳೆಯಬೇಕಾಗುತ್ತದೆ. ಒಂಟಿ ತನ ಕಾಡಲಾರಂಭಿಸುತ್ತದೆ. ಆಗ ಹಣಕ್ಕಿಂತ ಜನರು ಮುಖ್ಯ ಎಂಬುದರ ಅರಿವಾಗುತ್ತದೆ.

ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ನಪಾಸಾದಾಗ ಅವರ ಆತ್ಮಸ್ಥೈರ್ಯ ಕುಸಿಯುತ್ತದೆ. ಮನಸ್ಸು ದುರ್ಬಲವಾಗುತ್ತದೆ. ಜೀವನವೇ ಬೇಡ, ಆತ್ಮಹತ್ಯೆ ಮಾಡಿಕೊಳ್ಳೋಣ ಎನ್ನಿಸುತ್ತದೆ. ಅಂತಹ ಸಮಯದಲ್ಲಿ ನಿಕೃಷ್ಟವಾಗಿ ಮಾತನಾಡಿದರೆ ದುರ್ಬಲ ಮನಸ್ಸು ಜೀವನ ಅಂತ್ಯಗೊಳಿಸುವ ಕಡೆಗೆ ವಾಲುತ್ತದೆ. ಇದಕ್ಕೆ ಬದಲಾಗಿ ಆದದ್ದು ಆಗಿಹೋಯಿತು. ಈಗ ಒಂದು ಚಾಲೆಂಜ್ ತೆಗೆದುಕೊಂಡು ಮತ್ತೆ ಪ್ರಯತ್ನ ಮಾಡು, ಖಂಡಿತಾ ಯಶಸ್ವಿಯಾಗುತ್ತೀಯಾ ಎಂದು ಯಾರಾದರೂ ಹೇಳಿದರೆ ಅವರಿಗೆ ಚೈತನ್ಯ ಬರುತ್ತದೆ, ಹುಮ್ಮಸ್ಸು ಬರುತ್ತದೆ. ಯುಪಿಎಸ್‌ಸಿ, ಕೆಪಿಎಸ್‌ಸಿಯಂತಹ ಪರೀಕ್ಷೆ ತೆಗೆದುಕೊಳ್ಳುವವರಲ್ಲಿ ಒಂದೇ ಸಲಕ್ಕೆ ಯಶಸ್ಸು ಪಡೆದವರ ಸಂಖ್ಯೆ ಕಡಿಮೆ. ತಾನು ಉತ್ತೀರ್ಣನಾಗಲಿಲ್ಲ ಎಂದಾದಾಗ ಅವರನ್ನು ಪ್ರೋತ್ಸಾಹಿಸಿ ಮತ್ತೊಮ್ಮೆ ಪರೀಕ್ಷೆ ಬರಿ, ಆಗಲೂ ಆಗದಿದ್ದರೆ ಮತ್ತೆ ಬರಿ. ನಿನಗೆ ಯಶಸ್ಸು ಸಿಗುವವರೆಗೂ ಪ್ರಯತ್ನಿಸು ಎಂದು ಯಾರಾದರೂ ಸಾಂತ್ವನ ಹಾಗೂ ಧೈರ್ಯದ ಮಾತು ಹೇಳಿದರೆ ಮುಂದೆ ಅವರು ಯಶಸ್ವಿಯಾಗುತ್ತಾರೆ. ಅಂತಹ ಹಲವಾರು ಪ್ರಕರಣಗಳನ್ನು ನಾವು ಕಂಡಿದ್ದೇವೆ. ಫಲಿತಾಂಶ ಪ್ರಕಟವಾದ ನಂತರ ಯಶಸ್ಸು ಸಾಧಿಸಿದವರನ್ನು ಮಾತನಾಡಿಸಿದರೆ, ಅವರು ಇದೇ ಮಾತು ಹೇಳುತ್ತಾರೆ. ಅವರು ಮರಳಿ ಯತ್ನವಮಾಡು, ಸೋಲೊಪ್ಪಿಕೊಳ್ಳಬೇಡ ಎಂದು ಹೇಳಿದ್ದರಿಂದಲೇ ಇಂದು ನಾನು ಉತ್ತಮ ಶ್ರೇಣಿಯಲ್ಲಿ ಗೆಲುವು ದಾಖಲಿಸಿದ್ದೇನೆ ಎಂದೇ ಹೇಳುತ್ತಾರೆ.

ಈ ರೀತಿಯ ಧೈರ್ಯ ಹೇಳುವವರು ಅಥವಾ ಸಾಂತ್ವನ ಹೇಳುವವರು ಅವರ ಜೀವನದಲ್ಲೂ ಅಂತಹುದೇ ತೊಂದರೆಗೆ ಸಿಲುಕಿ ಅದರಿಂದ ಹೊರ ಬಂದಿದ್ದರೆ ಅಂತಹವರ ಮಾತು ಹೆಚ್ಚು ಪ್ರಭಾವ ಬೀರುತ್ತದೆ. ನಮ್ಮಲ್ಲಿ ಅನೇಕ ರೀತಿಯ ಸಹಾಯವಾಣಿಗಳು ಇರುತ್ತವೆ. ನಿಮಗೆ ತೊಂದರೆ ಇದೆಯೇ, ನಮ್ಮನ್ನು ಸಂಪರ್ಕಿಸಿ ಎಂದು ಕೆಲವು ಸಂಸ್ಥೆಗಳು ಜಾಹಿರಾತನ್ನೂ ನೀಡಿರುತ್ತವೆ. ಅದರಲ್ಲೂ ನನಗೆ ಇನ್ನು ಯಾವುದೇ ದಾರಿ ಉಳಿದಿಲ್ಲ, ಸಾವೇ ಇದಕ್ಕೆ ಪರಿಹಾರ ಎಂದುಕೊಳ್ಳುವವರಿಗೂ ಧೈರ್ಯ ತುಂಬುವ ಇಂತಹ ಸಹಾಯವಾಣಿಗಳು ಇರುತ್ತವೆ. ನಾವು ನಿರಾಸೆಯಲ್ಲಿ ಸಿಲುಕಿದಾಗ ನಮ್ಮ ನೋವನ್ನು ಸಹಾನುಭೂತಿಯಿಂದ ಕೇಳುವವರು ಸಿಕ್ಕಾಗಲೂ ನಮ್ಮ ಸಮಸ್ಯೆಗೆ ಅರ್ಧ ಪರಿಹಾರ ಸಿಕ್ಕಂತಾಗುತ್ತದೆ. ಈ ಬಗ್ಗೆ ನಾವು ಹಲವಾರು ಚಲನಚಿತ್ರಗಳನ್ನೂ ನೋಡಿರುತ್ತೇವೆ. ಸಾವು ಬಯಸಿದವರಿಗೆ ಹೇಗೂ ಸಾಯಲು ನಿರ್ಧರಿಸಿದ್ದೀರಿ, ಈ ಒಂದು ಪ್ರಯತ್ನ ಮಾಡಿ ಅದೂ ವಿಫಲವಾದರೆ ನಂತರ ನಿಮಗೆ ಅನಿಸಿದಂತೆ ಮಾಡಿ ಎಂದು ಹೇಳಿ ಮಾರ್ಗದರ್ಶನ ಮಾಡುವ ಸನ್ನಿವೇಶ ಹಾಗೂ ಆ ವ್ಯಕ್ತಿ ಹಾಗೇ ಮಾಡಿದಾಗ ತನ್ನ ಮೊದಲ ನಿರ್ಧಾರದಿಂದ ಹೊರ ಬಂದು ಮಹಾನ್ ಸಾಧನೆ ಮಾಡಿದ ಹಲವು ಸನ್ನಿವೇಶ ಕಂಡಿದ್ದೇವೆ. ಅಂತಹ ಹಲವು ಕಥೆಗಳನ್ನೂ ಕೇಳಿದ್ದೇವೆ. ಆಗ ಅನ್ನಿಸುವುದು ನಮಗೆ ಸೂಕ್ತ ಮಾರ್ಗದರ್ಶಕರು ಹಾಗೂ ಸೂಕ್ತವಾಗಿ ಸಾಂತ್ವನ ಹೇಳುವವರು ಬೇಕಾಗುತ್ತಾರೆ ಎಂಬುದು.

ಈ ಸಂದರ್ಭಕ್ಕೆ ಸೂಕ್ತವಾದ ಒಂದು ಕಥೆ ನೆನಪಾಗುತ್ತದೆ. ಒಮ್ಮೆ ಒಂದು ದೇಶದಲ್ಲಿ ದಿನಪತ್ರಿಕೆಗಳಲ್ಲಿ ಪದೇಪದೆ ಒಂದು ಜಾಹಿರಾತು ಪ್ರಕಟವಾಗುತ್ತಿತ್ತು. ಅದರಲ್ಲಿ ನೀವು ಸಾಯಬೇಕೆಂದುಕೊಳ್ಳುತ್ತಿದ್ದೀರಾ? ನಿಮ್ಮನ್ನು ಖಿನ್ನತೆ, ಹತಾಶೆ, ಜಿಗುಪ್ಸೆಗಳು ಕಾಡುತ್ತಿವೆಯಾ? ನಿಮ್ಮ ಸಮಸ್ಯೆಯನ್ನು ನಮ್ಮೊಂದಿಗೆ ಹೇಳಿಕೊಳ್ಳಬಹುದು. ನನ್ನ ದೂರವಾಣಿ ಸಂಖ್ಯೆ ಇದು ಎಂದು ಅದರಲ್ಲಿ ನಮೂದಿಸಲಾಗುತ್ತಿತ್ತು ಇಂತಹ ಜಾಹಿರಾತು ಕಂಡ ಜನರಿಗೆ ಅಶ್ಚರ್ಯ, ಹೀಗೂ ಸಾಧ್ಯವೇ ಎಂದು. ಆ ಜಾಹಿರಾತು ನೋಡಿದ ಅಂತಹ ಹತಾಶ ಭಾವದ ಹಲವಾರು ಜನರು ಕರೆ ಮಾಡುತ್ತಿದ್ದರು. ಅವರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದರು. ಅದಕ್ಕೆ ಒಬ್ಬ ಮಹಿಳೆ ಉತ್ತರ ಕೊಡುತ್ತಿದ್ದಳು. ಆಕೆ ಇವರ ಸಮಸ್ಯೆಯನ್ನು ಅತ್ಯಂತ ತಾಳ್ಮೆಯಿಂದ ಕೇಳಿಸಿ ಕೊಂಡು ತನಗೆ ತೋಚಿದ ಸಮಾಧಾನ ಹೇಳು ತ್ತಿದ್ದಳು. ಯಾರಾದರೂ ಕ್ಯಾನ್ಸರ್‌ನಿಂದ ಬಳಲುತ್ತಿದ್ದೇನೆ, ಅದರಿಂದ ನಿರಾಶೆಯಾಗಿದೆ ಎಂದರೆ 'ಪ್ರಪಂಚದಲ್ಲಿ ಸಾವಿರಾರು ಜನರ ಪೈಕಿ ಒಬ್ಬರೋ ಇಬ್ಬರೋ ಕ್ಯಾನ್ಸರ್ ಖಾಯಿಲೆಗೆ ತುತ್ತಾಗುತ್ತಾರೆ. ಆದರೆ ಸಕಾಲ ದಲ್ಲಿ ಸೂಕ್ತ ಚಿಕಿತ್ಸೆ ಪಡೆದವರು ಬಹಳಷ್ಟು ವರ್ಷ ಬದುಕಿದ್ದಾರೆ. ಕ್ಯಾನ್ಸರ್ ಖಾಯಿಲೆಗೆ ಇಂತಹ ಸ್ಥಳಗಳಲ್ಲಿ ಚಿಕಿತ್ಸೆ ದೊರಕುತ್ತದೆ. ಪ್ರಯತ್ನಿಸಿ' ಎಂದು ಅದರ ವಿವರ ನೀಡುತ್ತಿದ್ದಳು. ಅದೇ ರೀತಿ ತನಗೆ ಹಣಕಾಸಿನ ತೊಂದರೆ ಎಂದವರಿಗೆ 'ಪ್ರಪಂಚದಲ್ಲಿ ಲಕ್ಷ ಜನರ ಪೈಕಿ ಕೇವಲ ಮೂರು ಜನರು ಮಾತ್ರ ಸಿರಿವಂತರು. ಉಳಿದವರಿಗೆ ಆರ್ಥಿಕ ಸಮಸ್ಯೆ ಇದ್ದೇ ಇರುತ್ತದೆ. ನೀವು ನಿರ್ಗತಿಕರಲ್ಲ, ನೀವೇಕೆ ಹತಾಶರಾಗಬೇಕು?' ಎಂದು ಸಮಾಧಾನ ಹೇಳುತ್ತಿದ್ದಳು. ಇದು ಕೇಳಿದವರಿಗೆ ಸಮಾಧಾನ ನೀಡುತ್ತಿತ್ತು.

ಇದೇ ರೀತಿ ಕೌಟುಂಬಿಕ ಸಮಸ್ಯೆಗಳು, ನಿರುದ್ಯೋಗದ ಸಮಸ್ಯೆ ಇತ್ಯಾದಿಗಳ ಬಗ್ಗೆ ಜನರು ಕರೆ ಮಾಡಿದಾಗ ಆಕೆ ಸೂಕ್ತ ಸಾಂತ್ವನ ಹೇಳುತ್ತಿದ್ದಳು. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದರು ಎಂದೇನಿಲ್ಲ. ಕೆಲವರಂತೂ 'ಸುಮ್ಮನೆ ಹೇಳುವುದು, ಸಹಾನುಭೂತಿ ತೋರಿಸುವುದು ಸುಲಭ. ಆದರೆ ಜೀವನ ಹಾಗಿರುವುದಿಲ್ಲ' ಎಂದು ಹೇಳಿದಾಗ ಆಕೆ ತನ್ನದೇ ದುರಂತ ಹೇಳುತ್ತಿದ್ದಳು. ಆಕೆ ಮೊದಲಿನಿಂದಲೂ ಸಿಡುಕು ಸ್ವಭಾವದವಳು. ಇದರಿಂದಾಗಿ ಆಕೆಯೊಡನೆ ಹೆಚ್ಚು ಸ್ನೇಹಿತರು ಸೇರುತ್ತಿರಲಿಲ್ಲ. ಇದರಿಂದ ಕ್ರಮೇಣ ಆಕೆಗೆ ಏಕಾಂತ ಕಾಡತೊಡಗಿತು. ಖಿನ್ನತೆ ಆವರಿಸಿತು. ಕೊನೆಗೆ ತನ್ನ ಜೀವನ ಕೊನೆಗಾಣಿಸಲು ತೀರ್ಮಾನಿಸಿ, ಎತ್ತರದ ಕಟ್ಟಡ ಏರಿ ಅಲ್ಲಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದಳು. ಆದರೆ ದುರದೃಷ್ಟ ಆಕೆ ಸಾಯಲಿಲ್ಲ. ಆದರೆ ಬಿದ್ದ ರಭಸಕ್ಕೆ ಆಕೆಯ ದೇಹದ ಕೆಳಭಾಗದ ಚಲನಾ ಶಕ್ತಿಯೇ ಕಳೆದುಹೋಯಿತು. ಮುಂದೆ ಗಾಲಿಚಕ್ರವೇ ಅವಳಿಗೆ ಆಧಾರವಾಯಿತು. ತನ್ನ ಪರಿಸ್ಥಿತಿಯ ಬಗ್ಗೆ ಯೋಚಿಸಿ ದೇವರಿಗೆ ಛೀಮಾರಿ ಹಾಕುತ್ತಿದ್ದಳು. ನನ್ನ ವಿಷಯದಲ್ಲಿ ನೀನೇಕೆ ಇಷ್ಟು ನಿಷ್ಕರುಣಿ ಎಂದೆಲ್ಲಾ ನಿಂದಿಸುತ್ತಿದ್ದಳು. ಒಮ್ಮೆ ಆಕೆಯ ಕನಸಲ್ಲಿ ಕಾಣಿಸಿಕೊಂಡ ದೇವರು 'ನಿನ್ನ ಪರಿಸ್ಥಿತಿಗೆ ನೀನೇ ಕಾರಣಳು, ಆತ್ಮಹತ್ಯೆಗೆ ಮುನ್ನ ನಿನ್ನ ದೇಹ ನೆಟ್ಟಗಿತ್ತು, ಮನಸ್ಸು ಸೊಟ್ಟಗಿತ್ತು. ಈಗ ನಿನ್ನ ಮನಸ್ಸು ನೆಟ್ಟಗಾಗಿದೆ, ಆದರೆ ದೇಹ ಸೊಟ್ಟಗಾಗಿದೆ. ಈಗಲೂ ನೀನು ಪ್ರಯತ್ನಿಸಿದರೆ ಸರಿಯಾದ, ಸಾರ್ಥಕ ಜೀವನ ನಡೆಸಬಹುದು' ಎಂದಂತಾಯಿತು. ಅದು ಅವಳ ಮನಸ್ಸಿಗೆ ನಾಟಿತು. ಆಕೆ ತನ್ನ ಮನೋಭಾವ ಬದಲಿಸಿಕೊಂಡಳು. ತನ್ನ ಹಾಗೆಯೇ ಸ್ವಭಾವದ ವೈಪರಿತ್ಯದಿಂದ ಬಳಲುವವರಿಗಾಗಿ ತಾನು ಏಕೆ ಸಹಾಯ ಮಾಡಬಾರದು ಎಂದು ಯೋಚಿಸಿದಳು. ಕನಿಷ್ಠ ಅವರ ಸಮಸ್ಯೆ ಏನೆಂದು ಸಹಾನುಭೂತಿಯಿಂದ ಕೇಳಿ ತನಗೆ ತೋಚಿದಂತಹ ಪರಿಹಾರವನ್ನಾದರೂ ಹೇಳಬಹುದಲ್ಲಾ ಎಂದು ಯೋಚಿಸಿದಳು. ಅದರ ಫಲವೇ ಆ ಜಾಹೀರಾತು. ಇದನ್ನು ಕೇಳಿದವರು ಸಮಾಧಾನಗೊಳ್ಳುತ್ತಿದ್ದರು, ಆಕೆಯ ಮಾತಿನಲ್ಲಿ ವಿಶ್ವಾಸ ತೋರಿಸುತ್ತಿದ್ದರು. ಆಕೆ ಎಲ್ಲರಿಗೂ ತನಗೆ ತೋಚಿದ ಸಮಾಧಾನ ಹೇಳುತ್ತಿದ್ದಳು. ಆ ಬಗ್ಗೆ ಆಕೆ ನಿರಂತರವಾಗಿ ಚಿಂತಿಸುತ್ತಿದ್ದಳು. ವಿಶೇಷ ಎಂದರೆ ಬಹುತೇಕರ ಸಮಸ್ಯೆಗಳು ಈಕೆಯ ಸಮಾಧಾನದಿಂದ ಆಲಿಸುತ್ತಿದ್ದುದರಲ್ಲಿಯೇ ಪರಿಹಾರವಾಗುತ್ತಿತ್ತು.

ಈ ರೀತಿಯಲ್ಲಿ ನಮಗೆ ಸಾಂತ್ವನ ಹೇಳುವವರು, ಬುದ್ಧಿ ಹೇಳುವವರು ಅಗತ್ಯವಾಗಿ ಬೇಕಾಗುತ್ತಾರೆ. ತಾವೇ ಸಮಸ್ಯೆಯಲ್ಲಿ ಸಿಲುಕಿದವರು ತಮ್ಮ ಸಮಸ್ಯೆಯಿಂದ ತಾವು ಹೊರಬರಲಾಗದಿದ್ದರೂ, ಮತ್ತೊಬ್ಬರ ಸಮಸ್ಯೆಯನ್ನು ಶಾಂತವಾಗಿ ಕೇಳಿ, ಪರಿಹಾರ ಸೂಚಿಸಬಹುದು. ಆದರೆ ಅಂತಹವರ ಮಾತು ಕೇಳುವ ಮನಸ್ಸು ನಮ್ಮದಾಗಿರಬೇಕು ಅಷ್ಟೇ.


ಮುಡಾ ಹಗರಣ ಸಿಬಿಐ ತನಿಖೆಗೆ ಒಪ್ಪಿಸಿದರೆ ಸತ್ಯ ಹೊರ ಬರಲಿದೆ

● ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹ ● ಹಾಲಿ ತನಿಖೆಯಲ್ಲಿ ಮುಖ್ಯಮಂತ್ರಿಯವರ ಆರೋಪಿ ಮಾಡಲಾಗದು

ಬೆಂಗಳೂರು, ಜು.4(ಕೆಎಂಶಿ)- ಮೈಸೂರಿನ ಮುಡಾದಲ್ಲಿ ನಡೆದ ನಿವೇಶನ ಹಂಚಿಕೆ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸುವುದರಿಂದ ಸತ್ಯ ಹೊರ ಬರಲಿದೆ ಎಂದು ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಭೂಸ್ವಾಧೀನ ಮಾಡಿಕೊಂಡು ನಂತರ ಡಿನೋಟಿಫೈ ಮಾಡಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಅರ್ಜಿ ಸಲ್ಲಿಸಿದಾಗ ಮುಡಾ ಅಧ್ಯಕ್ಷ ಮತ್ತು ಆಯುಕ್ತರು 50:50ರ ಅನುಪಾತದಲ್ಲಿ ನಿವೇಶನ ನೀಡಿದ್ದು, ಇದರಿಂದ ಮುಡಾಗೆ ನಷ್ಟವಾಗಿದೆ ಎಂದರು.

ನಿವೇಶನಗಳನ್ನು 50:50ರ ಅನುಪಾತದಲ್ಲಿ ಹಂಚಿಕೆ ಮಾಡುವುದಾದರೆ ಸರ್ಕಾರದ ಒಪ್ಪಿಗೆ ಪಡೆಯಬೇಕು. ಆದರೆ, ಅಕ್ರಮವಾಗಿ ಅವರೇ ಬೇಕು ಬೇಕಾದಂತೆ ಹಂಚಿಕೆ ಮಾಡಿಕೊಂಡಿದ್ದಾರೆ.



ಆರ್.ಅಶೋಕ್

ಉದಾಹರಣೆಗೆ ದಾಸರಹಳ್ಳಿಯಲ್ಲಿ ಭೂಸ್ವಾಧೀನವಾದರೆ ಎಂ.ಜಿ.ರಸ್ತೆಯ ಜಮೀನು ಕೊಟ್ಟಂತಾಗಿದೆ. ಈ ಹಗರಣದ ತನಿಖೆಯನ್ನು ಸರ್ಕಾರದ ಸಂಸ್ಥೆಗೆ ನೀಡಿದರೆ ಮುಖ್ಯಮಂತ್ರಿ ಅವರನ್ನು ಆರೋಪಿ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಿಬಿಐ ತನಿಖೆಗೆ ವಹಿಸಲಿ ಎಂದು ಅಶೋಕ್ ಒತ್ತಾಯಿಸಿದರು.

ಡಿನೋಟಿಫೈ ಭೂಮಿ ಬದಲಿಗೆ ಪ್ರತಿಷ್ಠಿತ ಸ್ಥಳದಲ್ಲಿ ಜಾಗ ನೀಡಲಾಗಿದೆ, ಡಿನೋಟಿಫೈ ಜಮೀನು ಅಭಿವೃದ್ಧಿ ಮಾಡಲಾಗಿದೆ ಎನ್ನುತ್ತಿದ್ದಾರೆ. ಆದರೆ, ಭೂ ಮಾಲೀಕರು ಏಕೆ ಸುಮ್ಮನಿದ್ದರು ಎಂಬ ಅನುಮಾನ ಬರುತ್ತದೆ. ನಾನು, ಈ ಕುರಿತು ದಾಖಲೆಗಳನ್ನು ಕೇಳಿದ್ದರೂ ಏನೂ ಸಿಕ್ಕಿಲ್ಲ. ಇಂತಹ ವಹಿವಾಟುಗಳಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟವಾಗಿದೆ, ಮೈಸೂರು ಜಿಲ್ಲಾಧಿಕಾರಿ ಹಲವಾರು ಬಾರಿ ಮುಡಾಗೆ ಪತ್ರ ಬರೆದು ಸ್ಪಷ್ಟನೆ ಕೇಳಿದ್ದಾರೆ, ಮುಡಾದಿಂದ ಉತ್ತರ ದೊರೆತಿಲ್ಲ. ಎಲ್ಲರೂ ಸೇರಿ ಗ್ಯಾಂಗ್ ಮಾಡಿಕೊಂಡಿದ್ದಾರೆ, ಇದರ ಹಿಂದೆ ದೊಡ್ಡ ಜಾಲವಿದೆ ಎಂದರು.

ಇದು ಬಿಜೆಪಿ ಕಾಲದಲ್ಲೇ ನಡೆದಿದ್ದು ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಯಾರೇ ಆಗಿದ್ದರೂ ಅವರನ್ನು ಮೊದಲು ಬಂಧಿಸಬೇಕು. ಇದಕ್ಕೆ ನಮ್ಮ ಆಕ್ಷೇಪಣೆ ಇಲ್ಲ, ಇದರಲ್ಲಿ ಬಿಜೆಪಿ ಸರ್ಕಾರದ ಯಾವುದೇ ಪಾತ್ರವಿಲ್ಲ. ಈ ನಿವೇಶನ ಮಂಜೂರಾತಿಯನ್ನು ಮೊದಲು ರದ್ದುಪಡಿಸಬೇಕು. ನಿವೇಶನಕ್ಕಾಗಿ 86 ಸಾವಿರ ಮಂದಿ ಅರ್ಜಿ ಸಲ್ಲಿಸಿದ್ದರೂ ಕಾಂಗ್ರೆಸ್ ನಾಯಕರಿಗೆ ಮಾತ್ರ ನಿವೇಶನಗಳು ಸಿಕ್ಕಿವೆ, ಸರ್ಕಾರದ ಆಸ್ತಿಗಳನ್ನು ಯಾರ್‍ಯಾರೋ ಲೂಟಿ ಮಾಡುತ್ತಿದ್ದಾರೆ ಎಂದು ಆರ್.ಅಶೋಕ್ ಆರೋಪಿಸಿದರು.

ಎಲ್‌ಇಡಿ ಹೆಡ್‌ಲೈಟ್ ಅಳವಡಿಕೆ ಮೈಸೂರಿನ 102 ವಾಹನ ಸವಾರರಿಗೆ ದಂಡ



ಮೈಸೂರು, ಜು.4(ಬಿಎಲ್‌ಯು)- ಪೊಲೀಸ್ ಇಲಾಖೆ ನಿರ್ಬಂಧ ಹೇರಿದ್ದರೂ ನಿಯಮ ಉಲ್ಲಂಘಿಸಿ ಹೆಚ್ಚು ಬೆಳಕು ಹೊರ ಹಾಕುವ ಎಲ್‌ಇಡಿ ದೀಪ (ಹೆಡ್‌ಲೈಟ್)ಗಳನ್ನು ಅಳವಡಿಸಿಕೊಂಡಿರುವ ಮೈಸೂರು ನಗರದ 78 ಹಾಗೂ ಜಿಲ್ಲೆಯ 24 ವಾಹನ ಸವಾರರಿಗೆ ದಂಡ ವಿಧಿಸಲಾಗಿದೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ತಮ್ಮ ಎಕ್ಸ್ ಖಾತೆಯಲ್ಲಿ ವಿವರ ನೀಡಿರುವ ಅವರು, ಮೈಸೂರು ಸೇರಿದಂತೆ ರಾಜ್ಯದ ಯಾವ ನಗರ ಹಾಗೂ ಜಿಲ್ಲೆಯಲ್ಲಿ ನಿಯಮ ಉಲ್ಲಂಘಿಸಿದ ಎಷ್ಟು ವಾಹನ ಸವಾರರಿಗೆ ದಂಡ ವಿಧಿಸಲಾಗಿದೆ ಎಂಬ ಮಾಹಿತಿ ನೀಡಿದ್ದಾರೆ. ಮಂಡ್ಯ ಜಿಲ್ಲೆಯ 14 ವಾಹನ ಸವಾರರು, ಚಾಮರಾಜನಗರದ 12 ವಾಹನ ಸವಾರರು, ಹಾಸನ ಜಿಲ್ಲೆಯ 17 ವಾಹನ ಸವಾರರಿಗೆ ದಂಡ ವಿಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಬೆಂಗಳೂರು ನಗರದಲ್ಲಿ ಅತೀ ಹೆಚ್ಚು ಅಂದರೆ 686 ವಾಹನ ಸವಾರರಿಗೆ ದಂಡ ವಿಧಿಸಲಾಗಿದೆ. ಒಟ್ಟಾರೆ ಇಡೀ ಕರ್ನಾಟಕದಲ್ಲಿ 1518 ವಾಹನ ಸವಾರರಿಗೆ ದಂಡ ವಿಧಿಸಲಾಗಿದೆ ಎಂದು ತಿಳಿಸಿದ್ದಾರೆ.


ಹತ್ರಾಸ್ ಕಾಲ್ತುಳಿತ: 'ಭೋಲೆ ಬಾಬಾ'ಗಾಗಿ ಪೊಲೀಸರ ಹುಡುಕಾಟ

ಹತ್ರಾಸ್, ಜು.4- 123 ಜನರ ಸಾವಿಗೆ ಕಾರಣವಾದ ಹತ್ರಾಸ್‌ನಲ್ಲಿ ಸತ್ಸಂಗ ನಡೆಸಿದ ಸ್ವಯಂಘೋಷಿತ ದೇವಮಾನವ 'ಭೋಲೆ ಬಾಬಾ'ಗಾಗಿ ಉತ್ತರ ಪ್ರದೇಶ ಪೊಲೀಸರು ತೀವ್ರ ಹುಡುಕಾಟ ನಡೆಸಿದ್ದು, ಗುರುವಾರ ಮೈನ್‌ಪುರಿಯಲ್ಲಿರುವ ರಾಮ್ ಕುಟೀರ್ ಚಾರಿಟೇಬಲ್ ಟ್ರಸ್ಟ್‌ನಲ್ಲಿ ಶೋಧ ನಡೆಸಿದರು. ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರ್ಮಿಕ ಸಭೆಯ ಸಂಘಟಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ 'ಭೋಲೆ ಬಾಬಾ' ಹೆಸರನ್ನು ಎಫ್‌ಐಆರ್‌ನಲ್ಲಿ ಇನ್ನೂ ಉಲ್ಲೇಖಿಸಿಲ್ಲ. ಮೈನ್‌ಪುರಿಯ ಉಪ ಪೊಲೀಸ್ ವರಿಷ್ಠಾಧಿಕಾರಿ(ಡಿಎಸ್ಪಿ) ಸುನೀಲ್ ಕುಮಾರ್ ಅವರು, ಆಶ್ರಮದೊಳಗೆ ಬಾಬಾ ಪತ್ತೆಯಾಗಿಲ್ಲ ಎಂದು ಹೇಳಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರು ಮಿತ್ರ



ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜುಲೈ 5 ಶುಕ್ರವಾರ 2024
45
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 45 | ಸಂಚಿಕೆ: 80 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ತವರಿಗೆ ಆಗಮಿಸಿದ ವಿಶ್ವ ಚಾಂಪಿಯನ್ನರಿಗೆ ಭವ್ಯ ಸ್ವಾಗತ

ಟೀಂ ಇಂಡಿಯಾದೊಂದಿಗೆ ಸಂತಸ ಹಂಚಿಕೊಂಡ ಪ್ರಧಾನಿ ಮೋದಿ

ನವದೆಹಲಿ, ಜು.4– ವೆಸ್ಟ್‌ಇಂಡೀಸ್ ಹಾಗೂ ಅಮೆರಿಕಾ ಜಂಟಿ ಆತಿಥ್ಯದಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ 17 ವರ್ಷಗಳ ಬಳಿಕ ವಿಶ್ವಕಪ್ ಗೆದ್ದ ರೋಹಿತ್ ಶರ್ಮಾ ನೇತೃತ್ವದ ಟೀಂ ಇಂಡಿಯಾ ಆಟಗಾರರಿಗೆ ನವದೆಹಲಿಯಲ್ಲಿ ಗುರುವಾರ ಬೆಳಗ್ಗೆ ಭವ್ಯ ಸ್ವಾಗತ ಕೋರಲಾಯಿತು. ಇದೇ ವೇಳೆ ಪ್ರಧಾನಿ ಮೋದಿ ತಮ್ಮ ನಿವಾಸದಲ್ಲಿ ಟೀಂ ಇಂಡಿಯಾಗೆ ಆತಿಥ್ಯ ನೀಡಿ, ಸಂಭ್ರಮ ಹಂಚಿಕೊಂಡರು.

ಜೂ.29 ರಂದು ದಕ್ಷಿಣ ಆಫ್ರಿಕಾ ಎದುರು ಬಾರ್ಬಡೋಸ್‌ನ ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ 7 ರನ್‌ಗಳ ಜಯ ಸಾಧಿಸಿ 2ನೇ ಬಾರಿಗೆ ಟಿ20 ವಿಶ್ವಕಪ್ ಗೆದ್ದಿತ್ತು. ದ್ವೀಪರಾಷ್ಟ್ರ ವೆಸ್ಟ್ ಇಂಡೀಸ್‌ನಲ್ಲಿ ಎದ್ದಿದ್ದ ಬರ್ಲಿ ಚಂಡಮಾರುತದ ಪ್ರತಿಕೂಲ ವಾತಾವರಣದ ಹಿನ್ನೆಲೆಯಲ್ಲಿ ವಿಮಾನ ಸಂಚಾರ ರದ್ದಾಗಿತ್ತು. ಹೀಗಾಗಿ ಭಾರತೀಯ ಆಟಗಾರರು ಭಾರತಕ್ಕೆ ಮರಳಲು ಸಾಧ್ಯವಾಗಿರಲಿಲ್ಲ. ಆದರೆ ಬುಧವಾರ ಚಂಡಮಾರುತದ ಪ್ರಭಾವ ಕಡಿಮೆಯಾಗಿದ್ದರಿಂದ ಬಿಸಿಸಿಐ ವ್ಯವಸ್ಥೆ ಮಾಡಿದ್ದ ವಿಶೇಷ ಚಾರ್ಟರ್ ವಿಮಾನದ ಮೂಲಕ ಹೊರಟ ವಿಶ್ವ ಚಾಂಪಿಯನ್ ಟೀಂ ಇಂಡಿಯಾ ಆಟಗಾರರು ಗುರುವಾರ ಮುಂಜಾನೆ ಇಲ್ಲಿನ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದರು.


ಟಿ–20 ವಿಶ್ವಕಪ್ ಗೆದ್ದು ಬಂದಿರುವ ಟೀಂ ಇಂಡಿಯಾದೊಂದಿಗೆ ಪ್ರಧಾನಿ ಮೋದಿ ಸಂಭ್ರಮ.

ಈ ವೇಳೆ ವಿಮಾನ ನಿಲ್ದಾಣದ ಒಳಗೆ ಮತ್ತು ಹೊರಗೆ ಜಮಾಯಿಸಿದ್ದ ಲಕ್ಷಾಂತರ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರರನ್ನು ಅಭಿನಂದಿಸುವ ಫಲಕಗಳನ್ನು ಹಿಡಿದು ರಾಷ್ಟ್ರಧ್ವಜ ಬೀಸುತ್ತಾ ಅದ್ಧೂರಿ ಸ್ವಾಗತ ಕೋರಿದರು.

ಈ ವೇಳೆ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಟಿ20 ವಿಶ್ವಕಪ್ ಟ್ರೋಫಿಯನ್ನು ಎತ್ತಿ ಹಿಡಿದು ಅಭಿಮಾನಿಗಳಿಗೆ ತೋರಿಸಿ ಸಂಭ್ರಮಿಸಿದರು. ಅಲ್ಲದೆ, ಹೋಟೆಲ್ ತಲುಪುವ ಮುನ್ನ ಸೂರ್ಯ ಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಸೇರಿದಂತೆ ಕೆಲವು ಕ್ರಿಕೆಟಿಗರು ಬಿಂದಾಸ್ ಸ್ಟೆಪ್ ಹಾಕಿ, ಗಮನ ಸೆಳೆದರು. ಬಳಿಕ ಅಲ್ಲಿಂದ ನೇರವಾಗಿ ಮೌರ್ಯ ಹೋಟೆಲ್‌ಗೆ ತೆರಳಿದರು. ಅಲ್ಲಿ ಬೆಳಗ್ಗೆ ಹೋಟೆಲ್ ಸಿಬ್ಬಂದಿ ಆಟಗಾರರ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಿದರು.

ಹೆಚ್ಚಿನ ವರದಿ ಪುಟ–10

ಪ್ರಧಾನಿ ಮೋದಿ ಭೇಟಿ: ನಂತರ ರೋಹಿತ್ ಶರ್ಮಾ ನೇತೃತ್ವದ ಟೀಂ ಇಂಡಿಯಾ ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಅವರ ನಿವಾಸಕ್ಕೆ ಭೇಟಿ ನೀಡಿತು. ಇಲ್ಲಿನ ಲೋಕ್ ಕಲ್ಯಾಣ್ ಮಾರ್ಗ್ 7ರಲ್ಲಿರುವ ಪ್ರಧಾನಿ ಮೋದಿ ನಿವಾಸಕ್ಕೆ ವಿಶೇಷವಾಗಿ ಸಿದ್ಧಪಡಿಸಿದ 'ಚಾಂಪಿಯನ್ಸ್' ಜೆರ್ಸಿ ತೊಟ್ಟ ● 6ನೇ ಪುಟಕ್ಕೆ

ಮೈಸೂರು ಸೇರಿ ರಾಜ್ಯದ ಹತ್ತು ಮಹಾನಗರ ಪಾಲಿಕೆ ವ್ಯಾಪ್ತಿ

ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ ಹಂತ–2 ಅನುಷ್ಠಾನ

● 2 ಸಾವಿರ ಕೋಟಿ ವೆಚ್ಚದಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಸಂಪುಟ ಸಭೆ ನಿರ್ಧಾರ ● ಪಿಡಿಓ, ಕಾರ್ಯದರ್ಶಿಗಳ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ● ಬೆಂಗಳೂರು ನಗರ, ಹೊರವಲಯದ ನೋಂದಣಾಧಿಕಾರಿ, ಸಿಬ್ಬಂದಿ ವರ್ಗ ಎತ್ತಂಗಡಿ ● 563 ನಗರ ಆರೋಗ್ಯ ಕ್ಷೇಮ ಕೇಂದ್ರಗಳಿಗೆ ಅಗತ್ಯ ಸಾಮಗ್ರಿಗೆ 29.64 ಕೋಟಿ; ಔಷಧಿ ಖರೀದಿಗೆ 24.02 ಕೋಟಿ ಬಿಡುಗಡೆ ● ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ



ಬೆಂಗಳೂರು, ಜು. 4(ಕೆಎಂಶಿ)– ಬೆಂಗಳೂರು ಮಹಾನಗರ ಹೊರತುಪಡಿಸಿ ಮೈಸೂರು, ಮಂಗಳೂರು ಸೇರಿದಂತೆ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 2 ಸಾವಿರ ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ ಹಂತ–2 ಅನ್ನು ಕೈಗೆತ್ತಿಕೊಳ್ಳಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಅಲ್ಲದೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ಮಾಡಲು ಸಭೆ ಸಮ್ಮತಿಸಿರುವುದಲ್ಲದೆ, ಬೆಂಗಳೂರು ನಗರ ಹಾಗೂ ಹೊರವಲಯದಲ್ಲಿ ದೀರ್ಘಕಾಲದಿಂದ ಬೀಡು ಬಿಟ್ಟಿರುವ ನೋಂದಣಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಎತ್ತಂಗಡಿ ಮಾಡಲು ಸೂಚಿಸಿದೆ. ಶಕ್ತಿ ಯೋಜನೆ ಅನುಷ್ಠಾನ ನಂತರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಹೆಚ್ಚಿರುವ ಪ್ರಯಾಣಿಕರ ದಟ್ಟಣೆ ನಿವಾರಿಸಲು ಹೊಸದಾಗಿ 820 ಬಸ್‌ಗಳ ● 6ನೇ ಪುಟಕ್ಕೆ

ನಟ ದರ್ಶನ್, ಪವಿತ್ರಾಗೌಡ ಸೇರಿ ಎಲ್ಲ ಆರೋಪಿಗಳಿಗೆ ಜು.18ರವರೆಗೆ ನ್ಯಾಯಾಂಗ ಬಂಧನ

ಬೆಂಗಳೂರು, ಜು.4– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್ ಮತ್ತು ಅವರ ಗೆಳತಿ ಪವಿತ್ರಾ ಗೌಡ ಸೇರಿ ಎಲ್ಲಾ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಜುಲೈ 18 ರವರೆಗೆ ವಿಸ್ತರಿಸಿ 24ನೇ ಎಸಿಎಂಎಂ ಕೋರ್ಟ್ ಗುರುವಾರ ಆದೇಶ ನೀಡಿದೆ.



ರೇಣುಕಾಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ದರ್ಶನ್ ಹಾಗೂ ಇತರ ಎಲ್ಲಾ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಇಂದು ಅಂತ್ಯವಾದ ಹಿನ್ನೆಲೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಜಡ್ಜ್ ಮುಂದೆ ಆರೋಪಿಗಳನ್ನು ಹಾಜರುಪಡಿಸಲಾಗಿತ್ತು. ಎಲ್ಲ ಆರೋಪಿಗಳ ನ್ಯಾಯಾಂಗ ಬಂಧನ ಅವಧಿ ವಿಸ್ತರಿಸುವಂತೆ ಎಸ್‌ಪಿಪಿ ರಿಮ್ಯಾಂಡ್ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ಕೋರ್ಟ್ ಎಲ್ಲಾ ಆರೋಪಿಗಳ ನ್ಯಾಯಾಂಗ ಬಂಧನವನ್ನು ಜು.18ರವರೆಗೆ ವಿಸ್ತರಿಸಿ ಆದೇಶ ನೀಡಿದೆ.

ಪರಪ್ಪನ ಅಗ್ರಹಾರ ಮತ್ತು ತುಮಕೂರು ಜೈಲಿನಲ್ಲಿರುವ ಆರೋಪಿಗಳನ್ನು ಕೂಡ ವಿಡಿಯೋ ಕಾನ್ಫರೆನ್ಸ್ ಮೂಲಕ ಕೋರ್ಟ್‌ಗೆ ಹಾಜರುಪಡಿಸಲಾಯಿತು.

ಹಿಂದಿನ ಆಯುಕ್ತ ಕಾಂತರಾಜು, ಕಾರ್ಯದರ್ಶಿ ಸವಿತಾ ಕೂಡಿಟ್ಟ

ಬರೋಬ್ಬರಿ 8000 ನಿವೇಶನ ಖಾಲಿ... ಖಾಲಿ...!

● ಮುಡಾ ಅಧಿಕಾರಿಗಳಿಂದ ದಾಖಲೆ ಪಡೆಯುತ್ತಿರುವ ತನಿಖಾಧಿಕಾರಿಗಳು ● ಖಾಲಿ ನಿವೇಶನಗಳ ಪತ್ತೆಗೆ ಇಸಿ ಪಡೆಯಲು 4 ಉಪ ನೋಂದಣಾಧಿಕಾರಿ ಕಚೇರಿಗಳಿಗೆ 38 ಲಕ್ಷ ರೂ ಶುಲ್ಕ ಪಾವತಿಸಿದ್ದ ಮುಡಾ ● 8000 ಮುಡಾ ಖಾಲಿ ನಿವೇಶನಗಳ ದಾಖಲಾತಿ ಮಾಡಿ ಸಾಫ್ಟ್‌ವೇರ್‌ನಲ್ಲಿ ಲೋಡ್ ಮಾಡಿದ್ದ ಮುದ್ರೆ ಹೊತ್ತಿದ್ದ ಕಡತಗಳೇ ಮಂಗಮಾಯ ● ಹರಾಜು, 50:50 ಅನುಪಾತ, ಪ್ರೋತ್ಸಾಹದಾಯಕ ಹೀಗೆ ಕಳ್ಳೆಪುರಿ ಹಂಚಿದಂತೆ ನಿವೇಶನಗಳ ವಿಲೇವಾರಿ


ಪಿ.ಎಸ್.ಕಾಂತರಾಜು


ಎಂ.ಕೆ.ಸವಿತಾ

■ ಎಸ್.ಟಿ.ರವಿಕುಮಾರ್

ಮೈಸೂರು, ಜು.4–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಾವಿರಾರು ನಿವೇಶನಗಳನ್ನು ಬೇಕಾಬಿಟ್ಟಿ, ಕಾನೂನುಬಾಹಿರವಾಗಿ ಹಂಚಿಕೆ ಮಾಡಿರುವ ಅಧಿಕಾರಿಗಳು ರಾಜ ಮಹಾರಾಜರು ಕಟ್ಟಿದ ಸಂಸ್ಥೆಯನ್ನು ದಿವಾಳಿ ಮಾಡಿದ್ದಾರೆ.


ಮುಡಾ ಕಚೇರಿಯಲ್ಲಿ ತನಿಖಾಧಿಕಾರಿಗಳು

ಈ ಬ್ರಹ್ಮಾಂಡ ಭ್ರಷ್ಟಾಚಾರದ ತನಿಖೆ ನಡೆಸುತ್ತಿರುವ ಹಿರಿಯ ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದ ತನಿಖಾ ತಂಡದ ಅಧಿಕಾರಿಗಳು ಈ ಹಿಂದೆ 2017 ಮತ್ತು 2018ರ ಸಾಲಿನಲ್ಲಿ ಮುಡಾ ಆಯುಕ್ತರಾಗಿದ್ದ ಪಿಎಸ್.ಕಾಂತರಾಜು, ಕಾರ್ಯದರ್ಶಿಯಾಗಿದ್ದ ಎಂಕೆ.ಸವಿತಾ, ಅವರು ದುರ್ಬಿನ್ ಹಾಕಿ ಹುಡುಕಿಸಿ ಪಟ್ಟಿ ಮಾಡಿ ಸಂರಕ್ಷಿಸಿದ್ದ ಪ್ರಾಧಿಕಾರಕ್ಕೆ ಸೇರಿದ 8000 ಖಾಲಿ ಬಿಡಿ ನಿವೇಶನಗಳೇನಾದವು, ಯಾರ್ಯಾರಿಗೆ ಹಂಚಿದ್ದೀರಿ, ಅಧಿಸೂಚನೆ ಹೊರಡಿಸಿ ಅರ್ಜಿ ಕರೆದು ನಿಯಮಾನುಸಾರ ಹಂಚಿಕೆ ಮಾಡಲಾಗಿದೆಯೇ ಎಂಬುದರ ಬಗ್ಗೆ ದಾಖಲೆಗಳನ್ನು ಪಡೆದು ಪರಿಶೀಲನೆ ನಡೆಸುತ್ತಿದ್ದಾರೆ.

ಎರಡನೇ ದಿನವಾದ ಇಂದು ಎಲ್ಲಾ ವಲಯ ಕಚೇರಿ ಅಧಿಕಾರಿಗಳಿಂದ 8000 ನಿವೇಶನಗಳಿಗೆ ● 6ನೇ ಪುಟಕ್ಕೆ

ಮುಡಾ ಸಭೆ ಮುಂದೂಡಿಕೆ



ಮೈಸೂರು, ಜು.4(ಆರ್‌ಕೆ)– ನಿವೇಶನಗಳ ಹಂಚಿಕೆ ಹಗರಣ ಸಂಬಂಧ ತನಿಖೆ ಪ್ರಗತಿಯಲ್ಲಿರುವುದರಿಂದ ಜು.12 ರಂದು ನಿಗದಿಯಾಗಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯನ್ನು ಮುಂದೂಡಲಾಗಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಮುಡಾ ನೂತನ ಕಾರ್ಯದರ್ಶಿ ಪ್ರಸನ್ನ ಕುಮಾರ್, ಸರ್ಕಾರದ ಸೂಚನೆ ಮೇರೆಗೆ ಜುಲೈ 12ರಂದು ಬೆಳಗ್ಗೆ 11ಗಂಟೆಗೆ ನಿಗದಿಯಾಗಿದ್ದ ಪ್ರಾಧಿಕಾರದ ಸಭೆಯನ್ನು ಮುಂದೂಡಲಾಗಿದ್ದು, ಮುಂದಿನ ಸಭೆ ದಿನಾಂಕವನ್ನು ತಿಳಿಸಲಾಗುವುದು ಎಂದು ಹೇಳಿದ್ದಾರೆ.

ಮುಡಾ ತಮ್ಮ ಪತ್ನಿಗೆ ನೀಡಿರುವ 14 ನಿವೇಶನ ಹಿಂಪಡೆದು ಜಮೀನಿಗೆ 60 ಕೋಟಿ ಕೊಡಲಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ● ಜಮೀನು ಪಡೆದು ನಿವೇಶನ ನೀಡಿದ್ದಾರೆ; ಇದರಲ್ಲಿ ಹಗರಣವೇನೂ ನಡೆದಿಲ್ಲ: ಸ್ಪಷ್ಟನೆ ● ಆದರೆ ಬಿಜೆಪಿಯವರಿಂದ ಅನಗತ್ಯ ಆರೋಪ



ಬೆಂಗಳೂರು, ಜು. 4(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನನ್ನ ಪತ್ನಿಗೆ ನೀಡಿರುವ 14 ನಿವೇಶನಗಳನ್ನು ಹಿಂತೆಗೆದುಕೊಂಡು, ಜಮೀನು ಮೌಲ್ಯ 60 ಕೋಟಿ ರೂ. ನೀಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ಮಾಡಿದ್ದಾರೆ.

ಮುಡಾ ಮಾಡಿರುವ ತಪ್ಪಿಗೆ ನಾನು ಹೊಣೆಗಾರನಲ್ಲ. ನಮ್ಮ ಜಮೀನನ್ನು ವಶಪಡಿಸಿಕೊಂಡು ನಿವೇಶನ ಹಂಚಿಕೆ ಮಾಡಿದ್ದಾರೆ. ಇದರಲ್ಲಿ ಯಾವುದೇ ಕರ್ಮಕಾಂಡ ನಡೆದಿಲ್ಲ. ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರ್ಯಾಯ ನಿವೇಶನ ನೀಡಿದ್ದಾರೆ. ಇದರಲ್ಲಿ ಹಗರಣ ಏನು ಬಂತು, ಅಂತಹ ಭ್ರಷ್ಟಾಚಾರ ಏನು ನಡೆದಿದೆ ಎಂದು ಪ್ರಶ್ನಿಸಿದರು. ● 6ನೇ ಪುಟಕ್ಕೆ

ಡೆಂಗ್ಯೂಗೆ ಮೈಸೂರು ಜಿಲ್ಲೆಯಲ್ಲಿ ಆರೋಗ್ಯಾಧಿಕಾರಿಯೇ ಬಲಿ

● ಎಚ್ಚೆತ್ತ ಪೊಲೀಸ್, ಜಿಲ್ಲಾಡಳಿತ ● ಸೊಳ್ಳೆ ನಿಯಂತ್ರಣಕ್ಕೆ ವ್ಯಾಪಕ ಕ್ರಮ


ನಾಗೇಂದ್ರ

ಮೈಸೂರು,ಜು.4(ಎಂಟಿವೈ)– ರಾಜ್ಯಾದ್ಯಂತ ಡೆಂಗ್ಯೂ ಮಹಾಮಾರಿ ವ್ಯಾಪಿಸಿದೆ. ಈ ಮಧ್ಯೆ ಮೈಸೂರು ಜಿಲ್ಲೆ ಸಮುದಾಯ ಆರೋಗ್ಯಾಧಿಕಾರಿಯೊಬ್ಬರು ಡೆಂಗ್ಯೂ ಜ್ವರಕ್ಕೆ ಬಲಿಯಾದ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಲಾರ್ವ ಸರ್ವೆ ಆರಂಭಿಸಲಾಗಿದೆ. ಮಳೆಗಾಲ ಆರಂಭವಾಗುತ್ತಿದ್ದಂತೆಯೇ ಮೈಸೂರು ಸೇರಿದಂತೆ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಡೆಂಗ್ಯೂ ಹಾಗೂ ಚಿಕೂನ್‌ಗುನ್ಯಾ ಜ್ವರದ ಹಾವಳಿ ಆರಂಭವಾಗಿದ್ದು, ಡೆಂಗ್ಯೂ ಜ್ವರಕ್ಕೆ ಬಲಿಯಾಗುತ್ತಿರುವ ಪ್ರಕರಣ ವರದಿಯಾಗುತ್ತಿದೆ. ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ಸಮುದಾಯ ಆರೋಗ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ನಾಗೇಂದ್ರ (28), ಡೆಂಗ್ಯೂಗೆ ಬಲಿಯಾಗಿದ್ದು, ಜಿಲ್ಲೆಯ ಜನರು ಮಾತ್ರವಲ್ಲದೆ, ಆರೋಗ್ಯ ಸಿಬ್ಬಂದಿಗಳನ್ನೇ ಕಂಗೆಡಿಸಿದೆ. ಈ ನಡುವೆ ಡೆಂಗ್ಯೂ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ● 7ನೇ ಪುಟಕ್ಕೆ


ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಗುರುಪುರ, ಹಳೇವಾರಂಚಿ, ಹೊಸವಾರಂಚಿ, ಹೊಸೂರ್ ಗೇಟ್‌ನಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಮುನೀಂದ್ರಮ್ಮ ನೇತೃತ್ವದಲ್ಲಿ ಡೆಂಗ್ಯೂ ಎಚ್ಚರಿಕಾ ಕರಪತ್ರ ವಿತರಿಸುತ್ತಿರುವುದು.

ಕೆಆರ್‌ಎಸ್ ಜಲಾಶಯದಲ್ಲೀಗ ನೀರಿನ ಮಟ್ಟ 100 ಅಡಿ

ಕಬಿನಿ ಭರ್ತಿಗೆ ಇನ್ನು 3 ಅಡಿ ಬಾಕಿ


ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಗುರುವಾರ ನೂರು ಅಡಿ ತಲುಪಿದೆ.


ಕಬಿನಿ ಜಲಾಶಯ ಭರ್ತಿಯಾಗಲು ಇನ್ನು 3 ಅಡಿ ಬಾಕಿ ಇದೆ.

ಮೈಸೂರು, ಜು.4–ಕೊಡಗಿನಲ್ಲಿ ಭಾರಿ ಮಳೆಯಾಗುತ್ತಿದ್ದು, ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆಗೆ ಒಳ ಹರಿವು ಹೆಚ್ಚಾಗಿರುವ ಪ್ರಮಾಣ ಅಣೆ ಕಟ್ಟೆಯ ನೀರಿನ ಮಟ್ಟ 100 ಅಡಿ ತಲುಪಿದೆ. ಮತ್ತೊಂದೆಡೆ ಕೇರಳದಲ್ಲಿ ಭಾರಿ ಮಳೆ ಕಾರಣದಿಂದ ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲೂಕಿನ ಕಬಿನಿ ಜಲಾಶಯಕ್ಕೂ ಒಳಹರಿವು ಹೆಚ್ಚಾಗಿದ್ದು, ಭರ್ತಿಗೆ ಕೇವಲ 3 ಅಡಿ ಮಾತ್ರ ಬಾಕಿ ಇದೆ.

ಕೆಆರ್‌ಎಸ್: ಕಾವೇರಿ ಉಗಮ ಸ್ಥಾನವಾದ ಕೊಡಗು ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದೆ. ಇದರ ಪರಿಣಾಮವಾಗಿ ಕೆಆರ್‌ಎಸ್‌ನ ಒಳಹರಿವು ಹೆಚ್ಚಾಗಿದ್ದು, ಅಣೆಕಟ್ಟಿನ ನೀರಿನ ಪ್ರಮಾಣ 100.33 ಅಡಿ ತಲುಪಿದೆ. ಹೊರ ಹರಿವನ್ನು ನಿಯಂತ್ರಣದಲ್ಲಿಟ್ಟಿರುವ ಕಾರಣ ಕೆಆರ್‌ಎಸ್ ನೀರಿನ ಮಟ್ಟ 100 ಅಡಿ ತಲುಪಲು ಸಾಧ್ಯವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ಹೆಚ್ಚಾಗಿರುವ ಕಾರಣ ಕಾವೇರಿ ಕೊಳ್ಳದಲ್ಲಿ ಬರ ಪರಿಸ್ಥಿತಿ ಚೇತರಿಸಿಕೊಂಡಂತಾಗಿದೆ. ಅಣೆಕಟ್ಟೆಯ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಗುರುವಾರ 11,189 ಕ್ಯೂಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಆದರೆ 540 ಕ್ಯೂಸೆಕ್ ನೀರನ್ನು ಮಾತ್ರ ಹೊರಬಿಡಲಾಗುತ್ತಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ ಕೇವಲ 78.38 ಅಡಿ ನೀರು ● 7ನೇ ಪುಟಕ್ಕೆ

KRS ಜಲಾಶಯದಿಂದ ಜು.8ರಿಂದ ನಾಲೆಗಳಿಗೆ ನೀರು

ಬೆಂಗಳೂರು, ಜು.4–ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯದ ಮಟ್ಟ 100 ಅಡಿಗಿಂತ ಹೆಚ್ಚುವರಿಯಾಗಿರುವುದರಿಂದ ಜುಲೈ 6 ರಂದು ಬೆಂಗಳೂರಿನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ, ಜುಲೈ 8 ರಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಲಾಗುವುದು ಎಂದು ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಕಳೆದ ಸಾಲಿನಲ್ಲಿ ಬರಗಾಲದ ಹಿನ್ನೆಲೆಯಲ್ಲಿ ರೈತರ ಬೇಡಿಕೆಯಂತೆ ನೀರು ಹರಿಸಲು ಸಾಧ್ಯವಾಗಿರಲಿಲ್ಲ. ಜಲಾಶಯದಲ್ಲಿ ನೀರಿನ ಮಟ್ಟ 100 ಅಡಿ ತಲುಪಿದ ನಂತರ ನೀರು ಹರಿಸುವುದಾಗಿ ಭರವಸೆ ನೀಡಲಾಗಿತ್ತು. ವಿ.ಸಿ.ನಾಲೆ ಆಧುನೀಕರಣ ಕಾಮಗಾರಿ ನಡೆಯುತ್ತಿದ್ದು, ರೈತರಿಗೆ ನೀರು ನೀಡಲು ತೊಂದರೆಯಾಗುತ್ತದೆ ಎಂದು ಹಲವಾರು ದೂರುಗಳು ಕೇಳಿ ಬಂದಿತ್ತು. ಇತ್ತೀಚೆಗೆ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ● 7ನೇ ಪುಟಕ್ಕೆ

ಐದನೇ ಪುಟದಿಂದ

ಸಂತಸ ಹಂಚಿಕೊಂಡ ಪ್ರಧಾನಿ ಮೋದಿ

ಟೀಂ ಇಂಡಿಯಾ ಆಟಗಾರರು ಹಾಗೂ ಸಹಾಯಕ ಸಿಬ್ಬಂದಿ, ಬೆಳಗ್ಗೆ 11 ಗಂಟೆಗೆ ಭೇಟಿ ನೀಡಿದರು. ಪ್ರಧಾನಿ ಮೋದಿ, ತಮ್ಮ ನಿವಾಸದಲ್ಲಿ ಟೀಂ ಇಂಡಿಯಾ ಆಟಗಾರರನ್ನು ಆತ್ಮೀಯವಾಗಿ ಆಹ್ವಾನಿಸಿದರು. ಅಲ್ಲದೇ ಟಿ20 ವಿಶ್ವಕಪ್ ಟೂರ್ನಿಯ ಕುರಿತಾಗಿ ಆಟಗಾರರ ಅನುಭವಗಳನ್ನು ಆಲಿಸಿದರು. ನಾಯಕ ರೋಹಿತ್ ಶರ್ಮಾ ಹಾಗೂ ತಂಡದ ಹೆಡ್ ಕೋಚ್ ರಾಹುಲ್ ದ್ರಾವಿಡ್ ಪ್ರಧಾನಿ ನರೇಂದ್ರ ಮೋದಿಯವರ ಜೊತೆ ಟ್ರೋಫಿ ಹಿಡಿದು ಫೋಟೋಗೆ ಫೋಸ್ ಕೊಟ್ಟರು. ಅಲ್ಲದೇ ಟೀಂ ಇಂಡಿಯಾ ಆಟಗಾರರೊಂದಿಗೆ ಸಮಯ ಕಳೆದ ಮೋದಿ ಅವರು ಆಟಗಾರರನ್ನು ಅಭಿನಂದಿಸಿ ಅವರೊಂದಿಗೆ ಉಪಾಹಾರ ಸೇವಿಸಿದರು. ಈ ವೇಳೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಕಾರ್ಯದರ್ಶಿ ಜಯ್ ಶಾ ಕೂಡ ಹಾಜರಿದ್ದರು.

ಈ ವೇಳೆ ಪ್ರಧಾನಿ ಮೋದಿ ಮುಂದಿನ ದಿನಗಳಲ್ಲಿ ಆಡುವ ಎಲ್ಲಾ ಟೂರ್ನಿಗಳಲ್ಲಿ ಟ್ರೋಫಿ ಗೆಲ್ಲಬೇಕು ಎಂದು ಆಟಗಾರರಿಗೆ ಕಿವಿಮಾತು ಹೇಳಿದರು.

ಮೋದಿ ಜೆರ್ಸಿ ಗಿಫ್ಟ್: ಟೀಂ ಇಂಡಿಯಾ ಮೋದಿ ಅವರ ನಿವಾಸಕ್ಕೆ ಭೇಟಿ ನೀಡಿದ ವೇಳೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಹಾಗೂ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಪ್ರಧಾನಿ ಮೋದಿಗೆ 'ನಮೋ 1' ಸಂಖ್ಯೆಯ ಜೆರ್ಸಿ ಗಿಫ್ಟ್ ನೀಡಿದರು.

ಕ್ರಿಕೆಟ್ ಸಮುದಾಯದ ಮೇಲಿರುವ ಪ್ರೀತಿ ಹಾಗೂ ಗೌರವಾಧರಗಳನ್ನು ಗಮನದಲ್ಲಿಟ್ಟುಕೊಂಡು ನಂ.1 ಸಂಖ್ಯೆಯ ಜೆರ್ಸಿಯನ್ನು ಮೋದಿಯವರಿಗೆ ಗಿಫ್ಟ್ ನೀಡಲಾಗಿದೆ. ಈ ಕುರಿತಂತೆ ಟ್ವೀಟ್ ಮಾಡಿರುವ ಬಿಸಿಸಿಐ, "ಜಯಶಾಲಿ ಭಾರತ ಕ್ರಿಕೆಟ್ ತಂಡವು ಇಂದು ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿತು. ನೀವು ನಮಗೆ ಸ್ಫೂರ್ತಿದಾಯಕ ಮಾತುಗಳನ್ನಾಡಿ ಹುರಿದುಂಬಿಸಿದ್ದಕ್ಕೆ ಹಾಗೂ ಅಪಾರವಾದ ಬೆಂಬಲ ನೀಡಿದ್ದಕ್ಕೆ ಹೃದಯಪೂರ್ವಕ ಧನ್ಯವಾದಗಳು ಎಂದು ಹೇಳಿದೆ.

ಇನ್ನು ಪ್ರಧಾನ ಮಂತ್ರಿಗಳ ನಿವಾಸದಲ್ಲಿ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ, ಕೋಚ್ ರಾಹುಲ್ ದ್ರಾವಿಡ್, ಸ್ಟಾರ್ ಆಟಗಾರರಾದ ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಮತ್ತು ಜಸ್‌ಪ್ರೀತ್ ಬುಮ್ರಾ ಕ್ಯಾಮೆರಾಗೆ ಫೋಸ್ ಕೊಟ್ಟರು.

ಟ್ರೋಫಿ ಮುಟ್ಟದ ಪ್ರಧಾನಿ ನರೇಂದ್ರ ಮೋದಿ: ಯಾವುದೇ ಟ್ರೋಫಿ ಆಗಿರಲಿ ಅದನ್ನು ಮುಟ್ಟುವ ಅಧಿಕಾರ ಅದನ್ನು ಗೆದ್ದವರಿಗೆ ಮಾತ್ರವೇ ಇರುತ್ತದೆ. ಈ ಮಾತನ್ನು ಗಂಭೀರವಾಗಿ ಪರಿಗಣಿಸಿರುವ ಪ್ರಧಾನಿ ನರೇಂದ್ರ ಮೋದಿ, ಟೀಮ್ ಇಂಡಿಯಾ ಗೆದ್ದು ತಂದ ಟಿ20 ವಿಶ್ವಕಪ್ ಟ್ರೋಫಿ ಮುಟ್ಟಲಿಲ್ಲ. ಆಟಗಾರರೇ ಆ ಟ್ರೋಫಿಯನ್ನು ಹಿಡಿದುಕೊಳ್ಳುವಂತೆ ಮಾಡಿ ಫೋಟೋಗೆ ಫೋಸ್ ಕೊಟ್ಟಿದ್ದಾರೆ. ಇದಕ್ಕೆ ಸೋಷಿಯಲ್ ಮೀಡಿಯಾಗಳಲ್ಲಿ ಭಾರೀ ಮೆಚ್ಚುಗೆ ಕೂಡ ವ್ಯಕ್ತವಾಗಿದೆ.

ನಿವೇಶನ ಖಾಲಿ... ಖಾಲಿ...!

ಸಂಬಂಧಿಸಿದ ಮೂಲ ಕಡತಗಳನ್ನು ಹುಡುಕಿ ತರುವಂತೆ ತನಿಖಾಧಿಕಾರಿಗಳು ಸೂಚನೆ ನೀಡಿದ ಹಿನ್ನೆಲೆಯಲ್ಲಿ ಮುಡಾ ಅಧಿಕಾರಿಗಳು ತಮ್ಮ ತಮ್ಮ ಕಚೇರಿಗಳಲ್ಲಿ, ರೆಕಾರ್ಡ್ ರೂಂಗಳಲ್ಲಿ ಕಡತಗಳನ್ನು ಶೋಧಿಸುತ್ತಿದ್ದಾರೆ. ಇಂದು ಬೆಳಿಗ್ಗೆಯಿಂದಲೂ ವಲಯಾಧಿಕಾರಿಗಳು, ವಿಶೇಷ ತಹಸೀಲ್ದಾರರು, ಕೇಸ್ ವರ್ಕರ್‌ಗಳು, ಕಚೇರಿ ಸೂಪರಿಟೆಂಡೆಂಟ್‌ಗಳು ಕಬೋರ್ಡ್‌ಗಳಲ್ಲಿ, ಅಧ್ಯಕ್ಷರ ಕಚೇರಿ, ಆಯುಕ್ತರ ಪಿಎ ಸೆಕ್ಷನ್, ಕಾರ್ಯದರ್ಶಿ ಕಚೇರಿಗಳಲ್ಲಿ ತನಿಖಾಧಿಕಾರಿಗಳು ಕೇಳುತ್ತಿರುವ ಖಾಲಿ ನಿವೇಶನಗಳ ಕಡತಗಳ ಪತ್ತೆ ಕಾರ್ಯದಲ್ಲಿ ತೊಡಗಿದ್ದಾರೆ.

ಕಾಂತರಾಜು ಮತ್ತು ಸವಿತಾ ಅವರು ಪತ್ತೆ ಮಾಡಿದ್ದ 8000 ನಿವೇಶನಗಳನ್ನು ತದ ನಂತರ ಬಂದ ಆಯುಕ್ತರು ಹರಾಜು ಮೂಲಕ, ಶೇ50:50 ಅನುಪಾತದಡಿ, ಭೂಮಾಲೀಕರಿಗೆ ಪ್ರೋತ್ಸಾಹದಾಯಕ ಹಾಗೂ ಬದಲಿಯಾಗಿ ಹಂಚಿಕೆ ಮಾಡಿ ಖಾಲಿ ನಿವೇಶನಗಳನ್ನು ಖಾಲಿ ಮಾಡಿದ್ದಾರೆ ಎಂಬ ಆರೋಪ ಪ್ರಬಲವಾಗಿ ಕೇಳಿಬರುತ್ತಿದೆ.

ಪತ್ತೆ ಕಾರ್ಯ: ಎಲ್ಲಾ ವಲಯಾಧಿಕಾರಿಗಳು, ಸೈಟ್ ಸೆಕ್ಷನ್, ತಾಂತ್ರಿಕ ಶಾಖೆಗಳಿಂದ ವಲಯವಾರು ಖಾಲಿ ನಿವೇಶನಗಳ ಮಾಹಿತಿ ಕಲೆ ಹಾಕಿದಾಗ ಒಟ್ಟು 12000 ಖಾಲಿ ನಿವೇಶನಗಳಿರುವುದು ಪತ್ತೆಯಾಗಿತ್ತು. ಎಲ್ಲಾ ಸಬ್-ರಿಜಿಸ್ಟ್ರಾರ್ ಕಚೇರಿಗಳಿಂದ ಇಸಿ ಪಡೆದಾಗ 8000 ಸೈಟುಗಳು ಮುಡಾ ಹೆಸರಿನಲ್ಲಿರುವುದು ಕಂಡುಬಂದಿತ್ತು.

38 ಲಕ್ಷರೂ ಇಸಿ ಶುಲ್ಕ: ಎಲ್ಲಾ 4 ಉಪನೋಂದಣಾಧಿಕಾರಿ ಕಚೇರಿಗಳಿಂದ ಪ್ರಾಧಿಕಾರದ ಖಾಲಿ ನಿವೇಶನಗಳಿಗೆ ಇಸಿ(ಎನ್‌ಕಂಬರೆನ್ಸ್ ಸರ್ಟಿಫಿಕೇಟ್) ಪಡೆಯಲು 2017-18ನೇ ಸಾಲಿನಲ್ಲಿ ಶುಲ್ಕವಾಗಿ ಅಂದಿನ ಆಯುಕ್ತರ ಸಾಮಾನ್ಯ ಸಭೆಯಲ್ಲ ಅನುಮತಿ ಪಡೆದು 38 ಲಕ್ಷರೂಗಳನ್ನು ಪಾವತಿಸಿದ್ದರು.

ಅಕ್ರಮ ಖಾತೆ: ಮುಡಾ ಹೆಸರಿನಲ್ಲಿದ್ದ ಖಾಲಿ ನಿವೇಶನಗಳನ್ನು ಕೆಲವರು ನಕಲಿ ದಾಖಲೆ ಸೃಷ್ಟಿಸಿ ಮೈಸೂರು ಮಹಾನಗರ ಪಾಲಿಕೆ ಹಾಗೂ ಗ್ರಾಮ ಪಂಚಾಯಿತಿಗಳಲ್ಲೂ ಅನಧಿಕೃತವಾಗಿ ಖಾತೆ ಮಾಡಿಸಿಕೊಂಡಿರುವ ವಿಷಯವು ತನಿಖೆ ನಡೆಸುತ್ತಿರುವ ಅಧಿಕಾರಿಗಳ ಗಮನಕ್ಕೆ ಬಂದಿದೆ

ಹರಾಜು ದಂಧೆ: ಕಳೆದ 4 ವರ್ಷಗಳಿಂದೀಚೆಗೆ ಇ-ಹರಾಜು ಮೂಲಕ ಮಾರಾಟ ಮಾಡಿರುವ ಪ್ರಕ್ರಿಯೆಯಲ್ಲೂ ಭಾರೀ ಗೋಲ್‌ಮಾಲ್ ಮಾಡಿದ್ದು, ಪ್ರತೀ ಆಕ್ಷನ್‌ನಲ್ಲೂ ಕೆಲವೇ ವ್ಯಕ್ತಿಗಳಿಗೆ ಮಾತ್ರ ಬೆಲೆ ಬಾಳುವ ನಿವೇಶನಗಳು ಧಕ್ಕಿವೆ ಎಂಬ ಸುಳಿವಿನ ಮೇರೆಗೆ ಈ ಪ್ರಕ್ರಿಯೆ ಕುರಿತಂತೆಯೂ ಅಧಿಕಾರಿಗಳು ಶೋಧ ನಡೆಸುತ್ತಿದ್ದಾರೆ.

ಬದಲಿಯಲ್ಲಿ ವಂಚನೆ: ಬದಲಿ ನಿವೇಶನ ಹಂಚಿಕೆ ನಿಯಮ ಉಲ್ಲಂಘಿಸಿ ಕಡಿಮೆ ಬೆಲೆಯ ನಿವೇಶನಕ್ಕೆ ಪ್ರತಿಯಾಗಿ ಅದರ ನಾಲ್ಕು ಪಟ್ಟು ಮೌಲ್ಯದ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಭಿವೃದ್ಧಿ ಪಡಿಸಿದ ನಿವೇಶನಗಳನ್ನು ಹಂಚಿಕೆ ಮಾಡಿ ಭಾರೀ ಕಿಕ್‌ಬ್ಯಾಕ್ ಪಡೆದಿರುವುದು ದಾಖಲೆಗಳಿಂದ ಕಂಡು ಬಂದಿದೆ.

ಸ್ವಾಧೀನವಷ್ಟೇ ಮಾಡಿಲ್ಲ: ಸ್ವಾಧೀನವೇ ಆಗದಿದ್ದ ಭೂಮಿಗೆ ಪರಿಹಾರವಾಗಿ ಮುಡಾ ಅಧಿಕಾರಿಗಳು ಪ್ರತಿಷ್ಠಿತ ಬಡಾವಣೆಗಳಲ್ಲಿ ಅಭಿವೃದ್ಧಿ ಪಡಿಸಿರುವ ಬೆಲೆ ಬಾಳುವ ನಿವೇಶನಗಳನ್ನು ಶೇ 50:50ರ ಅನುಪಾತದಡಿ ವಿತರಿಸಿದ್ದರಲ್ಲದೆ, ಭೂ ಮಾಲೀಕರೇ ಬದುಕಿಲ್ಲದಿದ್ದರೂ, ಬೇರೊಬ್ಬರಿಗೆ ನಿವೇಶನ ನೀಡಲಾಗಿದೆ. ಸ್ವಾಧೀನಪಡಿಸಿದ ಭೂಮಿಯಲ್ಲಿ ವಸತಿ ಬಡಾವಣೆಯನ್ನೇ ಮಾಡದಿದ್ದರೂ, ಅಂತಹ ಭೂ ಮಾಲೀಕರಿಗೆ ಬೇರೆಡೆ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ.

ಜಮೀನಿಗೆ 60 ಕೋಟಿ ಕೊಡಲಿ

ಆ ಬಿಜೆಪಿಯವರಿಗೆ ತಲೆಬುಡ ಗೊತ್ತಿಲ್ಲ, ಸುಮ್ನೆ ಆರೋಪ ಮಾಡುತ್ತಾರೆ. ರೀ.. ಅವರ ಆಡಳಿತದಲ್ಲೇ ನಮಗೆ ಪರ್ಯಾಯ ನಿವೇಶನ ನೀಡಿರುವುದು.

ನಾನು ಅಧಿಕಾರದಲ್ಲಿದ್ದಾಗ ಜಮೀನಿಗೆ ಪರ್ಯಾಯವಾಗಿ ನಿವೇಶನ ಪಡೆದಿದ್ದೇನೆಯೇ, ಮುಡಾ ಮಾಡಿದ ತಪ್ಪನ್ನು ನನ್ನ ತಲೆಗೆ ಏಕೆ ಕಟ್ಟುತ್ತೀರಿ. ನಿಮಗೆ ಇದರ ಗಂಧ-ಗಾಳಿಯೇ ಗೊತ್ತಿಲ್ಲ ಎಂದು ಸುದ್ದಿಗಾರರ ಮೇಲೆ ಸಿಡಿಮಿಡಿಗೊಂಡರು. ಜಮೀನು ಸ್ವಾಧೀನ ಸಂದರ್ಭದಲ್ಲೂ ನಮಗೆ ಯಾವುದೇ ಮಾಹಿತಿ ನೀಡಿಲ್ಲ, ತಾವು ಮಾಡಿದ ತಪ್ಪನ್ನು ಪ್ರಾಧಿಕಾರದ ಸಭೆಯಲ್ಲೇ ಒಪ್ಪಿಕೊಂಡಿದ್ದಾರೆ. ತದನಂತರ 2021ರಲ್ಲಿ ವಶಪಡಿಸಿಕೊಂಡ ಜಮೀನಿಗೆ ಪರ್ಯಾಯವಾಗಿ 14 ನಿವೇಶನಗಳನ್ನು ನೀಡಿದ್ದಾರೆ.

ನಾವು ಇಂತಹ ಕಡೆಯೇ ನಿವೇಶನ ಕೊಡಿ ಎಂದು ಅರ್ಜಿ ಹಾಕಿರಲಿಲ್ಲ. ಎಲ್ಲಿ ಖಾಲಿ ನಿವೇಶನ ಇದ್ದವೋ ಅಲ್ಲಿ ನೀಡಿದ್ದಾರೆ. ನೀವು ಮಾಧ್ಯಮದವರು, ಮಾಹಿತಿ ಅರಿಯದೆ ಗೊಂದಲ ಸೃಷ್ಟಿ ಮಾಡುತ್ತಿದ್ದೀರಿ ಎಂದು ಸುದ್ದಿಗಾರರ ಮೇಲೆ ರೇಗಾಡಿದರು.

ವಿಕಾಸ ಯೋಜನೆ ಹಂತ-2 ಅನುಷ್ಠಾನ

ಖರೀದಿಗೆ ಸಂಪುಟ ಅನುಮೋದನೆ ನೀಡಿದೆ. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್ ಈ ಮಾಹಿತಿ ನೀಡಿದ್ದಲ್ಲದೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆ ನಿಯಮಗಳ ತಿದ್ದುಪಡಿಗೆ ಸಭೆ ಸಮ್ಮತಿಸಿದೆ, ಇನ್ನು ಮುಂದೆ ಕೌನ್ಸೆಲಿಂಗ್ ಮೂಲಕ ಈ ನೌಕರರ ವರ್ಗಾವಣೆ ಮಾಡಬಹುದು ಎಂದರು.

ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಅಭಿವೃದ್ಧಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಶೇ.7.5 ರಷ್ಟು ಅಂದರೆ, 150 ಕೋಟಿ ರೂ. ಜೊತೆಗೆ ಸ್ಥಳೀಯ ಮಹಾನಗರ ಪಾಲಿಕೆಗಳು ಇಷ್ಟೇ ಹಣವನ್ನು ನೀಡಬೇಕು, ಉಳಿದ 1,700 ಕೋಟಿ ರೂ.ಗಳನ್ನು ಯುಐಡಿಎಫ್‌ನಿಂದ ಸಾಲ ಪಡೆಯಲು ಇಲಾಖೆಗೆ ಅನುಮತಿ ನೀಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ವ್ಯವಸ್ಥೆ ಬಲಪಡಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಮತ್ತು ಅಗತ್ಯ ಸಿಬ್ಬಂದಿ ನೇಮಕಾತಿಗೆ ಸಂಪುಟ ಒಪ್ಪಿಗೆ ನೀಡಿದೆ.

563 ನಗರ ಆರೋಗ್ಯ ಕ್ಷೇಮ ಕೇಂದ್ರಗಳಿಗೆ ಪ್ರಯೋಗಾಲಯ ಹಾಗೂ ಅಗತ್ಯ ಸಾಮಗ್ರಿಗಳ ಖರೀದಿಗೆ 29.64 ಕೋಟಿ ರೂ. ಹಾಗೂ ಔಷಧ ಖರೀದಿಗೆ 24.02 ಕೋಟಿ ರೂ.ಗೆ ಅನುಮತಿ ನೀಡಿದೆ.

ಒಳನಾಡು ಕೆರೆ ಹಾಗೂ ಜಲಾಶಯಗಳಲ್ಲಿ ಮೀನು ಗುತ್ತಿಗೆಯನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಲು ಸಭೆ ಸಮ್ಮತಿಸಿದೆ.

ಪಂಚಾಯತ್ ರಾಜ್ ಸಂಸ್ಥೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ವಿಭಾಗವನ್ನು ಸಿಬ್ಬಂದಿ ಮತ್ತು ಆಡಳಿತ ಇಲಾಖೆಗೆ ವಹಿಸಲು ಜಸ್ಟೀಸ್ ಕೆ.ಭಕ್ತವತ್ಸಲ ಆಯೋಗ ಮಾಡಿರುವ ಶಿಫಾರಸ್ಸನ್ನು ಸಂಪುಟ ತಿರಸ್ಕರಿಸಿದೆ. ಬೆಂಗಳೂರು ನಗರ ಹಾಗೂ ಹೊರವಲಯದಲ್ಲಿ ನೋಂದಣಿ ಇಲಾಖೆಯಲ್ಲಿ ಕಳೆದ ಐದು ವರ್ಷಗಳಿಂದ ಒಂದೇ ಕಡೆ ಸೇವೆ ಸಲ್ಲಿಸುತ್ತಿರುವ ಎಲ್ಲಾ ಹಂತದ ನೌಕರರ ವರ್ಗಾವಣೆ ಜೊತೆಗೆ ಇನ್ನು ಮುಂದೆ ನೋಂದಣಿ ಇಲಾಖೆಯಲ್ಲಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಸಂಪುಟ ಸಮ್ಮತಿಸಿದೆ.

ಸಿಎ ನಿವೇಶನ ಇರುವುದು ಶೈಕ್ಷಣಿಕ ಉದ್ದೇಶಕ್ಕೆ; ಪಶು ಆಸ್ಪತ್ರೆಗಾಗಿ ಅಲ್ಲ

ಎಂಎಲ್‌ಸಿ ಮಂಜೇಗೌಡರಿಗೆ ರಘು ಕೌಟಿಲ್ಯ ತಿರುಗೇಟು

- ನಿಯಮ ಉಲ್ಲಂಘಿಸಿ ನಾನು ನಿವೇಶನ ಪಡೆದಿಲ್ಲ
- ನಿಯಮಾನುಸಾರ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದೇನೆ
- ಮಂಜೇಗೌಡರಂತೆ ಪಾರ್ಕ್ ಕಬಳಿಸಿಲ್ಲ, ಒಂದೇ ನಿವೇಶನ ಹಲವರಿಗೆ ಮಾರಾಟ ಮಾಡಿಲ್ಲ
- ಆಧಾರರಹಿತ ಆರೋಪ ಮಾಡಿದರೆ ಕಾನೂನು ಕ್ರಮ ಅನಿವಾರ್ಯ

ಮೈಸೂರು, ಜು.4(ಬಿಎಲ್‌ಯು)- ಮೈಸೂರಿನ ದಟ್ಟಗಳ್ಳಿಯಲ್ಲಿರುವ ಸಿಎ (ನಾಗರಿಕ ಸೌಲಭ್ಯ) ನಿವೇಶನವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮುಡಾದಿಂದ ನನಗೆ ನೀಡಲಾಗಿದೆಯೇ ಹೊರತು ಪಶು ಆಸ್ಪತ್ರೆಗಾಗಿ ಅಲ್ಲ ಎಂದು ಬಿಜೆಪಿ ಹಿಂದುಳಿದ ಮೋರ್ಚಾದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರಿಗೆ ತಿರುಗೇಟು ನೀಡಿದ್ದಾರೆ.


ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಡಾ ನಿಗದಿಪಡಿಸಿದ್ದ ಹಣವನ್ನು ನಿಯಮಾನುಸಾರ ಪಾವತಿಸಿ ಶೈಕ್ಷಣಿಕ ಉದ್ದೇಶಕ್ಕಾಗಿ ಸಿಎ ನಿವೇಶನವನ್ನು ಪಡೆದಿದ್ದೇನೆ. ಅಲ್ಲದೆ ಯಾವ ಉದ್ದೇಶಕ್ಕಾಗಿ ನಿವೇಶನ ಪಡೆದಿದ್ದೇನೆಯೋ ಅದರಂತೆ ಅಲ್ಲಿ ಶಾಲೆ ನಡೆಸುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ದಟ್ಟಗಳ್ಳಿಯಲ್ಲಿ ಶಾಲೆ ನಡೆಸಲು ಮುಡಾ ನೀಡಿರುವ ನಿವೇಶನದ ಮಂಜೂರಾತಿಯಲ್ಲಿ ನಿಯಮ ಉಲ್ಲಂಘನೆ ಮಾಡಲಾಗಿದೆ ಎಂಬ ಮಂಜೇಗೌಡ ಆರೋಪಕ್ಕೆ ರಘು ಕೌಟಿಲ್ಯ ನಿವೇಶನ ಮಂಜೂರಾತಿಯ ಸಮಗ್ರ ವಿವರದೊಂದಿಗೆ ಟಾಂಗ್ ನೀಡಿದ್ದಾರೆ.

ಬೋಗಾದಿಯಲ್ಲಿ ಮಂಜೂರಾಗಿದ್ದ ನಿವೇಶನದ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯ ನೀಡಿದ್ದ ತೀರ್ಪಿಗೆ ಅನುಗುಣವಾಗಿ ಹಾಗೂ ನ್ಯಾಯಾಂಗ ನಿಂದನೆ ಎದುರಿಸುವ ಹಿನ್ನೆಲೆಯಲ್ಲಿ ಜೂನ್ 22, 2022ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಈಗ ಶಾಲೆ ನಡೆಸುತ್ತಿರುವ ನಿವೇಶನ ಮಂಜೂರಾಗಿದೆ ಎಂದು ತಿಳಿಸಿದ್ದಾರೆ.

ಈ ಮೊದಲು ಮಂಜೂರಾಗಿದ್ದ ನಿವೇಶನದ ಮೇಲೆ ವಿದ್ಯುತ್ ಹೈ ಟೆನ್ಷನ್ ವೈಯರ್ ಹಾದು ಹೋಗಿತ್ತು. ಜೊತೆಗೆ ಶಾಲೆಗೆ ಅವಶ್ಯವಿರುವ ಒಂದು ಎಕರೆ ಜಾಗ ಕೂಡ ಇರಲಿಲ್ಲ. ಈ ಹಿನ್ನೆಲೆ ಬದಲಿ ನಿವೇಶನ ನೀಡುವಂತೆ ಕೋರಿದ್ದೆವು. ಆದರೆ ಇಂತಹ ಸ್ಥಳದಲ್ಲೇ ನಿವೇಶನ ಬೇಕೆಂದು ಕೇಳಿರಲಿಲ್ಲ. ಖಾಲಿ ಇದ್ದ ಜಾಗವನ್ನು ಹುಡುಕಿ ಈಗ ನಾವು ಶಾಲೆ ನಡೆಸುತ್ತಿರುವ ಜಾಗವನ್ನು ಮುಡಾದವರೇ ನಮಗೆ ಮಂಜೂರು ಮಾಡಿದ್ದಾರೆ ಎಂದು ರಘು ಕೌಟಿಲ್ಯ ಸ್ಪಷ್ಟಪಡಿಸಿದ್ದಾರೆ.

ತರುವಾಯ ಮುಡಾ ನಿಗದಿ ಮಾಡಿದ್ದ ಹಣವನ್ನು ನಿಯಮಾನುಸಾರ ಪಾವತಿಸಿ ಈ ನಿವೇಶನ ಪಡೆದಿದ್ದೇವೆ. ಈಗ ಸಿಎ ನಿವೇಶನದ ನಿಯಮದ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕಾಗಿ ಆ ಜಾಗ ಬಳಕೆ ಮಾಡಿಕೊಂಡು ಶಾಲೆ ನಡೆಸುತ್ತಿದ್ದೇವೆ. ವಸ್ತುಸ್ಥಿತಿ ಹೀಗಿರುವಾಗ ನಿಯಮ ಉಲ್ಲಂಘಿಸುವ ಮಾತು ಹೇಗೆ ಉದ್ಭವವಾಗುತ್ತದೆ ಎಂದು ಪ್ರಶ್ನಿಸಿರುವ ರಘು ಕೌಟಿಲ್ಯ, ಭವಿಷ್ಯದ ಉತ್ತಮ ಪ್ರಜೆಗಳನ್ನು ರೂಪಿಸಿ ಬದ್ಧತೆಯ ಶಿಕ್ಷಣ ಸಂಸ್ಥೆ ನಡೆಸುವುದನ್ನು ಸಹಿಸದ ಮನಸ್ಥಿತಿಯನ್ನು ಸಮಾಜಮುಖಿ ಎನ್ನಬೇಕೋ ಅಥವಾ ಸಮಾಜ ಕಂಟಕ ಎನ್ನಬೇಕೋ ಎಂಬ ತೀರ್ಮಾನವನ್ನು ನಾಗರಿಕ ಸಮಾಜದ ವಿವೇಚನೆಗೆ ಬಿಡುವೆ ಎಂದು ಹೇಳಿದ್ದಾರೆ.



ರಘು ಕೌಟಿಲ್ಯ

ನನಗೆ ನೀಡಿರುವ ನಿವೇಶನ ಮಂಜೂರಾತಿ ನಿರ್ಣಯ ಕೈಗೊಳ್ಳುವ ಪ್ರಾಧಿಕಾರದ ಸಭೆಯಲ್ಲಿ ಮಂಜೇಗೌಡರು ಕೂಡ ಹಾಜರಿದ್ದು, ಅವರು ಕೂಡ ಜವಾಬ್ದಾರರಾಗುತ್ತಾರೆ. ಆಗ ಯಾವುದೇ ರೀತಿಯ ಆಕ್ಷೇಪಣೆ ವ್ಯಕ್ತಪಡಿಸದೆ ಈಗ ನಾನು ಮುಡಾ ಹಗರಣ ಬಯಲಿಗೆಳೆದ ನಂತರ ಆಕ್ಷೇಪಿಸುತ್ತಿರುವುದನ್ನು ನೋಡಿದರೆ ಈ ಹಗರಣದಿಂದ ಅವರು ಕಂಗೆಟ್ಟಂತೆ ಕಾಣುತ್ತಿದೆ ಎಂದು ಲೇವಡಿ ಮಾಡಿದ್ದಾರೆ.

ಕಳೆದ 35 ವರ್ಷದ ನನ್ನ ಸಾರ್ವಜನಿಕ ಬದುಕಿನಲ್ಲಿ ಪಾರದರ್ಶಕತೆ ಕಾಪಾಡಿಕೊಂಡು ಬಂದಿದ್ದೇನೆ. ಯಾವುದೇ ಕಳಂಕ ಹಚ್ಚಿಕೊಳ್ಳದೆ ಕಳೆದ 20 ವರ್ಷಗಳಿಂದ ಶಿಕ್ಷಣ ಸಂಸ್ಥೆ ಕಟ್ಟಿ, ಶಿಕ್ಷಣದ ರಥ ಎಳೆಯುತ್ತಿದ್ದೇನೆಯೇ ಹೊರತು, ಉದ್ಯಾನವನದ ಭೂಮಿ ಆಕ್ರಮಿಸಿ, ಒಂದೇ ನಿವೇಶನವನ್ನು ಹಲವರಿಗೆ ಬರೆದುಕೊಟ್ಟ ಕುಖ್ಯಾತಿ ಹಿನ್ನೆಲೆ ನನ್ನ ಮೇಲಿಲ್ಲ ಎಂಬ ವಾಸ್ತವತೆ ಮಂಜೇಗೌಡರಿಗೆ ಅರಿವಿರಲಿ ಎಂದು ರಘು ಕೌಟಿಲ್ಯ ಸಲಹೆ ನೀಡಿದ್ದಾರೆ.

ಅಧಿಕಾರಿಗಳನ್ನು ನಾಲ್ಕು ಗೋಡೆ ಮಧ್ಯೆ ಕೂರಿಸಿಕೊಂಡು ಆಮಿಷ, ಬೆದರಿಕೆ ಒಡ್ಡಿ, ಅಕ್ರಮವಾಗಿ ನಿವೇಶನಗಳನ್ನು ಬರೆಸಿಕೊಂಡ ಇತಿಹಾಸ ನನ್ನದ್ದಲ್ಲ. ನಿಯಮ ಉಲ್ಲಂಘಿಸಿ ನಿವೇಶನ ಪಡೆಯುವ ಯಾವ ಉದ್ದೇಶವೂ ನನಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸಿಎ ನಿವೇಶನಗಳನ್ನು ನಾಗರಿಕ ಸೌಲಭ್ಯ ಒದಗಿಸಲು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗುತ್ತಿದೆಯೇ ಹೊರತು, ಮಾರುಕಟ್ಟೆಯಲ್ಲಿ ಬೆಲೆ ನಿಗದಿ ಮಾಡಿ ಮಾರಾಟ ಮಾಡುವ ವಸತಿ ಅಥವಾ ವಾಣಿಜ್ಯ ನಿವೇಶನಗಳಲ್ಲ ಎಂಬ ತಿಳುವಳಿಕೆ ಇದ್ದವರು ಯಾರೂ ಇಂತಹ ಆರೋಪ ಮಾಡುವುದಿಲ್ಲ ಎಂದು ರಘು ಕೌಟಿಲ್ಯ ತಿಳಿಸಿದ್ದಾರೆ.

> ಮುಡಾದಲ್ಲಿ ನಡೆದಿರುವ ಹಗರಣದ ಬಗ್ಗೆ ಸ್ವತಂತ್ರ ತನಿಖಾ ತಂಡ ಅಥವಾ ಸಿಬಿಐ ತನಿಖೆಗೆ ಒತ್ತಾಯಿಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಅಕ್ರಮವಾಗಿ ಮಂಜೂರಾಗಿರುವ ನಿವೇಶನ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಒತ್ತಾಯಿಸಿದ್ದೇನೆಯೇ ಹೊರತು, ಯಾರ ಮೇಲೂ ವೈಯಕ್ತಿಕ ಆರೋಪ ಮಾಡಿಲ್ಲ. ಅದಾಗಿಯೂ ದುರುದ್ದೇಶಪೂರಿತ ಅಪಪ್ರಚಾರ, ಆಧಾರ ರಹಿತ, ವ್ಯಕ್ತಿಗತ ಆರೋಪಗಳು ಮತ್ತೆ ನನ್ನ ಹಾಗೂ ನನ್ನ ಶಿಕ್ಷಣ ಸಂಸ್ಥೆಯ ಮೇಲೆ ಯಾರಿಂದಲೇ ಕೇಳಿ ಬಂದರೂ ಕಾನೂನು ಕ್ರಮ ಅನಿವಾರ್ಯವಾಗುತ್ತದೆ.
>
> – ರಘು ಕೌಟಿಲ್ಯ

ಆದರೂ ನನಗೆ ಮಂಜೂರಾಗಿರುವ ನಿವೇಶನದಲ್ಲಿ ನಾನು ತಪ್ಪೆಸಗಿರುವುದು ಕಂಡು ಬಂದರೆ ಅದನ್ನು ಸಾಬೀತುಪಡಿಸಲಿ ಎಂದು ಸವಾಲು ಹಾಕಿರುವ ರಘು ಕೌಟಿಲ್ಯ, ಒಂದು ವೇಳೆ ನಾನೇನಾದರೂ ನಿಯಮ ಉಲ್ಲಂಘಿಸಿದ್ದರೆ, ಸಾರ್ವಜನಿಕ ಬದುಕಿನಲ್ಲಿ ನಿವೃತ್ತಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಸದ್ಯ ಮುಡಾದ ಬಹುಕೋಟಿ ಹಗರಣದ ವಿರುದ್ಧ ಹೋರಾಟ ಮುಂದುವರೆಸುವ ಸಂದರ್ಭದಲ್ಲಿ ಯಾವುದೇ ಬಗೆಯ ಬ್ಲ್ಯಾಕ್‌ಮೇಲ್ ಅಥವಾ ಗೊಡ್ಡು ಬೆದರಿಕೆಗಳಿಗೆ ಹೆದರುವ, ಜಗ್ಗುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದ್ದಾರೆ.


ಚಾಮರಾಜನಗರ ಎಸ್‌ಪಿಗೆ ಅಭಿನಂದನೆ



ಚಾಮರಾಜನಗರ ಜಿಲ್ಲೆಯ ನೂತನ ಎಸ್‌ಪಿ ಡಾ.ಬಿ.ಟಿ.ಕವಿತಾ ಅವರನ್ನು ಇಂಡಿಯನ್ ಟಿವಿ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ವೆಂಕಟೇಶ್ ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು. ರವಿಕುಮಾರ್, ಸಿ.ಪ್ರಕಾಶ್, ಪ್ರೀತಮ್, ತೇಜಸ್ ಚಿತ್ರದಲ್ಲಿದ್ದಾರೆ.

ಪ್ರಧಾನಿ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯಲ್ಲಿ ಕುಮಾರಸ್ವಾಮಿಗೆ ಸ್ಥಾನ

ಬೆಂಗಳೂರು, ಜು. 4(ಕೆಎಂಶಿ)- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯಲ್ಲಿ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಸಮಿತಿಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್, ಗೃಹ ಸಚಿವ ಅಮಿತ್ ಷಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಜೈಶಂಕರ್, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಪಂಚಾಯತ್ ರಾಜ್ ಮತ್ತು ಮೀನುಗಾರಿಕಾ ಸಚಿವ ರಾಜೀವ್ ರಂಜನ್ ಸಿಂಗ್ ಅವರುಗಳು ಇತರ ಸದಸ್ಯರಾಗಿದ್ದಾರೆ.



ಭದ್ರತೆ, ಆರ್ಥಿಕ ಮತ್ತು ರಾಜಕೀಯ ವ್ಯವಹಾರಗಳು ಕುರಿತಂತೆ ದೇಶದ ಅತ್ಯುನ್ನತ ಮಟ್ಟದಲ್ಲಿ ಮಹತ್ವದ ನಿರ್ಣಯ ಕೈಗೊಳ್ಳುವ ಎಂಟು ವಿವಿಧ ಸಂಪುಟ ಸಮಿತಿಗಳನ್ನು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ರಚನೆ ಮಾಡಿದೆ.

ಜು.10, ಅಕ್ರಮ ನಿವೇಶನ ಹಂಚಿಕೆ ವಿರುದ್ಧ ಕೆಆರ್‌ಎಸ್ ಪಕ್ಷದಿಂದ ಮುಡಾಗೆ ಮುತ್ತಿಗೆ

ಮೈಸೂರು, ಜು.4(ಜಿಎ)-ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಡೆದಿರುವ ಅಕ್ರಮಗಳ ವಿರುದ್ಧ ಕೆಆರ್‌ಎಸ್ ಪಕ್ಷ ಜು.10ರಂದು ಮುಡಾಗೆ ಮುತ್ತಿಗೆ ಹಾಕಲಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಉಪಾಧ್ಯಕ್ಷ ಎಸ್.ಎನ್.ಲಿಂಗರಾಜೇಗೌಡ ಎಚ್ಚರಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವಿರಾರು ಮಂದಿ ಅರ್ಜಿ ಹಾಕಿ ಮುಡಾ ನಿವೇಶನಕ್ಕಾಗಿ ಹಲವಾರು ದಶಕಗಳಿಂದ ಕಾಯುತ್ತಿದ್ದಾರೆ. ಹೀಗಿರುವಾಗ ಬೆಲೆಬಾಳುವ ನಿವೇಶನಗಳನ್ನು ಈ ರೀತಿ ಅಕ್ರಮವಾಗಿ ನೀಡಲಾಗಿದೆ. ಆದ್ದರಿಂದ ಸಿಎಂ ಸಿದ್ದರಾಮಯ್ಯ ಅವರು ಕೂಡಲೇ ಇತ್ತ ಗಮನಹರಿಸಿ, ಅಂತಹ ನಿವೇಶನ ವಶಪಡಿಸಿಕೊಂಡು ಅರ್ಜಿ ಹಾಕಿರುವ ಅರ್ಹರಿಗೆ ವಿತರಿಸಬೇಕೆಂದು ಆಗ್ರಹಿಸಿದರು.

ಮುಡಾದಲ್ಲಿ ಶೇ.50:50 ಅನುಪಾತದ ನೆಪದಲ್ಲಿ ನಿಜವಾಗಿ ಭೂಮಿ ಕಳೆದುಕೊಂಡವರ ಬದಲಾಗಿ ಜಿಪಿಎ ಹೊಂದಿರುವವರಿಗೆ, ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಕಿಕ್‌ಬ್ಯಾಕ್ ಪಡೆದು ಸಾವಿರಾರು ನಿವೇಶನ ವಿತರಿಸಲಾಗಿದೆ. ಆದರೂ ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವ ಬದಲು ಕೇವಲ ವರ್ಗಾವಣೆ ಮಾಡಿರುವುದು ಸರಿಯಲ್ಲ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಕಿಡಿಕಾರಿದೆ.

ಓರ್ವ ಜಿಪಿಯ ಹೋಲ್ಡರ್‌ಗೆ ಸುಮಾರು ನೂರು ನಿವೇಶನ ವಿತರಿಸಿರುವ ಉದಾಹರಣೆ ಇದೆ. ಇದೇ ರೀತಿ ಹಲವರಿಗೆ 90ಕ್ಕೂ ಆಸುಪಾಸಿನಲ್ಲಿ ನಿವೇಶನ ವಿತರಿಸಲಾಗಿದೆ. ಓರ್ವರು ಮುಡಾಕ್ಕೆ ಭೂಮಿಯನ್ನೇ ನೀಡಿಲ್ಲ. ಆದರೂ ಅವರಿಗೆ ಭೂಮಿ ನೀಡಿದ್ದಾರೆಂದು ದಾಖಲೆ ತೋರಿಸಿ ನಿವೇಶನ ನೀಡಲಾಗಿದೆ. ಇದರೊಡನೆ ಜಮೀನುಗಳ ಮೃತ ಮಾಲೀಕರಿಗೂ ಸಹಾ ಇತರರನ್ನು ಕರೆತಂದು ಅವರ ಹೆಸರಿಗೆ ನಿವೇಶನ ನೀಡಲಾಗಿದೆ. ಈ ರೀತಿಯ ಅಕ್ರಮಗಳಲ್ಲಿ ಮುಡಾದ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದಾರೆ. ಆದರೂ ಅವರಿಗೆ ಶಿಕ್ಷೆ ವಿಧಿಸುವ ಬದಲು ಕೇವಲ ವರ್ಗಾವಣೆ ಮಾಡಿರುವುದು ಸರಿಯಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ನಿವೇಶನ ಪಡೆದುಕೊಳ್ಳುವ ಮೂಲಕ ನೇರವಾಗಿ ಮುಖ್ಯಮಂತ್ರಿಗಳೇ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಮತ್ತೊಂದೆಡೆ ಶೇ.50:50 ಅನುಪಾತದ ಕುರಿತು 2020ರಲ್ಲಿ ನಡೆದ ಮುಡಾ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿದೆ. ಆದರೆ, ಯಾವುದೇ ನಿರ್ಣಯ ಕೈಗೊಂಡಿಲ್ಲ. ಆದರೂ ಅಧ್ಯಕ್ಷ ಮತ್ತು ಆಯುಕ್ತರು ಕೆಲ ಪ್ರಕರಣಗಳಲ್ಲಿ ಶೇ.50:50 ಅನುಪಾತದಲ್ಲಿ ನಿವೇಶನ ನೀಡಲು ತೀರ್ಮಾನಿಸಲಾಗಿದೆ ಎಂದು ಸಹಿ ಮಾಡಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಕೆ.ಎಸ್.ಸೋಮಸುಂದರ್, ಕಾನೂನು ಸಲಹೆಗಾರ ರವಿಕುಮಾರ್, ನಾಗೇಂದ್ರ, ಸುಂದರ್ ಪ್ರೇಮ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕೃತಿ ಬಿಡುಗಡೆ

ಮೈಸೂರು, ಜು.4(ಜಿಎ)-ಕವಿತಾ ಪ್ರಕಾಶನ ಹೊರತಂದಿರುವ ನಿವೃತ್ತ ಬ್ಯಾಂಕ್ ಅಧಿಕಾರಿ ರಘುಪತಿ ತಾಮ್ಹನ್‌ಕರ್ ಅವರ ಬ್ಯಾಂಕ್ ಸೇವಾವಧಿಯ ಸ್ವಾರಸ್ಯಕರ ಸಂಗತಿಯನ್ನೊಳಗೊಂಡ 'ನೋಟಿನ ನಂಟು' ಕೃತಿ ಬಿಡುಗಡೆ ಸಮಾರಂಭವನ್ನು ಜು.7ರಂದು ಬೆಳಗ್ಗೆ 10.30ಕ್ಕೆ ಜೆಎಲ್‌ಬಿ ರಸ್ತೆಯ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಕಾಶನ ಸಂಸ್ಥೆಯ ಗಣೇಶ ಅಮೀನಗಡ ಈ ವಿಷಯ ತಿಳಿಸಿ, ಲೇಖಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಬಿಡುಗಡೆಗೊಳಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕ್ ವಿಭಾಗೀಯ ಪ್ರಬಂಧಕ ಕೆ.ಗೋಪಾಲ, ಬ್ಯಾಂಕ್ ಉದ್ಯೋಗಿ ಡಾ.ಶುಭಶ್ರೀ ಪ್ರಸಾದ್ ಅತಿಥಿಗಳಾಗಿ ಆಗಮಿಸಲಿದ್ದಾರೆ. ಹಿರಿಯ ಸಾಹಿತಿ ಡಾ.ಸಿಪಿಕೆ ಅಧ್ಯಕ್ಷತೆ ವಹಿಸುವರು.

ಬಹುಕೋಟಿ ಮುಡಾ ಹಗರಣ: ಸಿಬಿಐ ತನಿಖೆಗೆ ರಾಜ್ಯಪಾಲರ ಮೊರೆ ಹೋಗಲು ಎಂಜಿಪಿ ನಿರ್ಧಾರ

- ನಿವೇಶನ ಹಿಂದಕ್ಕೆ ನೀಡಲು ಸಿಎಂಗೂ ಮನವಿ
- ವಿಜಯ ಭಾಸ್ಕರ್ ವರದಿ ಸಂಬಂಧವೂ ಹೋರಾಟ

ಮೈಸೂರು, ಜು.4(ಎಂಕೆ)- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಶೇ.50:50ರ ಅನುಪಾತದಡಿ ಹಾಗೂ ಬದಲಿ ನಿವೇಶನಗಳ ಹಂಚಿಕೆಯಲ್ಲಾಗಿರುವ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಖುದ್ದು ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಮಾಡಲು ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಸಭೆಯಲ್ಲಿ ಒಕ್ಕೊರಲ ನಿರ್ಧಾರ ಕೈಗೊಳ್ಳಲಾಯಿತು.

ಮೈಸೂರಿನ ಯಾದವಗಿರಿ ವಿವೇಕಾನಂದ ರಸ್ತೆಯಲ್ಲಿರುವ ಮೈಗ್ರಾಪ ಕಚೇರಿಯಲ್ಲಿ ಗುರುವಾರ ನಡೆದ ಸಭೆಯಲ್ಲಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸಾವಿರಾರು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡುವ ಮೂಲಕ ರಾಜ್ಯಪಾಲರ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡಿದೆ. ಈ ಕುರಿತು ರಾಜ್ಯಪಾಲರಿಗೆ ಮನವರಿಕೆ ಮಾಡಿಕೊಡುವ ಜೊತೆಗೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಸೂಚನೆ ನೀಡುವಂತೆ ಮನವಿ ಮಾಡಲು ನಿರ್ಧರಿಸಲಾಯಿತು.

ಈ ವೇಳೆ ಹಿರಿಯ ವಕೀಲ ಎಸ್.ಅರುಣ್ ಕುಮಾರ್ ಮಾತನಾಡಿ, ಮಾದೇಗೌಡ ಅವರ ಆಡಳಿತ ಸಮಯದಲ್ಲಿ ಸೈಟ್ ಹಂಚುವಾಗ ಯಾರೂ ಕೊಂಡುಕೊಳ್ಳಲು ಮುಂದೆ ಬರುತ್ತಿರಲಿಲ್ಲ. ರಿಯಲ್ ಎಸ್ಟೇಟ್ ಬೆಳೆದಂತೆ ಮುಡಾದ ಉದ್ದೇಶಗಳನ್ನು ಪೂರೈಸುವ ನೆಪದಲ್ಲಿ ಖಾಸಗಿ ಬಿಲ್ಡರ್‌ಗಳು ಮುಡಾವನ್ನು ಆಕ್ರಮಿಸಿಕೊಂಡಿದ್ದಾರೆ. ಒಟ್ಟಾರೆ ಲ್ಯಾಂಡ್ ಮಾಫಿಯಾವು ಮುಡಾವನ್ನು ಆಕ್ರಮಿಸಿದೆ ಎಂದರು.



ಮೈಸೂರಿನ ಯಾದವಗಿರಿಯಲ್ಲಿರುವ ಮೈಗ್ರಾಪ ಕಚೇರಿಯಲ್ಲಿ ಗುರುವಾರ ಮುಡಾ ಸೈಟು ಹಂಚಿಕೆ ಹಗರಣ ಕುರಿತು ಚರ್ಚಿಸಲಾಯಿತು.

ಸಿಎಂ ಮುಂದೆ ನಿಲ್ಲಿಸಿ ಭೂಗಳ್ಳರ ಆಟ: ಆರಂಭದಲ್ಲಿ ಜಮೀನು ನೀಡಿದವರಿಗೆ 60:40ರ ಅನುಪಾತದಲ್ಲಿ ನಿವೇಶನ ಹಂಚಿಕೆಯಾಗುತ್ತಿತ್ತು. 2015ರ ನಂತರ 50:50ರ ಅನುಪಾತದಲ್ಲಿ ಹಂಚಿಕೆಯಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಂದಿರಿಸಿ ಇತರೆ ಭೂಗಳ್ಳರು ಆಟ ಆಡುತ್ತಿದ್ದಾರೆ. ಮುಡಾದಲ್ಲಿ ನಡೆದಿರುವ ಅಕ್ರಮಕ್ಕೆ ಸಿಎಂ ಅವರದ್ದು ಒಂದು ಸಣ್ಣ ಉದಾಹರಣೆಯಷ್ಟೇ ಎಂದು ಹೇಳಿದರು.

ದೇವನೂರು ಬಡಾವಣೆಗಾಗಿ 1998ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಯ ಹೆಸರಿನಲ್ಲಿರುವ ಭೂಮಿಯನ್ನು ಮುಡಾ ಪಡೆದುಕೊಂಡಿತ್ತು. ಆದರೆ 2021ರಲ್ಲಿ 50:50ರ ಅನುಪಾತದಲ್ಲಿ 14 ಸೈಟ್‌ಗಳನ್ನು ನೀಡಿದ್ದು ಕಾನೂನು ಬಾಹಿರ. ಆ ಸೈಟ್‌ಗಳನ್ನು ಮುಡಾಕ್ಕೆ ವಾಪಸ್ ಮಾಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡೋಣ. ಮುಖ್ಯಮಂತ್ರಿಗಳು ಏನಾದರೂ ವಾಪಸ್ ನೀಡಿದರೆ ಅಕ್ರಮವಾಗಿ ಹಂಚಿಕೆಯಾದ 2 ರಿಂದ 3 ಸಾವಿರ ಸೈಟ್‌ಗಳು ಮುಡಾಗೆ ವಾಪಸ್ಸಾಗಲಿವೆ. ಆ ಮೂಲಕ ವಾಪಸ್ ಆದ ಸೈಟ್‌ಗಳನ್ನು ಹಿರಿಯ ನಾಗರಿಕರಿಗೆ ಹಂಚುವ ಕೆಲಸವಾಗಲಿ ಎಂದು ಅಭಿಪ್ರಾಯಿಸಿದರು.

ಪರಿಷತ್ ಮೂಲಕ ಹೋರಾಟ: ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಸಂಚಾಲಕ ಭಾಮಿ ವಿ.ಶೆಣೈ ಮಾತನಾಡಿ, ಮುಡಾದಲ್ಲಿನ ಹಿಂದಿನಿಂದ ಆದ ಭ್ರಷ್ಟಾಚಾರ ಹೊರಗೆಳೆಯಬೇಕು. ವಿಜಯ ಭಾಸ್ಕರ್ ಸಮಿತಿಯ ವರದಿ ತೆಗೆದರೆ ಇದಕ್ಕಿಂತ ಹೆಚ್ಚು ಅಕ್ರಮ ಬಯಲಿಗೆ ಬರುತ್ತದೆ. ಮುಡಾದಲ್ಲಿ ನಡೆದಿರುವ ಭ್ರಷ್ಟಾಚಾರ ಮುಂದಿಟ್ಟುಕೊಂಡು ವಿಜಯ ಭಾಸ್ಕರ್ ಅವರ ವರದಿಯ ಬಗ್ಗೆಯೂ ಜನತೆಯಲ್ಲಿ ಜಾಗೃತಿ ಮೂಡಿಸಬೇಕು. ಯಾವುದೇ ರಾಜಕೀಯ ಪಕ್ಷದೊಂದಿಗೆ ಸೇರದೆ ಪರಿಷತ್ ಮೂಲಕವೇ ಹೋರಾಟ ಮುಂದುವರೆಸೋಣ. ದೊಡ್ಡಮಟ್ಟದಲ್ಲಿ ಹೋರಾಟ ನಡೆಸಿ, ಮುಡಾ ಅಕ್ರಮಕ್ಕೆ ತಾರ್ಕಿಕ ಅಂತ್ಯ ಹಾಡಬೇಕಿದೆ ಎಂದು ಹೇಳಿದರು.


ರಾಜ್ಯಪಾಲರಿಗೆ ಮನವಿ: ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್ ಮಾತನಾಡಿ, ರಾಜ್ಯಪಾಲರನ್ನು ಭೇಟಿ ಮಾಡಿ ಮುಡಾದಲ್ಲಿ ನಡೆದಿರುವ ಅಕ್ರಮಗಳ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಸರ್ಕಾರಕ್ಕೆ ಸೂಚನೆ ನೀಡಲು ಮನವಿ ಮಾಡಬೇಕು. ಇಲ್ಲವಾದರೆ ತನಿಖೆಯನ್ನು ಇಷ್ಟಕ್ಕೆ ನಿಲ್ಲಿಸುವ ಸಾಧ್ಯತೆಗಳು ಇರುತ್ತವೆ ಎಂಬ ಮಾತಿಗೆ ಸಭೆಯಲ್ಲಿದ್ದ ಎಲ್ಲರೂ ಒಪ್ಪಿಗೆ ಸೂಚಿಸಿದರಲ್ಲದೆ ರಾಜ್ಯಪಾಲರ ಭೇಟಿಗೆ ದಿನಾಂಕ ನಿಗದಿ ಮಾಡುವಂತೆಯೂ ಪ್ರಸ್ತಾಪಿಸಿದರು.

2019ರ ನಂತರ!: ಮುಡಾ ನಿವೃತ್ತ ಅಧಿಕಾರಿ ನಟೇಶ್ ಮಾತನಾಡಿ, ಮುಡಾದಲ್ಲಿ ನಾನಿದ್ದಾಗಲೂ ಅಲ್ಲೊಂದು ಇಲ್ಲೊಂದು ಅಕ್ರಮ ನಿವೇಶನ ಹಂಚಿಕೆ ನಡೆಯುತ್ತಿದ್ದವು. 2019-20ರ ನಂತರ ನಡೆದಿರುವ ಹಗರಣಗಳು ಹೇಸಿಗೆ ಪಡುವಂತಿವೆ. ಮನೆಯಲ್ಲಿಯೇ ಕುಳಿತು ಅಕ್ರಮ ಹಂಚಿಕೆಗೆ ಸಹಿ ಮಾಡಿದ್ದಾರೆ. ಭೂ ಸ್ವಾದೀನ ಪಡೆದ ನಂತರ ರಾಜ್ಯಪಾಲರ ಹೆಸರಿನಲ್ಲಿ ರಿಜಿಸ್ಟರ್ ಮಾಡಿ, ಅಕ್ರಮವಾಗಿ ಹಂಚಿಕೆ ಮಾಡುವ ಮೂಲಕ ರಾಜ್ಯಪಾಲರ ಹೆಸರಿಗೂ ಮಸಿ ಬಳಿದಿದ್ದಾರೆ. ರೈತರ ಜಮೀನನ್ನು ಕಬಳಿಸಿದ್ದಾರೆ ಎಂದು ದೂರಿದರು.

ಹಾಗೆಯೇ ಮುಡಾ ಅಕ್ರಮದ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡುವುದು. ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸುವುದು ಸೇರಿದಂತೆ ಇತ್ಯಾದಿ ಸಲಹೆಗಳು ಸಭೆಯಲ್ಲಿ ಕೇಳಿಬಂದವು. ರವಿಶಂಕರ್, ವಿ.ಎಸ್. ಸೀತಾರಾಮ್, ಎಸ್.ಶೋಭಾ, ಓಂಕಾರಯ್ಯ, ಎಸ್.ಅರುಣ್ ಕುಮಾರ್, ಎಸ್.ಕೆ. ದಿನೇಶ್, ವಿಶ್ವನಾಥ್, ಭಾನುಪ್ರಕಾಶ್ ಮತ್ತಿತರರಿದ್ದರು.

ದೇಶ - ವಿದೇಶ

ನಾಲ್ಕೂವರೆ ಲಕ್ಷ ಗೂಬೆಗಳನ್ನು ಕೊಲ್ಲಲು ಆದೇಶ!



ಅಮೆರಿಕಾ: ಇತ್ತೀಚೆಗೆ ಕೀನ್ಯಾ ತನ್ನ ದೇಶದಲ್ಲಿ ಸುಮಾರು 10 ಲಕ್ಷ ಭಾರತೀಯ ಮೂಲದ ಕಾಗೆಗಳನ್ನು ಕೊಲ್ಲುವುದಾಗಿ ಘೋಷಿಸಿತ್ತು. ಅದರ ಬೆನ್ನಲ್ಲೇ ಇದೀಗ ಗೂಬೆಗಳನ್ನು ನಿರ್ನಾಮ ಮಾಡಲು ಅಮೆರಿಕ ಕರಡು ಸಿದ್ಧಪಡಿಸಿದೆ.

ಸುಮಾರು 5 ಲಕ್ಷ 'ಬಾರ್ಡ್' ಗೂಬೆಗಳನ್ನು ಕೊಲ್ಲಲು ಅಮೆರಿಕ ಪ್ಲಾನ್ ಮಾಡಿದ್ದು, ಇವುಗಳು ಅಮೆರಿಕದ 'ಸ್ಪಾಟೆಡ್ ಗೂಬೆ' ಜಾತಿಗೆ ಬೆದರಿಕೆಯಾಗಿ ಪರಿಣಮಿಸಿವೆ ಎಂದು ಹೇಳಲಾಗುತ್ತಿದೆ. ಮಚ್ಚೆಯುಳ್ಳ ಗೂಬೆಗಳು ವಿನಾಶದ ಅಂಚಿನಲ್ಲಿವೆ. ಇಂತಹ ಪರಿಸ್ಥಿತಿಯಲ್ಲಿ ದೇಶದ ಪಶ್ಚಿಮ ಕರಾವಳಿಯ ದಟ್ಟ ಅರಣ್ಯದಲ್ಲಿ ವೃತ್ತಿಪರ ಶೂಟರ್‌ಗಳನ್ನು ನಿಯೋಜಿಸಿ ಬಾರ್ಡ್ ಗೂಬೆಗಳನ್ನು ಕೊಲ್ಲಲು ವನ್ಯಜೀವಿ ಅಧಿಕಾರಿಗಳು ನಿರ್ಧರಿಸಿದ್ದಾರೆ. ಈ ಯೋಜನೆಯಡಿ ಸುಮಾರು 5 ಲಕ್ಷ 'ಬಾರ್ಡ್' ಗೂಬೆಗಳನ್ನು ಕೊಲ್ಲುವ ಗುರಿ ಹೊಂದಲಾಗಿದ್ದು, 'ಬಾರ್ಡ್' ಗೂಬೆಗಳು ಯುಎಸ್‌ನಲ್ಲಿನ 'ಮಚ್ಚೆಯುಳ್ಳ' ಗೂಬೆ ಜಾತಿಗಳಿಗೆ ಕಂಟಕವಾಗಿ ಪರಿಣಮಿಸಿವೆ. ಯುಎಸ್ ವನ್ಯಜೀವಿ ಇಲಾಖೆಯು ಒರೆಗಾನ್, ವಾಷಿಂಗ್ಟನ್ ಮತ್ತು ಕ್ಯಾಲಿಫೋರ್ನಿಯಾದಲ್ಲಿ ಕ್ಷೀಣಿಸುತ್ತಿರುವ ಮಚ್ಚೆಯುಳ್ಳ ಗೂಬೆ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ. ಹೀಗಾಗಿ ಈ ಯೋಜನೆಯಡಿ ಮುಂದಿನ 3 ದಶಕಗಳಲ್ಲಿ 4.50 ಲಕ್ಷ 'ಬಾರ್ಡ್' ಗೂಬೆಗಳಿಗೆ ಗುಂಡು ಹಾರಿಸಿ ಕೊಲ್ಲಲು ನಿರ್ಧರಿಸಲಾಗಿದೆ.

ಬ್ರಿಟನ್‌ನಲ್ಲಿ ಮತದಾನ ಆರಂಭ: ರಿಷಿ ಸುನಕ್‌ಗೆ ಲೇಬರ್ ಪಕ್ಷದ ಸವಾಲು



ಲಂಡನ್: ಯುನೈಟೆಡ್ ಕಿಂಗ್‌ಡಮ್ ಲಕ್ಷಾಂತರ ಮಂದಿ ಮತದಾರರು ಹೊಸ ಸರ್ಕಾರ ಆಯ್ಕೆಗೆ ತಮ್ಮ ಹಕ್ಕು ಚಲಾಯಿಸುತ್ತಿದ್ದಾರೆ. ಭಾರತದ ಅಳಿಯ, ಹಾಲಿ ಪ್ರಧಾನಿ ರಿಷಿ ಸುನಕ್ ಅವರ ಕನ್ಸರ್ವೇಟಿವ್ ಪಾರ್ಟಿ ಮರು ಆಯ್ಕೆ ಬಯಸಿದೆ. ಆದರೆ ಕಳೆದ ಒಂದೂವರೆ ದಶಕಗಳ ಕನ್ಸರ್ವೇಟಿವ್ ಆಡಳಿತಕ್ಕೆ ಮತದಾರ ಅಂತ್ಯ ಹಾಡಲು ಬಯಸಿದ್ದು, ವಿರೋಧ ಪಕ್ಷದ ಸ್ಥಾನದಲ್ಲಿರುವ ಲೇಬರ್ ಪಾರ್ಟಿ ಅಧಿಕಾರಕ್ಕೆ ಬರಲಿದೆ ಎಂದು ಚುನಾವಣಾ ಪೂರ್ವ ಸಮೀಕ್ಷೆಗಳು ಅಂದಾಜಿಸಿವೆ.

ಕೀರ್ ಸ್ಟಾರ್ಮರ್ ನೇತೃತ್ವದ ಲೇಬರ್ ಪಕ್ಷವು ನಿಚ್ಚಳ ಬಹುಮತ ಪಡೆಯಲಿದೆ ಎಂದು ಸಮೀಕ್ಷೆಗಳು ಹೇಳಿವೆ. ಭಾರತ ಮೂಲದ ಮೊದಲ ಬ್ರಿಟಿಷ್ ಪ್ರಧಾನಿ ಎನಿಸಿರುವ ರಿಷಿ ಸುನಕ್, ಲೇಬರ್ ಪಕ್ಷ ಅಧಿಕಾರಕ್ಕೆ ಬಂದರೆ ವಿಪರೀತ ತೆರಿಗೆ ಹೊರೆಯ ಸಂಕಷ್ಟ ಎದುರಿಸಬೇಕಾಗಲಿದೆ. ಹೀಗಾಗಿ ಲೇಬರ್ ಪಾರ್ಟಿಗೆ ಬಹುಮತ ನೀಡದಂತೆ ಚುನಾವಣೆಗೂ ಮುನ್ನ ಮತದಾರರಿಗೆ ಕೊನೆಯ ಮನವಿ ಮಾಡಿದ್ದಾರೆ. ಕನ್ಸರ್ವೇಟಿವ್ ಪಕ್ಷದ ಏಕಸ್ವಾಮ್ಯತೆ ವಿರುದ್ಧ ಹರಿಹಾಯ್ದಿರುವ ಸ್ಟಾರ್ಮರ್, ಪ್ರಧಾನಿ ಸುನಕ್ ಜನರನ್ನು ಮತದಾನದಿಂದ ಹಿಂಜರಿಯುವಂತೆ ಮಾಡುವ ಮೂಲಕ ಮತದಾರರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ನಿಮಗೆ ಬದಲಾವಣೆ ಬೇಕಿದ್ದರೆ ಅದಕ್ಕೆ ನೀವು ಮತ ಚಲಾಯಿಸಬೇಕು ಎಂದು ಲೇಬರ್ ಪಾರ್ಟಿ ನಾಯಕ ಹೇಳಿದ್ದಾರೆ. ಇಂಗ್ಲೆಂಡ್, ಸ್ಕಾಟ್ಲೆಂಡ್, ವೇಲ್ಸ್ ಮತ್ತು ನಾರ್ದರ್ನ್ ಐರ್ಲೆಂಡ್‌ನ 650 ಸಂಸತ್ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ಮತದಾರರು ನಿರ್ಧರಿಸಲಿದ್ದಾರೆ. 4.60 ಕೋಟಿ ಅರ್ಹ ಮತದಾರರಿದ್ದಾರೆ.

ಅಸ್ಸಾಂನ 29 ಜಿಲ್ಲೆಗಳು ಜಲಾವೃತ; 16.50 ಲಕ್ಷ ಮಂದಿ ಜೀವನ ಅಸ್ತವ್ಯಸ್ತ: 56 ಸಾವು



ಗುವಾಹಟಿ: ಅಸ್ಸಾಂನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ತೀವ್ರಗೊಂಡಿದ್ದು, ರಾಜ್ಯದ 29 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಏರ್ಪಟ್ಟು ಬರೋಬ್ಬರಿ 16.50 ಲಕ್ಷಕ್ಕೂ ಅಧಿಕ ಮಂದಿ ಸಂಕಷ್ಟಕ್ಕೊಳಗಾಗಿದ್ದಾರೆ.

ಅಸ್ಸಾಂ ರಾಜ್ಯದ ಪ್ರಮುಖ ನದಿಗಳಾದ ಬ್ರಹ್ಮಪುತ್ರ, ದಿಗಾರೂ ಮತ್ತು ಕೊಲೊಂಗ್ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹಲವು ಪ್ರದೇಶಗಳು ಜಲಾವೃತಗೊಂಡಿವೆ. ಪ್ರವಾಹ, ಭೂಕುಸಿತ, ಮಳೆ ಸಂಬಂಧಿತ ಅವಘಡಗಳಲ್ಲಿ ರಾಜ್ಯದಲ್ಲಿ ಈವರೆಗೆ 56 ಮಂದಿ ಮೃತಪಟ್ಟಿದ್ದು, ಮೂವರು ನಾಪತ್ತೆಯಾಗಿದ್ದಾರೆ. ಧುಬ್ರಿ ಜಿಲ್ಲೆಯಲ್ಲಿ ಅತೀ ಹೆಚ್ಚು 2.23 ಲಕ್ಷಕ್ಕೂ ಅಧಿಕ, ದರಾಂಗ್‌ನಲ್ಲಿ 1.84 ಲಕ್ಷಕ್ಕೂ ಅಧಿಕ ಮತ್ತು ಲಖಿಂಪುರ ಜಿಲ್ಲೆಯಲ್ಲಿ 1.66 ಲಕ್ಷಕ್ಕೂ ಅಧಿಕ ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರವಾಹ, ಭೂಕುಸಿತ ಮತ್ತು ಚಂಡಮಾರುತದಲ್ಲಿ ಸತ್ತವರ ಸಂಖ್ಯೆ 56ಕ್ಕೆ ಏರಿದ್ದು, ಪ್ರವಾಹದ ನೀರಿನಲ್ಲಿ ಕೊಚ್ಚಿಹೋದ ಮೂವರು ನಾಪತ್ತೆಯಾಗಿದ್ದಾರೆ. ನಿಮತಿಘಾಟ್, ತೇಜ್‌ಪುರ, ಗುವಾಹಟಿ, ಗೋಲ್‌ಪಾರಾ ಮತ್ತು ಧುಬ್ರಿಯಲ್ಲಿ ಬ್ರಹ್ಮಪುತ್ರ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ದರ್ರಾಂಗ್‌ನಲ್ಲಿ ಸುಮಾರು 1.84 ಲಕ್ಷ ಜನರು ಪ್ರವಾಹದ ನೀರಿನಲ್ಲಿ ತತ್ತರಿಸುತ್ತಿದ್ದಾರೆ.

ಪಾಕಿಸ್ತಾನದಲ್ಲಿ ಉಪಚುನಾವಣೆ ಪ್ರಚಾರದ ವೇಳೆ ಬಾಂಬ್ ಸ್ಫೋಟ: ಮೂವರು ಸಾವು



ಕರಾಚಿ: ಪಾಕಿಸ್ತಾನದಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಮಾಜಿ ಸೆನೆಟರ್ ಸೇರಿ ಮೂವರು ಸಾವನ್ನಪ್ಪಿದ್ದಾರೆ. ರಿಮೋಟ್ ಕಂಟ್ರೋಲ್ ಬಳಸಿ ಸ್ಫೋಟಿಸಲಾಗಿದೆ. ಅಪಘಾತದ ಸಮಯದಲ್ಲಿ, ಸೆನೆಟರ್ ಹಿದಾಯತುಲ್ಲಾ ಖಾನ್ ಮಮುಂಡ್ ಬಜೌರ್ ಪ್ರದೇಶದ ದಾಮೋದೋಲಾ ಪ್ರದೇಶದಲ್ಲಿದ್ದರು. ಘಟನೆಯ ಸಮಯದಲ್ಲಿ ಅವರು ಉಪಚುನಾವಣೆಯಲ್ಲಿ ತಮ್ಮ ಸೋದರಳಿಯ ನಜೀಬುಲ್ಲಾ ಖಾನ್ ಪರ ಪ್ರಚಾರ ನಡೆಸುತ್ತಿದ್ದರು. ಪಾಕಿಸ್ತಾನದ ಪಖ್ತೂನ್ಖ್ವಾ ಪ್ರಾಂತ್ಯದಲ್ಲಿ ಜುಲೈ 12ರಂದು ಉಪ ಚುನಾವಣೆ ನಡೆಯಲಿದೆ. ಅಫ್ಘಾನಿಸ್ತಾನ-ಪಾಕಿಸ್ತಾನ ಗಡಿಯಿಂದ 45 ಕಿಲೋಮೀಟರ್ ದೂರದಲ್ಲಿರುವ ಬುಡಕಟ್ಟು ಪ್ರದೇಶದಲ್ಲಿ ಬಾಂಬ್ ಸ್ಫೋಟ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಪಾಕಿಸ್ತಾನದ ಖೈಬರ್ ಪಖ್ತೂನ್ಖ್ವಾ ಪ್ರಾಂತ್ಯದ ಮುಖ್ಯಮಂತ್ರಿ ಅಲಿ ಅಮೀನ್ ಗೊಂಡಾಪುರ್ ಮತ್ತು ಮುಖ್ಯ ಕಾರ್ಯದರ್ಶಿ ನದೀಮ್ ಅಸ್ಲಾಂ ಚೌಧರಿ ಕೂಡ ಈ ಸ್ಫೋಟವನ್ನು ಖಂಡಿಸಿದ್ದಾರೆ. ಮುಖ್ಯಮಂತ್ರಿ ಅಲಿ ಅಮೀನ್ ಅವರು ಪ್ರಕರಣದ ಪ್ರತಿಯೊಂದು ಅಂಶವನ್ನು ತನಿಖೆ ಮಾಡಿ ಪ್ರಾಂತೀಯ ಪೊಲೀಸರಿಂದ ವರದಿ ಕೇಳಿದ್ದಾರೆ. ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಕೂಡ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಅಲ್ಲದೆ ಮಾಜಿ ಸೆನೆಟರ್ ಮತ್ತು ಮೂವರ ಸಾವಿನ ಬಗ್ಗೆ ದುಃಖ ವ್ಯಕ್ತಪಡಿಸಿದ್ದಾರೆ.

ಕಾರಿನಲ್ಲೇ ಯುವತಿ ಮೇಲೆ ಅತ್ಯಾಚಾರ: ಮತ್ತೇರಿಸುವ ಕೂಲ್ ಡ್ರಿಂಕ್ಸ್ ಕರಾಮತ್ತು



ಹೈದರಾಬಾದ್: ರಿಯಲ್ ಎಸ್ಟೇಟ್ ವಲಯದಲ್ಲಿ ಕಾರ್ಯ ನಿರ್ವಹಿಸುವ ಯುವತಿ ಒಬ್ಬರು ಅವರ ಸಹೋದ್ಯೋಗಿಗಳಿಂದಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಪ್ರಕರಣ ತೆಲಂಗಾಣ ರಾಜ್ಯದ ರಾಜಧಾನಿ ಹೈದರಾಬಾದ್‌ನಲ್ಲಿ ವರದಿಯಾಗಿದೆ. ತಮ್ಮ ಸಹೋದ್ಯೋಗಿ ಯುವತಿ ಮೇಲೆ ಕಾರಿನಲ್ಲೇ ಅತ್ಯಾಚಾರ ಎಸಗಿದ ಆರೋಪದ ಮೇಲೆ ಜನಾರ್ಧನ್ ಹಾಗೂ ಸಂಗಾರೆಡ್ಡಿ ಎಂಬುವರನ್ನು ಹೈದರಾಬಾದ್ ಪೊಲೀಸರು ಬಂಧಿಸಿದ್ದು, ಅವರನ್ನು ಜೈಲಿಗೆ ಅಟ್ಟಲಾಗಿದೆ. ರಾತ್ರಿ ಕೆಲಸ ಮುಗಿಸಿ ವಾಪಸ್ ಬರುವ ವೇಳೆ ನಿರ್ಮಾಣ ಹಂತದಲ್ಲಿದ್ದ ಕಟ್ಟಡವೊಂದರ ಬಳಿ ಕಾರು ಕಟ್ಟಿ ಹೋಗಿದೆ ಎಂದು ಆರೋಪಿಗಳು ನಿಲ್ಲಿಸಿ, ಊಟ ಹಾಗೂ ಸಾಫ್ಟ್ ಡ್ರಿಂಕ್ ತರಿಸಿದ್ದಾರೆ. ಸಾಫ್ಟ್ ಡ್ರಿಂಕ್‌ನಲ್ಲಿ ಮತ್ತು ಬರಿಸುವ ಔಷಧಿ ಬೆರೆಸಿದ್ದರಿಂದ ಊಟ ಮಾಡಿದ ಬಳಿಕ ಯುವತಿಗೆ ಮಂಪರು ಬಂದು ವಾಗಿತ್ತು. ಯುವತಿ ನಿದ್ರೆಗೆ ಜಾರಿದ ಬಳಿಕ ಇಬ್ಬರೂ ಯುವಕರು ಯುವತಿ ಮೇಲೆ ರಾತ್ರಿಯಿಡೀ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಯುವತಿ ದೇಹದ ಮೇಲೆ ಗಾಯಗಳಾಗಿದ್ದು, ಆಕೆ ಮೈ ಕೈ ನೋವಿನಿಂದ ಬಳಲುತ್ತಿದ್ದರು. ಈ ವೇಳೆ ಆರೋಪಿ ಯುವಕರು ಆಕೆಯನ್ನು ತಮ್ಮ ಕಾರಿನಲ್ಲಿ ವಾಪಸ್ ಕರೆತಂದು ಮಿಯಾಪುರದಲ್ಲಿ ಆಕೆಯ ಹಾಸ್ಟೆಲ್ ಬಳಿ ಬಿಟ್ಟು ಹೋದರು ಎಂದು ದೂರಿನಲ್ಲಿ ಯುವತಿ ವಿವರಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಪಾಪದ ಕೊಡ ತುಂಬುತ್ತಿದೆ; ಇನ್ನೆಷ್ಟು ದಿನ ಇರುತ್ತದೋ...!

● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅಭಿಮತ ● ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆಯಲ್ಲಿ ಕಾಂಗ್ರೆಸ್ ಸರ್ಕಾರದ ಹಗರಣಗಳ ಪ್ರಸ್ತಾಪ

ಬೆಂಗಳೂರು, ಜು.4(ಕೆಎಂಶಿ)-ಕಾಂಗ್ರೆಸ್ ಸರ್ಕಾರದ ಪಾಪದ ಕೊಡ ತುಂಬುತ್ತಿದೆ, ಅಸ್ಥಿರತೆ ಕಾಡುತ್ತಿದೆ, ಇನ್ನೆಷ್ಟು ದಿನ ಇರುತ್ತದೋ ಗೊತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಅಭಿಪ್ರಾಯಪಟ್ಟರು.

ಪಕ್ಷದ ವಿಶೇಷ ಕಾರ್ಯಕಾರಿಣಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಒಳಜಗಳ ಮಿತಿ ಮೀರಿದೆ, ಹಾದಿ ಬೀದಿ ರಂಪ ಮುಂದುವರೆದಿದೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸ್ಥಾನಕ್ಕಾಗಿ ಕೂಗು ಕೇಳಿಸುತ್ತಿದೆ ಎಂದರು.

ಪಕ್ಷದ ಕಾರ್ಯಕರ್ತರ ಪರಿಶ್ರಮ ಹಾಗೂ ಜನತೆಯ ಒಲವಿನಿಂದಾಗಿ ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಇದು ಐತಿಹಾಸಿಕ ಗೆಲುವು. ಪ್ರತಿಪಕ್ಷಗಳ ಒಕ್ಕೂಟ ದೇಶದ ಜನತೆಗೆ ಸುಳ್ಳು ಭರವಸೆಗಳನ್ನು ನೀಡುವ ಮೂಲಕ ಅಧಿಕಾರ ಹಿಡಿಯಲು ಪ್ರಯತ್ನಿಸಿತು. ಪ್ರಜ್ಞಾವಂತ ಮತದಾರರು ಇಂತಹ ಷಡ್ಯಂತ್ರವನ್ನು ಬೆಂಬಲಿಸಲಿಲ್ಲ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರ ದುರ್ಬಳಕೆ ಹಾಗೂ ದುರುಪಯೋಗದಿಂದ ಲೋಕಸಭಾ ಚುನಾವಣೆಯಲ್ಲಿ 1800ರ 20 ಸ್ಥಾನ ಗೆಲ್ಲುವ ಭ್ರಮೆಯಲ್ಲಿತ್ತು. ಮತದಾರರು ಹಾಗೂ ಪಕ್ಷದ ಕಾರ್ಯಕರ್ತರು ಪಾಠ ಕಲಿಸಿದ್ದಾರೆ. ರಾಜ್ಯದಲ್ಲಿ ಎನ್‌ಡಿಎ 19 ಸ್ಥಾನಗಳನ್ನು ಗೆದ್ದಿದೆ, ಇದರ ಶ್ರೇಯಸ್ಸು ಕಾರ್ಯಕರ್ತರಿಗೆ ಸಲ್ಲುತ್ತದೆ. ಕಾಂಗ್ರೆಸ್‌ನ ಒಡೆದಾಳುವ ನೀತಿ, ತುಷ್ಟೀಕರಣ, ಘೋಷಾ ಪಟ್ ಸುಳ್ಳಿನ ಭರವಸೆಯನ್ನು ಜನರು ತಿರಸ್ಕರಿಸಿದ್ದಾರೆ, ಬಿಜೆಪಿ ಮತ ಪ್ರಮಾಣ ಹೆಚ್ಚಿದೆ, ಬಿಜೆಪಿ-ಜೆಡಿಎಸ್ ಮೈತ್ರಿಕೂಟ 142 ವಿಧಾನಸಭಾ ಕ್ಷೇತ್ರಗಳಲ್ಲಿ ಲೀಡ್ ಪಡೆದಿದೆ ಎಂದು ಹೇಳಿದರು.

ಕಳೆದ ಒಂದು ವರ್ಷದ ಕಾಂಗ್ರೆಸ್ ಆಡಳಿತ ಜನರ ಆಶೋತ್ತರಗಳನ್ನು ನುಚ್ಚುನೂರು ಮಾಡಿದೆ. ಗ್ಯಾರಂಟಿಗಳ ಮೂಲಕ ಒಳಿತು ಮಾಡುವುದಾಗಿ, ಭ್ರಷ್ಟಾಚಾರರಹಿತ ಆಡಳಿತ ನೀಡುವುದಾಗಿ ಭರವಸೆ ಕೊಟ್ಟು, ಹಿಂದೆಂದೂ ಕಾಣದಂತಹ ಭ್ರಷ್ಟಾಚಾರ ಹಗರಣ ಬಹಿರಂಗವಾಗಿ, ಮುಖವಾಡ ಕಳಚಿ ಬಿದ್ದಿದೆ. ವಾಲ್ಮೀಕಿ ನಿಗಮದಲ್ಲಿ ದಲಿತ ಸಮುದಾಯಕ್ಕೆ ಮೀಸಲಿಟ್ಟ ಹಣವನ್ನು ಭ್ರಷ್ಟಾಚಾರಕ್ಕೆ ಬಳಸಿದ್ದಾರೆ. ಮೈಸೂರಿನ ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಕುಟುಂಬದವರ ಹೆಸರು ಕೇಳಿಬರುತ್ತಿದೆ. ಇದು ಸುಮಾರು 3ರಿಂದ 4 ಸಾವಿರ ಕೋಟಿ ರೂ. ಹಗರಣವಾಗಿದೆ. ಪೆಟ್ರೋಲ್, ಡೀಸೆಲ್, ಹಾಲಿನ ಬೆಲೆ ಸೇರಿದಂತೆ ಎಲ್ಲ ಅಗತ್ಯ ಸಾಮಗ್ರಿಗಳ ಬೆಲೆಗಳು ಏರಿಕೆಯಾಗಿವೆ. ಇಂತಹ ಸರ್ಕಾರದ ವಿರುದ್ಧ ವಿಧಾನಸಭಾ ಅಧಿವೇಶನದಲ್ಲಿ ಹೋರಾಟ ಮುಂದುವರೆಸುತ್ತೇವೆ ಎಂದು ಹೇಳಿದರು.

ಪಕ್ಷದ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ರಾಜ್ಯದಲ್ಲಿ ಈಗ ವಿಧಾನಸಭಾ ಚುನಾವಣೆ ನಡೆದರೆ, ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಖಚಿತ ಎಂದರು.

ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಐತಿಹಾಸಿಕ ಗೆಲುವಿಗೆ ಕಾರ್ಯಕರ್ತರ ಪ್ರಯತ್ನ, ಸಮರ್ಪಣಾ ಮನೋಭಾವ ಕಾರಣ, ಕಾಂಗ್ರೆಸ್‌ನ ಪರಾಜಯ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಬಿಜೆಪಿ ವಿಶೇಷ ಕಾರ್ಯಕಾರಿಣಿ ಸಭೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಿದರು. ಕೇಂದ್ರ ಹಾಗೂ ರಾಜ್ಯ ಬಿಜೆಪಿ ನಾಯಕರು ಉಪಸ್ಥಿತರಿದ್ದಾರೆ.

ಮುಡಾ ಅವ್ಯವಹಾರ ಆರೋಪ: ಬಿಜೆಪಿ ಪ್ರತಿಭಟನೆ ಬೃಹತ್ ನಾಟಕ

ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಟೀಕೆ

ಮೈಸೂರು, ಜುಲೈ 4- ಮೈಸೂರಿನ ಮುಡಾದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿರುವುದು ಬೃಹತ್ ನಾಟಕ ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಲೋಕೇಶ್ ಪಿಯಾ ಟೀಕಿಸಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿಕೆ ನೀಡಿದ್ದು, ತನಿಖೆ ಮುಗಿದು ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುತ್ತದೆ. ಹಂಚಿಕೆಯಾದ ನಿವೇಶನಗಳನ್ನು ಅಮಾನತ್ತಿನಲ್ಲಿ ಇಟ್ಟಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟವೂ ಆಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಿವೇಶನಗಳನ್ನು ಹಂಚಿಕೆ ಮಾಡಿದ್ದವರನ್ನು ವರ್ಗಾವಣೆ ಮಾಡಿ ಹಿರಿಯ ಐಎಎಸ್ ಅಧಿಕಾರಿಗಳನ್ನು ತನಿಖೆಗೆ ನೇಮಕ ಮಾಡಲಾಗಿದೆ. ಈ ವರದಿ ಬಂದ ನಂತರ ಪ್ರಕರಣದ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ಪಷ್ಟನೆ ನೀಡಿದ್ದಾರೆ. ಆದಾಗ್ಯೂ ಬಿಜೆಪಿಯವರು ಈ ವಿಷಯವನ್ನೇ ಹಿಡಿದು ಹಗ್ಗಜಗ್ಗಾಟವಾಡುತ್ತಿರುವುದು ಆಶ್ಚರ್ಯಕರವಾಗಿದೆ ಎಂದು ಲೋಕೇಶ್ ವಿ. ಪಿಯಾ ಕಿಡಿಕಾರಿದರು.



ಲೋಕೇಶ್ ಪಿಯಾ

ಹಿಂದೆ ಈ ನಿವೇಶನ ಹಂಚಿಕೆ ಮಾಡಿದಾಗ ಅಧಿಕಾರದಲ್ಲಿ ಇದ್ದದ್ದು ಬಿಜೆಪಿ ಸರಕಾರವೇ ಹೊರತು ಕಾಂಗ್ರೆಸ್ ಸರಕಾರವಲ್ಲ. ಒಂದು ವೇಳೆ ನಿವೇಶನ ಹಂಚಿಕೆಯಲ್ಲಿ ತಪ್ಪಾಗಿದ್ದರೆ ಅದನ್ನು ಎಸಗಿದವರು ಬಿಜೆಪಿಯವರೇ. ಅಂದ ಮೇಲೆ ಈಗ ಅವರು ಕಾಂಗ್ರೆಸ್ ಸರಕಾರದ ವಿರುದ್ಧ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರತಿಭಟನೆ ನಡೆಸುತ್ತಿರುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದರು.

ಬಿಜೆಪಿ ಮುಖಂಡರು ಪ್ರಕರಣವನ್ನು ಸಿಬಿಐ ತನಿಖೆಗೆ ಹಸ್ತಾಂತರಿಸಲು ಒತ್ತಾಯಿಸುತ್ತಿದ್ದಾರೆ. ಆದರೆ ಈ ಹಿಂದೆ ಅವರೇ ಅಧಿಕಾರದಲ್ಲಿದ್ದಾಗ ಎಷ್ಟು ಪ್ರಕರಣಗಳನ್ನು ಸಿಬಿಐಗೆ ಹಸ್ತಾಂತರ ಮಾಡಿದ್ದರು ಎಂಬುದನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು. ಜಮೀನು ಕೊಟ್ಟವರಿಗೆ ಪರ್ಯಾಯವಾಗಿ ನಿವೇಶನ ನೀಡಬೇಕೆಂದು ಬಿಜೆಪಿಯೇ ಕಾನೂನು ಮಾಡಿದೆ. ಈಗ ಅವರೇ ಅದನ್ನು ಹಗರಣ ಎನ್ನುತ್ತಿದ್ದಾರೆ. ಇದನ್ನು ನೋಡಿದರೆ ಅಧಿಕಾರ ಕಳೆದುಕೊಂಡು ಮತಿಭ್ರಮಣೆಗೆ ಒಳಗಾಗಿದ್ದಾರೇನೋ ಎಂಬ ಅನುಮಾನ ಮೂಡುತ್ತದೆ ಎಂದು ಲೋಕೇಶ್ ಪಿಯಾ ಲೇವಡಿ ಮಾಡಿದರು.

ಸೇನೆಯ ಕೇಂದ್ರ ಕಲ್ಯಾಣ ನಿಧಿಗೆ ಕೋಟಿ ರೂ. ದೇಣಿಗೆ ನೀಡಿದ ದೇಶಪ್ರೇಮಿ

ವಕೀಲ ಜಿ.ಮಹದೇವ ಪ್ರಸಾದ್ ಸ್ತುತ್ಯಾರ್ಹ ಕಾರ್ಯ

ಮೈಸೂರು,ಜು.4(ಪಿಎಂ)- ಆರ್ಮಿ ಸೆಂಟ್ರಲ್ ವೆಲ್‌ಫೇರ್ ಫಂಡ್‌ಗೆ (ಸೇನೆಯ ಕೇಂದ್ರ ಕಲ್ಯಾಣ ನಿಧಿ)ಬೆಂಗಳೂರು ನಿವಾಸಿಯಾ ಆದ ವಕೀಲ ಜಿ.ಮಹದೇವ ಪ್ರಸಾದ್ ಕೋಟಿ ರೂ. ದೇಣಿಗೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ನೆಲೆಸಿರುವ ಜಿ.ಮಹದೇವ ಪ್ರಸಾದ್ ಅವರು ಮೂಲತಃ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಪಾಳ್ಯ ಗ್ರಾಮದವರು. ಎಂ.ಗುರುಸಿದ್ದಪ್ಪ ಅವರ ಪುತ್ರರಾದ ಮಹದೇವ ಪ್ರಸಾದ್ ಅಮ್ರಾ ಹೈಕೋರ್ಟ್‌ನಲ್ಲಿ ಉದ್ಯೋಗ ದಲ್ಲಿದ್ದರು. ಬಳಿಕ ಸ್ವಯಂ ನಿವೃತ್ತಿ ಪಡೆದು ವಕೀಲ ವೃತ್ತಿಯಲ್ಲಿ ತೊಡಗಿದ್ದಾರೆ.

71 ವರ್ಷ ವಯೋಮಾನದ ಜಿ.ಮಹದೇವಪ್ರಸಾದ್ ಅವರು ಅಪಾರ ದೇಶಭಕ್ತಿ ಹೊಂದಿರುವ ಪತ್ರಕರ್ತರೂ ಆಗಿದ್ದಾರೆ. ಬೆಂಗಳೂರಿನಲ್ಲಿ ಫೆ.15ರಂದು ನಿವೃತ್ತ ಮುಖ್ಯ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರ ಸಮ್ಮುಖದಲ್ಲಿ ಸೇನಾ ಅಧಿಕಾರಿಯೊಬ್ಬರ ಮೂಲಕ ಒಂದು ಕೋಟಿ ರೂ. ದೇಣಿಗೆ (ಆರ್‌ಟಿಜಿಎಸ್ ಮೂಲಕ) ಅನ್ನು ಮಹದೇವ ಪ್ರಸಾದ್ ನೀಡಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿ.ಮಹದೇವ ಪ್ರಸಾದ್, ಬೆಂಗಳೂರಿನಲ್ಲಿದ್ದ ನನ್ನ ಒಂದು ನಿವೇಶನ ಮಾರಾಟ ಮಾಡಿ, ಅದರಲ್ಲಿ ಈ ಕೋಟಿ ರೂ ದೇಣಿಗೆ ನೀಡಿದ್ದೇನೆ. ದೇಶದ ಸೇನೆಗೆ ಕೊಡುಗೆ ನೀಡಬೇಕೆಂಬ ಹಂಬಲ ನನಗೆ ಚಿಕ್ಕ ವಯಸ್ಸಿನಿಂದಲೂ ಇತ್ತು. ಅದಕ್ಕೆ ಈಗ ಕಾಲ ಕೂಡಿ ಬಂದಿತು ಎಂದು ಹರ್ಷ ವ್ಯಕ್ತಪಡಿಸಿದರು.

ನಾಗರಿಕರ ನಿವಾಹದ ಕರ್ತವ್ಯವೆಂದರೆ ಸೇನೆಯಲ್ಲಿ ಕೆಲಸ ಮಾಡುವುದು ಇಲ್ಲವೇ ಅಲ್ಲಿ ನಮಗಾಗಿ ಶ್ರಮಿಸುವ ಯೋಧರ ಕಲ್ಯಾಣಕ್ಕೆ ಕೈಲಾಗುವ ಕೊಡುಗೆ ನೀಡುವುದಾಗಿದೆ. ನಾನು ಸೇನೆಯಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಕೊನೆ ಪಕ್ಷ ಇಷ್ಟಾದರೂ ಮಾಡಬೇಕೆಂದು ದೇಣಿಗೆ ನೀಡಿದ್ದೇನೆ. ಯೋಧರು ಮತ್ತು ರೈತರು ಯಾವುದೇ ಸಮಾಜದ ಎರಡು ಕಣ್ಣುಗಳಿದ್ದಂತೆ. ಅವರ ಶ್ರೇಯೋಭಿವೃದ್ಧಿ ಮುಖ್ಯ. ಏಕೆಂದರೆ ಅವರ ಪರಿಶ್ರಮದಿಂದ ಸೂಜ ಸುಖ, ಶಾಂತಿ ಮತ್ತು ನೆಮ್ಮದಿಯಿಂದ ಬದುಕು ಮಾಡಲು ಸಾಧ್ಯ. ಹಾಗಾಗಿ ಯೋಧರು ಹಾಗೂ ರೈತರ ಬಗ್ಗೆ ನನಗೆ ಅತ್ಯಂತ ಪ್ರೀತಿ-ಗೌರವ ಹಾಗೂ ಅಭಿಮಾನ ಇದೆ. ಪ್ರತಿಯೊಬ್ಬ ನಾಗರೀಕರಿಗೂ ಈ ಭಾವನೆ ಇರಬೇಕು ಎಂದು ತಿಳಿಸಿದರು.



ನಿವೃತ್ತ ಮುಖ್ಯ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರ ಸಮ್ಮುಖದಲ್ಲಿ ಕೋಟಿ ರೂ. ದೇಣಿಗೆ ನೀಡುತ್ತಿರುವ ಜಿ.ಮಹದೇವಪ್ರಸಾದ್.

ದಕ್ಷಿಣ ಕೊರಿಯಾ ಕಂಪೆನಿಯಿಂದ ರಾಜ್ಯದಲ್ಲಿ 1,245 ಕೋಟಿ ರೂ. ಹೂಡಿಕೆ




ಎಂ.ಬಿ.ಪಾಟೀಲ್

ಬೆಂಗಳೂರು: ದಕ್ಷಿಣ ಕೊರಿಯಾದ 5 ದಿನಗಳ ಪ್ರವಾಸದಲ್ಲಿರುವ ಕರ್ನಾಟಕ ರಾಜ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ವಿದೇಶಿ ಕಂಪನಿಗಳೊಂದಿಗೆ ಬಂಡವಾಳ ಸೆಳೆಯುವ ನಿಟ್ಟಿನಲ್ಲಿ ಮಾತುಕತೆ ನಡೆಸುತ್ತಿದ್ದಾರೆ.

ಕರ್ನಾಟಕದಲ್ಲಿ 1,245 ಕೋಟಿ ಹೂಡಿಕೆ ಮಾಡುವುದಾಗಿ ದಕ್ಷಿಣ ಕೊರಿಯಾದ ಜಾಗತಿಕ ಮಟ್ಟದ ಟೂಲ್ ತಯಾರಿಕಾ ಕಂಪನಿ ವೈಜಿ1 ಘೋಷಿಸಿದೆ. ರಾಜ್ಯಕ್ಕೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ನೇತೃತ್ವದಲ್ಲಿ ಉನ್ನತ ಮಟ್ಟದ ನಿಯೋಗವು ದಕ್ಷಿಣ ಕೊರಿಯಾಕ್ಕೆ ಐದು ದಿನಗಳ ಭೇಟಿ ಕೈಗೊಂಡಿದೆ. ನಿಯೋಗದ ಜತೆಗೆ ಬುಧವಾರ ನಡೆದ ಸಭೆಯ ಸಂದರ್ಭದಲ್ಲಿ ವೈಜಿ1 ಈ ಘೋಷಣೆ ಮಾಡಿದೆ.

ಕರ್ನಾಟಕದಲ್ಲಿ ಕೊರಿಯಾ ಭಾಷೆ ಕಲಿಕಾ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ಇಂಧನ ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯಾಧುನಿಕ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಲಾಗುವುದು ಎಂದು ಕಂಪನಿಯ ಮುಖ್ಯಸ್ಥ ಹೊ ಕ್ಯೂನ್ ಸಾಂಗ್ ಅವರು ಹೇಳಿದ್ದಾರೆ. ಐಟಿ, ಎಲೆಕ್ಟ್ರಾನಿಕ್ ಸಿಸ್ಟಮ್, ವೈಮಾಂತರಿಕ್ಷ ಹಾಗೂ ರಕ್ಷಣೆಗೆ ಸಂಬಂಧಿಸಿದ ಉದ್ದಿಮೆಗಳಲ್ಲಿ ಕರ್ನಾಟಕವು ಭಾರತದಲ್ಲಿ ಮೊದಲ ಸ್ಥಾನದಲ್ಲಿ ಇರುವುದನ್ನು ಸಚಿವ ಪಾಟೀಲರು ಅವರು ಕೊರಿಯಾದ ಕಂಪನಿಗಳಿಗೆ ಮನವರಿಕೆ ಮಾಡಿಕೊಟ್ಟರು. ಸೌರಶಕ್ತಿಯೂ ಸೇರಿದಂತೆ ರಾಜ್ಯವು ವಿಪುಲ ಪ್ರಮಾಣದಲ್ಲಿ ನೈಸರ್ಗಿಕ ಸಂಪನ್ಮೂಲ ಹೊಂದಿದೆ. ವಿದ್ಯುತ್ ಚಾಲಿತ ವಾಹನ, ಎಲೆಕ್ಟ್ರಾನಿಕ್ ಮತ್ತು ಸ್ಮಾರ್ಟ್‌ಫೋನ್ ತಯಾರಿಕೆ ಕ್ಷೇತ್ರಕ್ಕೆ ರಾಜ್ಯ ಸರ್ಕಾರವು ಗರಿಷ್ಠ ಪ್ರಮಾಣದಲ್ಲಿ ಉತ್ತೇಜನ ನೀಡುತ್ತಿದೆ ಎಂದರು. ಜಾಗತಿಕ ಮಟ್ಟದ ಗೇಮಿಂಗ್ ಕಂಪನಿ ಕ್ರಾಫ್ಟನ್ ಇಂಕ್ ಸಹ ಮುಂದಿನ 2-3 ವರ್ಷಗಳಲ್ಲಿ 1,245 ಕೋಟಿ ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರಿಸಿದೆ. ಕಂಪನಿಯು ಭಾರತದ ವಿವಿಧ ನವೋದ್ಯಮಗಳಲ್ಲಿ 1,162 ಕೋಟಿ ಹೂಡಿಕೆಯನ್ನು ಈಗಾಗಲೇ ಮಾಡಿದೆ.

ವಾಟರ್ ಡಿಸ್ಪೆನ್ಸರ್ ವಿತರಣೆ



ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಹುಟ್ಟುಹಬ್ಬದ ಅಂಗವಾಗಿ ಕೆ.ಆರ್. ಆಸ್ಪತ್ರೆಯ ಚಾಣಂತಿಯರ ವಾರ್ಡ್‌ನಲ್ಲಿ ಬಿಸಿನೀರು ಹಾಗೂ ಶುದ್ಧ ಕುಡಿಯುವ ನೀರಿನ ವಾಟರ್ ಡಿಸ್ಪೆನ್ಸರ್ ಅನ್ನು ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಆರ್. ದಾಕ್ಷಾಯಿಣಿ ಅವರಿಗೆ ವಿತರಿಸಲಾಯಿತು. ಈ ವೇಳೆ ಎಸ್‌ಬಿಎಂ ಮಂಜು, ಎಸ್‌ಬಿಎಂ ಮಂಜು ಸ್ನೇಹ ಬಳಗದ ಅಧ್ಯಕ್ಷ ಮಹದೇವ್, ರಾಜಪ್ಪ ಪ್ರಸಾದ್, ರಾಮಕೃಷ್ಣ, ಮುತ್ತುರಾಜ್ ನಂಜುಂಡ, ಪಿಂಟೊ ಅರುಣ್ ಇದ್ದರು.

ಐದನೇ ಪುಟದಿಂದ

ಜಿಲ್ಲೆಯಲ್ಲಿ ಆರೋಗ್ಯಾಧಿಕಾರಿಯೇ ಬಲಿ

"ಡೆಂಗ್ಯೂ ಮತ್ತು ಚಿಕೂನ್ ಗುನ್ಯ ಜ್ವರವು ಈಡಿಸ್ ಈಜಿಪ್ಟೈ ಸೊಳ್ಳೆಗಳಿಂದ ಹರಡು ತ್ತದೆ. ಈ ಸೊಳ್ಳೆ ಶುದ್ಧ ನೀರಿನಲ್ಲಿಯೇ ಮೊಟ್ಟೆ ಇಡುತ್ತದೆ. ಈ ಸೊಳ್ಳೆ ಕಚ್ಚುವ ದರಿಂದ ಡೆಂಗ್ಯೂ ಜ್ವರದ ಸಮಸ್ಯೆ ಕಾಡುತ್ತದೆ. ಈಗಾಗಲೇ ಜನರಲ್ಲಿ ಭಿತ್ತಿಪತ್ರ ಹಂಚುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

-ಎಂ.ಮುನಿರಿಂದ್ರಮ್ಮ, ಆರೋಗ್ಯ ಶಿಕ್ಷಣಾಧಿಕಾರಿ

ಜಿಲ್ಲೆಯಲ್ಲಿ ಲಾರ್ವ ಸರ್ವೆ ಆರಂಭಿಸಲಾಗಿದೆ. ಮೈಸೂರು ನಗರ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಿಬ್ಬಂದಿ ತಂಡ ಡೆಂಗ್ಯೂ ಜ್ವರ, ಅದರಿಂದ ರಕ್ಷಣೆ ಪಡೆಯುವುದು ಹಾಗೂ ಬೇಗ ಬರುತ್ತದೆ ಎಂಬ ಮಾಹಿತಿಯನ್ನು ಜನರಿಗೆ ನೀಡುವ ಮೂಲಕ ಜಾಗೃತಿ ಮೂಡಿಸುತ್ತಿದ್ದಾರೆ.

ಸೊಳ್ಳೆ ನಿಯಂತ್ರಣ: ಮಳೆಗಾಲ ಆರಂಭವಾಗುತ್ತಿದ್ದಂತೆ ರಸ್ತೆ ಸೇರಿದಂತೆ ವಿವಿಧೆಡೆ ನಿಲ್ಲುವ ಮಳೆ ನೀರಿನಲ್ಲಿ ಉತ್ಪತ್ತಿಯಾಗುವ ಸೊಳ್ಳೆಗಳಿಂದ ಡೆಂಗ್ಯೂ ಜ್ವರ ಹರಡುತ್ತದೆ. ವೈರಸ್ ಮೂಲಕ ಹರಡುವ ಈ ಡೆಂಗ್ಯೂ ಜ್ವರ 'ಈಡಿಸ್ ಈಜಿಪ್ಟೈ' ಸೊಳ್ಳೆ ಕಡಿತದಿಂದ ಸೋಂಕು ಹರಡುತ್ತದೆ. ಈ ಹಿನ್ನೆಲೆಯಲ್ಲಿ ಮನೆ ಸುತ್ತಮುತ್ತ ಮಳೆ ನೀರು ನಿಲ್ಲದಂತೆ ಕಟ್ಟೆಚ್ಚರ ವಹಿಸುವ ಅಗತ್ಯವಿದೆ.

ಲಕ್ಷಣಗಳು: ಡೆಂಗ್ಯೂ ಜ್ವರಕ್ಕೆ ತುತ್ತಾದವರಲ್ಲಿ ತೀವ್ರ ಜ್ವರ, ತಲೆನೋವು, ಕಣ್ಣುಗುಡ್ಡೆ ಹಿಂಭಾಗದಲ್ಲಿ ವಿಪರೀತ ನೋವು, ಮಾಂಸಖಂಡ, ಕೀಲುಗಳಲ್ಲಿ ನೋವು, ಬಾಯಿ, ಮೂಗು ಮತ್ತು ವಸಡಿನಲ್ಲಿ ರಕ್ತಸ್ರಾವ ಉಂಟಾಗುವ ಲಕ್ಷಣ ಕಂಡು ಬರುತ್ತದೆ. ಅಲ್ಲದೆ ಚರ್ಮದ ಮೇಲೆ ರಕ್ತಸ್ರಾವದ ಗುರುತು ಕಂಡು ಬರುತ್ತದೆ. ಈ ಲಕ್ಷಣಗಳು ಕಂಡು ಬಂದರೆ ನಿರ್ಲಕ್ಷಿಸದೆ ಸಮೀಪದ ಆಸ್ಪತ್ರೆಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳುವಂತೆ ಆರೋಗ್ಯ ಇಲಾಖೆ ಮನವಿ ಮಾಡಿದೆ.

ಲಾರ್ವ ಸರ್ವೆ: ಮೈಸೂರು ಜಿಲ್ಲೆಯ ಪ್ರಸಕ್ತ ಸಾಲಿನಲ್ಲಿ 479 ಮಂದಿಗೆ ಡೆಂಗ್ಯೂ ಜ್ವರ ಕಾಣಿಸಿಕೊಂಡಿದ್ದು, ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮತ್ತೆ ಕೆಲವರು ಈಗಾಗಲೇ ಗುಣಮುಖರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇದೀಗ ಜಿಲ್ಲೆಯಲ್ಲಿ ಲಾರ್ವ ಸರ್ವೆ ಆರಂಭಿಸಲಾಗಿದ್ದು, ಪ್ರತಿ ಶುಕ್ರವಾರ ಮನೆ ಮನೆಗೆ ಆರೋಗ್ಯ ಕಾರ್ಯಕರ್ತರು ಬಂದು ಲಾರ್ವ ಇರುವಿಕೆ ಬಗ್ಗೆ ಪರಿಶೀಲನೆ ನಡೆಸಲಿದ್ದಾರೆ. ಈ ತಂಡದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಒಳಗೊಂಡಿರುತ್ತಾರೆ. ಈ ತಂಡ ಪ್ರತಿಯೊಂದು ಮನೆಗೂ ತೆರಳಿ ನೀರಿನ ತೊಟ್ಟಿ, ಡ್ರಮ್, ಬ್ಯಾರಲ್, ಏರ್‌ಕೂಲರ್, ತೊಟ್ಟಿಗಳನ್ನು ಪರಿಶೀಲಿಸಿ ಸೊಳ್ಳೆಗಳ ಲಾರ್ವ ಇರುವಿಕೆ ಪತ್ತೆ ಮಾಡಲಿದ್ದಾರೆ. ಲಾರ್ವ ಕಂಡು ಬಂದರೆ ಆಯಾ ಮನೆಗಳ ವಾಸಿಗಳಿಂದಲೇ ತೊಟ್ಟಿ ಅಥವಾ ಲಾರ್ವ ಇದ್ದ ಸ್ಥಳವನ್ನು ಸ್ವಚ್ಛಗೊಳಿಸುವಂತೆ ಸೂಚನೆ ನೀಡಲಿದ್ದಾರೆ. ಇದರೊಂದಿಗೆ ಮನೆಯ ಸುತ್ತಮುತ್ತ, ಖಾಲಿ ಮೈದಾನದಲ್ಲಿ ಬಿದ್ದಿರುವ ಟೈರು, ಎಳನೀರು ಬುಂಡೆ, ಮರದ ಪೊಟರೆ, ಬಾಟಲಿ, ಹೂವಿನ ಕುಂಡ ಸೇರಿದಂತೆ ಇನ್ನಿತರ ವಸ್ತುಗಳನ್ನು ಪರಿಶೀಲನೆ ನಡೆಸಲಿದ್ದಾರೆ.

ನೀರಿನ ಮಟ್ಟ 100 ಅಡಿ

ಮಾತ್ರ ಇತ್ತು. ಈ ವರ್ಷ ಸ್ವಲ್ಪ ಬೇಗನೇ ನೀರಿನ ಮಟ್ಟ 100 ಅಡಿ ತಲುಪಿರುವುದರಿಂದ ರೈತರಲ್ಲಿ ಹರ್ಷ ಉಂಟಾಗಿದೆ.

ಕಬಿನಿ: ಕಬಿನಿ ಜಲಾಶಯದ ಭರ್ತಿಗೆ ಕೇವಲ 3 ಅಡಿ ಮಾತ್ರ ಬಾಕಿ ಇದೆ. ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಗುರುವಾರ ನೀರಿನ ಮಟ್ಟ 2,281 ಅಡಿಗೆ ಏರಿಕೆಯಾಗಿದೆ. ಕಳೆದ 10 ವರ್ಷಗಳಲ್ಲಿ ಜುಲೈ ಮೊದಲ ವಾರ ಜಲಾಶಯ ಭರ್ತಿ ಆಗುತ್ತಿರುವುದು ಇದು ಎರಡನೇ ಬಾರಿ. 2020ರ ಜುಲೈ 4ರಂದೇ ಕಬಿನಿ ಜಲಾಶಯ ಭರ್ತಿಯಾಗಿತ್ತು. ಇನ್ನುಳಿದಂತೆ 2018ರ ಆಕ್ಟೋಬರ್, 2019ರ ಸೆಪ್ಟೆಂಬರ್, 2021ರ ಅಕ್ಟೋಬರ್ 31, 2022ರ ಜುಲೈ 21ರಲ್ಲಿ ಈ ಜಲಾಶಯದ ಮಟ್ಟ 2,281.50 ಅಡಿ ಆಗಿತ್ತು. ಆದರೆ ಜಲಾಶಯ ಭರ್ತಿಯಾಗಿರಲಿಲ್ಲ. ಕಳೆದ ವರ್ಷ ಇದೇ ದಿನ ಈ ಜಲಾಶಯದಲ್ಲಿ 2,251.26 ಅಡಿ ನೀರು ಸಂಗ್ರಹವಾಗಿತ್ತು.

ಆಗ ಒಳ ಹರಿವು 1174 ಕ್ಯೂಸೆಕ್ ಮಾತ್ರವಿತ್ತು. ಆದರೆ ಈಗ 8500 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 2 ಸಾವಿರ ಕ್ಯೂಸೆಕ್ ನೀರನ್ನು ಸುಭಾಷ್ ವಿದ್ಯುತ್ ಉತ್ಪಾದನಾ ಘಟಕದ ಮೂಲಕ ನದಿಗೆ ಬಿಡಲಾಗುತ್ತಿದೆ. ಇದೂ ಕೂಡ ಬೆಂಗಳೂರು, ಮೈಸೂರು ಮತ್ತು ಚಾಮರಾಜನಗರಕ್ಕೆ ಕುಡಿಯುವ ನೀರು ಕೊಡಬೇಕಾಗಿರುವುದರಿಂದ ಈ 2 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಜಲಾಶಯದ ಸಾಮರ್ಥ್ಯ 19.52 ಟಿಎಂಸಿ ಆಗಿದ್ದು, ಸದ್ಯಕ್ಕೆ ಜಲಾಶಯದಲ್ಲಿ 17.50 ಟಿಎಂಸಿ ನೀರು ಸಂಗ್ರಹವಾಗಿದೆ.

ಕೇರಳದ ವೈನಾಡು, ಸುಲ್ತಾನ್ ಬತ್ತೇರಿ ಮತ್ತು ಕಬಿನಿ ನೀರು ಉಗಮವಾಗುವ ಮನೋರಮ ಮಲಂ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದ್ದೇ ಜಲಾಶಯಕ್ಕೆ ಒಳಹರಿವು ಹೆಚ್ಚಲು ಕಾರಣವಾಗಿದೆ.

ಜು.8ರಿಂದ ನಾಲೆಗಳಿಗೆ ನೀರು

ಪರಿಶೀಲನೆ ನಡೆಸಿ ನಾಲೆಗಳಿಗೆ ನೀರು ಹರಿಸಲು ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲಾಗಿದೆ. ಜುಲೈ 6 ರಂದು ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ಜುಲೈ 8 ರಿಂದ ನಾಲೆಗಳಿಗೆ ನೀರು ಹರಿಸುವ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು. ಈ ಕುರಿತು ಸಿದ್ಧತೆ ಮಾಡಿಕೊಳ್ಳಲಾಗಿದೆ. ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸಿ ಉತ್ತಮ ಬೆಳೆ ಬೆಳೆಯಿರಿ. ರೈತರೊಂದಿಗೆ ಸರ್ಕಾರ ಸದಾ ಇದ್ದು, ಅವರ ಶ್ರೇಯೋಭಿವೃದ್ಧಿಗೆ ಸದಾ ಚಿಂತಿಸುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ನಡೆದ ಸಭೆಯಲ್ಲಿ ಡಿಸಿ ವೆಂಕಟ್ ರಾಜಾ ಮಾತನಾಡಿದರು.

ಕೊಡಗಿನಲ್ಲಿ ವಾಡಿಕೆ ಸರಾಸರಿ ಮಳೆ ಹಿನ್ನೆಲೆ

ಅಗತ್ಯ ಮುನ್ನೆಚ್ಚರಕ್ಕೆ ಡಿಸಿ ಸೂಚನೆ

ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ಅಧಿಕಾರಿಗಳ ಸಭೆ

> “ಜಿಲ್ಲೆಯಲ್ಲಿ ಉತ್ತಮ ಮಳೆ ಆಗುತ್ತಿರುವ ಹಿನ್ನೆಲೆ ಜುಲೈ ಅಂತ್ಯದೊಳಗೆ ಕಂದಾಯ ಸಚಿವರು ಕೊಡಗು ಜಿಲ್ಲೆಗೆ ಭೇಟಿ ನೀಡುವ ಸಾಧ್ಯತೆ ಇದೆ.
> –ವೆಂಕಟ್ ರಾಜಾ, ಜಿಲ್ಲಾಧಿಕಾರಿ

ಮಡಿಕೇರಿ, ಜು.4–ಕೊಡಗು ಜಿಲ್ಲೆಯಲ್ಲಿ ವಾಡಿಕೆಯಂತೆ ಸರಾಸರಿ ಮಳೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ಅತಿವೃಷ್ಟಿಯಿಂದ ಪ್ರಕೃತಿ ಅವಘಡಗಳು ಸಂಭವಿಸಿದ್ದಲ್ಲಿ ಸಮರ್ಥವಾಗಿ ಎದುರಿಸಲು ಅಧಿಕಾರಿಗಳು ಸದಾ ಸನ್ನದ್ಧರಾಗಿರಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ನಿರ್ದೇಶಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಸಂಬಂಧ ಗುರುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಉತ್ತಮ ಮಳೆಯಾಗುತ್ತಿದೆ. ಕೆರೆಕಟ್ಟೆ, ತೊರೆ ಹಾಗೂ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಿನ ಮಳೆಯಾಗುವ ಸಾಧ್ಯತೆ ಇರುವುದರಿಂದ ಪ್ರಕೃತಿ ವಿಕೋಪ ನಿರ್ವಹಣೆ ಕಡೆ ಹೆಚ್ಚಿನ ಗಮನ ಹರಿಸಬೇಕು ಎಂದು ಸೂಚಿಸಿದರು.

ಪ್ರಕೃತಿ ವಿಕೋಪ ಎದುರಿಸಲು ಈಗಾಗಲೇ ಹೋಬಳಿವಾರು ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ವಾರಕ್ಕೊಮ್ಮೆಯಾದರೂ ತಮ್ಮ ಹೋಬಳಿ ವ್ಯಾಪ್ತಿಗೆ ಭೇಟಿ ನೀಡಿ, ಮಾಹಿತಿ ಪಡೆಯುವ ಜೊತೆಗೆ, ಹೆಚ್ಚಿನ ಮಳೆಯಾದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವರದಿ ನೀಡಬೇಕು ಎಂದು ಆದೇಶಿಸಿದರು.

ತಹಸೀಲ್ದಾರ್‌ಗಳು ಆಯಾ ತಾಲೂಕು ವ್ಯಾಪ್ತಿಯಲ್ಲಿ ಮಳೆಗೆ ಸಂಬಂಧಿಸಿದಂತೆ ಸ್ಥಳೀಯ ಮಟ್ಟದಲ್ಲಿ ಹವಾಮಾನ ಮುನ್ಸೂಚನೆ ಬಗ್ಗೆ ಕಾಲ ಕಾಲಕ್ಕೆ ಮಾಹಿತಿ ಹಂಚಿಕೊಳ್ಳಬೇಕು. ತಮ್ಮ ಹಾಗೂ ತಾಪಂ ಇಓ ಹಂತದಲ್ಲಿ ತಾಲೂಕು ಮಟ್ಟದಲ್ಲಿ ಸಭೆ ನಡೆಸಬೇಕು. ಹಾಗೆಯೇ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸಭೆ ಮಾಡಿ ಪ್ರಕೃತಿ ವಿಕೋಪ ಎದುರಿಸಲು ಸನ್ನದ್ಧರಾಗಬೇಕು ಎಂದರು.

ಹೆಚ್ಚಿನ ಮಳೆಯಾದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ರಜೆಗೆ ಸಂಬಂಧಿಸಿದಂತೆ ಡಿಡಿಪಿಐಗೆ ಮಾಹಿತಿ ನೀಡಬೇಕು. ಡಿಡಿಪಿಐ ರಜೆ ಘೋಷಣೆ ಸಂಬಂಧ ಜಿಲ್ಲಾ ಮಟ್ಟದಲ್ಲಿ ಅಗತ್ಯ ಕ್ರಮವಹಿಸಬೇಕು. ಪ್ರಕೃತಿ ವಿಕೋಪ ಎದುರಿಸುವ ಸಂಬಂಧ ಎನ್‌ಡಿಆರ್‌ಎಫ್, ಪೊಲೀಸ್, ಅಗ್ನಿಶಾಮಕ ಇತರರ ಅಧಿಕಾರಿಗಳ ಜೊತೆಗೂಡಿ ರಕ್ಷಣಾ ಕಾರ್ಯ ಕೈಗೊಳ್ಳುವ ಬಗ್ಗೆ 'ಪ್ರಾತ್ಯಕ್ಷಿಕೆ' ಮೂಲಕ ಹೆಚ್ಚಿನ ಜಾಗೃತಿ ಮೂಡಿಸಬೇಕು. ಅತಿವೃಷ್ಟಿ ಉಂಟಾದ ಸಂದರ್ಭದಲ್ಲಿ ಎಚ್ಚರವಹಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು. ಅತಿವೃಷ್ಟಿ ಉಂಟಾದಲ್ಲಿ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವ ಸಂಬಂಧ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ಅತಿವೃಷ್ಟಿ ಎದುರಿಸಲು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ತುರ್ತು ಸಂದರ್ಭದಲ್ಲಿ ಯಾವ ಕ್ರಮಕೈಗೊಳ್ಳಬೇಕು ಎಂಬ ಮಾಹಿತಿ ಇರಬೇಕು. ಅಂತಹ ಸಮಯದಲ್ಲಿ ಹೆಚ್ಚಿನ ಅರಿವು ಪ್ರತಿಯೊಬ್ಬರಲ್ಲೂ ಇರಬೇಕು. ಪ್ರಕೃತಿ ವಿಕೋಪ ಸಂದರ್ಭದಲ್ಲಿ ಯಾವುದೇ ಜೀವ ಹಾನಿಯಾಗದಂತೆ, ಯಾವುದೇ ಅವಘಡಗಳು ಸಂಭವಿಸದಂತೆ ಸದಾ ಎಚ್ಚರವಹಿಸಬೇಕು. ಈ ಬಗ್ಗೆ ಜಲಾಶಯಗಳು, ನದಿಗಳಿಗೆ ಯಾರೂ ತೆರಳದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಜಿಪಂ ಸಿಇಓ ವರ್ಣಿತ್ ನೇಗಿ, ಕೆಡಿಪಿ ಸಭೆಗೆ ಸಿದ್ಧತೆ ಕೈಗೊಂಡಿರುವ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆದರು. ಸಭೆಯಲ್ಲಿ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಅಪರ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಅವಘಡಗಳ ಬಗ್ಗೆ ಎಚ್ಚರ ವಹಿಸಿ

ಜಿಲ್ಲೆಯ ಪ್ರವಾಸಿ ಸ್ಥಳಗಳಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಅಂತಹ ಸಂದರ್ಭದಲ್ಲಿ ಯಾವುದೇ ಅವಘಡಗಳು ಸಂಭವಿಸದಂತೆ ಎಚ್ಚರ ವಹಿಸಬೇಕು. ಜೊತೆಗೆ ಮಾಹಿತಿ ಫಲಕ ಅಳವಡಿಸಬೇಕು ಎಂದು ಡಿಸಿ ವೆಂಕಟ್ ರಾಜಾ ತಿಳಿಸಿದರು.

2018ರಿಂದ ಮೂರು ವರ್ಷದ ಅವಧಿಯಲ್ಲಿ ಆಗಸ್ಟ್‌ನಲ್ಲೇ ಹೆಚ್ಚಿನ ಮಳೆಯಾಗಿದೆ. ಆದ್ದರಿಂದ ಜುಲೈ ಮತ್ತು ಆಗಸ್ಟ್‌ನಲ್ಲಿ ಹೆಚ್ಚಿನ ಎಚ್ಚರವಹಿಸಬೇಕು. ಕರೆ ಮಾಡಿದಾಗ ಅಧಿಕಾರಿಗಳು ಸ್ವೀಕರಿಸಬೇಕು. ಸಾರ್ವಜನಿಕರಿಗೆ ಸ್ಪಂದಿಸಬೇಕು. ಜೊತೆಗೆ ತಹಸೀಲ್ದಾರ್‌ಗಳು ಕಾಲ ಕಾಲಕ್ಕೆ ಮಾಹಿತಿ ನೀಡುವುದು ಮುಖ್ಯವಾಗಿದೆ ಎಂದರು.

ರಸ್ತೆಬದಿಗೆ ಮರ ಹಾಗೂ ವಿದ್ಯುತ್ ಕಂಬ ಬಿದ್ದಲ್ಲಿ ಸಕಾಲದಲ್ಲಿ ತೆರವುಗೊಳಿಸಲಾಗುತ್ತಿದೆ. ಹಾಗೆಯೇ ಬರೆ ಕುಸಿತ ಉಂಟಾದಲ್ಲಿ ಮಣ್ಣು ತೆರವುಗೊಳಿಸುವ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾದಲ್ಲಿ ಸಾರಿಗೆ ಸಂಪರ್ಕ ಮತ್ತಿತರ ವ್ಯತ್ಯಯಗಳು ಉಂಟಾದಲ್ಲಿ ಕೂಡಲೇ ಸ್ಪಂದಿಸುವ ಕಾರ್ಯವಾಗಬೇಕು. ಸಾರ್ವಜನಿಕರಿಂದ ದೂರು ಬರದಂತೆ ಎಚ್ಚರವಹಿಸಬೇಕು ಎಂದು ಆದೇಶಿಸಿದರು.

ಕಾಫಿ ತೋಟದಲ್ಲಿ ಮೊಸಳೆ ಪತ್ತೆ

ಗೋಣಿಕೊಪ್ಪ, ಜು.4–ಸಮೀಪದ ಕೊಳತ್ತೋಡು ಬೈಗೋಡು ಗ್ರಾಮದ ಕಾಫಿ ತೋಟದಲ್ಲಿ ಗುರುವಾರ ಮೊಸಳೆ ಕಾಣಿಸಿಕೊಂಡಿದೆ. ಅಲ್ಲಿನ ನಿವಾಸಿ ಸೋಮೆಯಂಡ ಮನೋಜ್ ಬೋಪಣ್ಣ ಅವರ ಕಾಫಿ ತೋಟದಲ್ಲಿ ಮೊಸಳೆ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಬುಧವಾರ ರಾತ್ರಿ ಎಲ್ಲಿಂದಲ್ಲೋ ಬಂದ ಮೊಸಳೆ ಕಾಫಿ ತೋಟದಲ್ಲಿದ್ದ ಗುಂಡಿಗೆ ಬಿದ್ದಿದ್ದು, ಹೊರ ಬರಲಾಗದೆ ಅಲ್ಲೇ ಇತ್ತು.



ಗುರುವಾರ ಬೆಳಗ್ಗೆ ತೋಟದ ಮಾಲೀಕರು ಅತ್ತ ಕಡೆ ತೆರಳಿದಾಗ ಗುಂಡಿಯಲ್ಲಿ ಮೊಸಳೆ ಬಿದ್ದಿರುವುದು ಪತ್ತೆಯಾಗಿದೆ. ಬಳಿಕ ವಿರಾಜಪೇಟೆ ವಲಯ ಅರಣ್ಯಾಧಿಕಾರಿಗಳು ಮೊಸಳೆ ರಕ್ಷಿಸಿದರು.

ಹೆದ್ದಾರಿಯಲ್ಲಿ ಕಾಡಾನೆ ಸಂಚಾರ

ಸುಂಟಿಕೊಪ್ಪ, ಜು.4– ಏಳನೇ ಹೊಸಕೋಟೆಯ ಮೆಟ್ನಳ್ಳ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಡಾನೆ ರಾಜಾರೋಷವಾಗಿ ಸಂಚರಿಸುವ ಮೂಲಕ ಆತಂಕ ಹುಟ್ಟಿಸಿದೆ.



ಈ ಹೆದ್ದಾರಿಯಲ್ಲಿ ಹಲವು ದಿನಗಳಿಂದ ಕಾಡಾನೆಗಳು ಯಾವುದೇ ಭಯವಿಲ್ಲದೇ ಓಡಾಡುತ್ತಿವೆ. ಹಾಗೆಯೇ ಗುರುವಾರ ಬೆಳಗ್ಗೆ ಕೂಡ ರಸ್ತೆ ಮಧ್ಯದಲ್ಲೇ ನಡೆದಾಡುತ್ತಿದ್ದ ದೃಶ್ಯ ಕಂಡು ಬಂತು. ಹೀಗಾಗಿ ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಆದರೆ, ಆನೆ ಯಾವುದೇ ವಾಹನಗಳಿಗೆ ದಾಳಿ ನಡೆಸದಿರುವುದು ಪ್ರಯಾಣಿಕರಿಗೆ ಸಮಾಧಾನ ಮೂಡಿಸಿತು.

ಜು.10,12 ಲೋಕಾಯುಕ್ತರಿಂದ ದೂರು ಸ್ವೀಕಾರ

ಮಡಿಕೇರಿ, ಜು.4– ಮಡಿಕೇರಿ ಲೋಕಾಯುಕ್ತ ಅಧಿಕಾರಿಗಳು ಜುಲೈ 10 ರಂದು ವಿರಾಜಪೇಟೆ ತಹಸೀಲ್ದಾರ್ ಕಚೇರಿ ಸಭಾಂಗಣ ಮತ್ತು ಜು.12 ರಂದು ಮಡಿಕೇರಿ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಆಯಾಯ ದಿನಗಳಂದು ಬೆಳಗ್ಗೆ 11 ರಿಂದ 1 ಗಂಟೆವರೆಗೆ ದೂರು ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದು.

ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ ಮಡಿಕೇರಿ ದೂರವಾಣಿ ಸಂಖ್ಯೆ 08272– 295297 ಅನ್ನು ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಳೆಯಡ ಕಾಳಯ್ಯ ಸುರೇಶ್ ನಿಧನ



ನಾಪೋಕ್ಲು, ಜು.4–ರಾಜ್ಯ ಹಾಕಿ ಆಟಗಾರ ಬಾಳೆಯಡ ಕಾಳಯ್ಯ ಸುರೇಶ್(67) ಗುರುವಾರ ಬೆಂಗಳೂರಿನಲ್ಲಿ ನಿಧನರಾದರು.

ಮೃತರು ಮೂಲತಃ ನಾಪೋಕ್ಲು ನಿವಾಸಿಯಾದ ರಾಜ್ಯ ಹಾಕಿ ತಂಡದ ಮಾಜಿ ನಾಯಕ, ಹೆಚ್ಎಎಲ್ ಉದ್ಯೋಗಿ, ಭಾರತದ ಕಿರಿಯರ ಹಾಕಿ ಆಯ್ಕೆ ಶಿಬಿರದಲ್ಲಿದ್ದರು. ಇಬ್ಬರು ಪುತ್ರರು, ಸಹೋದರರಾದ ಉತ್ತಯ್ಯ ಹಾಗೂ ಒಲಂಪಿಯನ್ ಬಿ.ಕೆ.ಸುಬ್ರಮಣಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನೆರವೇರಿತು.

ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್‌ಗಾಗಿ ಭರದ ಸಿದ್ಧತೆ

ಮುಂದುವರೆದ ಕುಳಿ ತೆಗೆಯುವ ಕಾರ್ಯ

- ಶನಿವಾರ ಅಥವಾ ಭಾನುವಾರ ವಿಜ್ಞಾನಿಗಳ ಆಗಮನ ಸಾಧ್ಯತೆ
- ಮತ್ತೆ ರೈತರಿಂದ ಪರ-ವಿರೋಧ ಪ್ರತಿಭಟನೆ ಸಾಧ್ಯತೆ



ಟ್ರಯಲ್ ಬ್ಲಾಸ್ಟ್ ನಡೆಯುವ ಜಾಗದಲ್ಲಿ ಕುಳಿ ತೆಗೆಯುವ ಕಾರ್ಯ ನಡೆಯುತ್ತಿರುವುದು.

ಪಾಂಡವಪುರ,ಜು.4– ಬೇಬಿಬೆಟ್ಟದ ಗಣಿಗಾರಿಕೆ ಪ್ರದೇಶದಲ್ಲಿ ಹೈಕೋರ್ಟ್ ಆದೇಶದಂತೆ ಟ್ರಯಲ್ ಬ್ಲಾಸ್ಟ್ ನಡೆಸಲು ಡ್ರಿಲ್ಲಿಂಗ್ ಯಂತ್ರದ ಮೂಲಕ ನಡೆಯುತ್ತಿದ್ದ ಕುಳಿ ಕೊರೆಯುವ ಕಾರ್ಯ ಗುರುವಾರವೂ ಮುಂದುವರೆಯಿತು.

ಟ್ರಯಲ್ ಬ್ಲಾಸ್ಟ್ ನಡೆಸಲು ಆಗಮಿಸಲಿರುವ ಜಾರ್ಖಂಡ್ ರಾಜ್ಯದ ಧನ್‌ಭಾಗ್‌ನ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಮೈನಿಂಗ್ ಆಂಡ್ ಫ್ಯೂಯಲ್ ರೀಸರ್ಚ್ ಸಂಸ್ಥೆಯ ವಿಜ್ಞಾನಿಗಳು ಸೂಚಿಸಿರುವಂತೆ ಆಯ್ದ ಪ್ರದೇಶದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸಲು ಡ್ರಿಲ್ಲಿಂಗ್ ಯಂತ್ರದ ಮೂಲಕ ಕುಳಿ ಕೊರೆಸಲಾಗುತ್ತಿದೆ. ಬುಧ ವಾರ ಕೆಆರ್‌ಎಸ್ ಅಣೆಕಟ್ಟೆಯಿಂದ 5.8 ಕಿಮೀ ವ್ಯಾಪ್ತಿಯ ದೂರದಲ್ಲಿರುವ ಸರ್ವೆ. 01ರ ಗಣಿಗಾರಿಕೆ ಪ್ರದೇಶದಲ್ಲಿ ಸುಮಾರು 20 ಅಡಿ ಆಳದವರೆಗೆ ಕುಳಿ ಕೊರೆಸಿದರು. ಗುರುವಾರ ಸರ್ವೆ.2, ಎಸ್‌ಎಲ್‌ವಿ, ಎಸ್‌ಟಿಜಿ ಹಾಗೂ ಶ್ರೀರಾಮಲಿಂಗೇಶ್ವರ ಕ್ವಾರೆ ಪ್ರದೇಶದಲ್ಲಿ ಕುಳಿ ಕೊರೆಸುವ ಕಾರ್ಯ ನಡೆಸಿದರು. ಡ್ರಿಲ್ಲಿಂಗ್ ಯಂತ್ರದ ಮೂಲಕ ಕಲ್ಲು ಬಂಡೆಗಳ ಮೇಲೆ ಕುಳಿ ಕೊರೆಸುವುದು ತಡವಾಗುತ್ತಿರುವ ಹಿನ್ನೆಲೆಯಲ್ಲಿ ಶುಕ್ರವಾರವೂ ಸಹ ಕುಳಿ ಕೊರೆಸುವ ಕಾರ್ಯ ಮುಂದುವರೆಯುವ ಸಾಧ್ಯತೆಗಳಿವೆ ಎಂದು ಗಣಿ ಅಧಿಕಾರಿ ನಾಗಮಧು ತಿಳಿಸಿದರು.

ಟ್ರಯಲ್ ಬ್ಲಾಸ್ಟ್ ನಡೆಸುವ ಜಾರ್ಖಾಂಡ್‌ನ ಧನ್‌ಭಾಗ್‌ನ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಮೈನಿಂಗ್ ಆಂಡ್ ಫ್ಯೂಯಲ್ ರೀಸರ್ಚ್ ಸಂಸ್ಥೆಯ ವಿಜ್ಞಾನಿಗಳು ಶನಿವಾರ ಅಥವಾ ಭಾನುವಾರ ಆಗಮಿಸುವ ಸಾಧ್ಯತೆಗಳಿದ್ದು, ವಿಜ್ಞಾನಿಗಳು ಬಂದ ಬಳಿಕ ಬೇಬಿಬೆಟ್ಟದ ಪ್ರದೇಶದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸುವ ಸಾಧ್ಯತೆಗಳಿವೆ.

ಪೊಲೀಸ್ ಬಂದೋ ಬಸ್ತ್: ಬೇಬಿ ಬೆಟ್ಟದ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸುವುದಕ್ಕೆ ಪರ–ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಶುಕ್ರವಾರವೂ ಸಹ ಪೊಲೀಸರ ಬಿಗಿಬಂದೋಬಸ್ತ್‌ನಲ್ಲಿ ಕುಳಿ ಕೊರೆಸುವ ಕಾರ್ಯವನ್ನು ನಡೆಸಿದರು. ಕೆಆರ್‌ಎಸ್ ಹಾಗೂ ಪಾಂಡವಪುರದಿಂದ ಗಣಿಗಾರಿಕೆ ಪ್ರದೇಶಕ್ಕೆ ಬರುವ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ಬಂದೂ ಬಸ್ತ್ ನಿಯೋಜಿಸಲಾಗಿತ್ತು.

ಪ್ರತಿಭಟನೆ ಸಾಧ್ಯತೆ: ವಿಜ್ಞಾನಿಗಳು ಟ್ರಯಲ್ ಬ್ಲಾಸ್ಟ್ ನಡೆಸುವ ಸಂದರ್ಭದಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸದಂತೆ ರೈತ ಸಂಘದ ಕಾರ್ಯಕರ್ತರು ಗೋಬ್ಯಾಕ್ ಪ್ರತಿಭಟನೆ ನಡೆಸುವ ಸಾಧ್ಯತೆಗಳಿವೆ. ಈ ಹಿಂದೆಯೂ ಸಹ ಟ್ರಯಲ್ ಬ್ಲಾಸ್ಟ್ ಮಾಡಲು ಬಂದಿದ್ದ ಗಣಿ ವಿಜ್ಞಾನಿಗಳಿಗೆ ಗೋಬ್ಯಾಕ್ ಚಳವಳಿ ನಡೆಸಿ ವಾಪಸು ಕಳುಹಿಸುವಲ್ಲಿ ರೈತ ಸಂಘ ಯಶಸ್ವಿಯಾಗಿತ್ತು. ಅದರಂತೆ ಈ ಬಾರಿಯೂ ಸಹ ಗೋಬ್ಯಾಕ್ ಚಳವಳಿ ನಡೆಸಲು ಸಿದ್ಧತೆ ನಡೆಸಿಕೊಳ್ಳುತ್ತಿದ್ದಾರೆ.

ಮತ್ತೊಂದಡೆ ಹೈಕೋರ್ಟ್ ಆದೇಶದಂತೆ ಟ್ರಯಲ್ ಬ್ಲಾಸ್ಟ್ ನಡೆಸಿ ಗಣಿಗಾರಿಕೆಯಿಂದ ಕೆಆರ್‌ಎಸ್ ಡ್ಯಾಂಗೆ ಅಪಾಯ ಇದೆಯೋ? ಇಲ್ಲವೋ? ಎನ್ನುವ ಸಾಧಕ ಭಾದಕಗಳನ್ನು ತಿಳಿದುಕೊಳ್ಳುವುದಕ್ಕಾಗಿ ಟ್ರಯಲ್ ಬ್ಲಾಸ್ಟ್ ನಡೆಸಲು ಅವಕಾಶ ನೀಡಬೇಕೆಂದು ರೈತಸಂಘದ(ರೈತ ಬಣದ) ಕಾರ್ಯಕರ್ತರು ಹಾಗೂ ಕಾವೇರಿಪುರ ಸೇರಿದಂತೆ ಸುತ್ತಮುತ್ತಲಿನ ಕ್ವಾರೆ ಕಾರ್ಮಿಕರು ಪ್ರತಿಭಟನೆ ನಡೆಸುವ ಸಾಧ್ಯತೆಗಳಿವೆ. ಹೈಕೋರ್ಟ್ ಆದೇಶ ಮಾಡಿರುವುದರಿಂದ ಟ್ರಯಲ್ ಬ್ಲಾಸ್ ನಡೆಸದಿದ್ದರೆ ಕೋರ್ಟ್ ಆದೇಶ ಉಲ್ಲಂಘನೆಯಾಗಲಿದೆ ಎಂಬ ಕಾರಣಕ್ಕೂ ಜಿಲ್ಲಾಡಳಿತ ಟ್ರಯಲ್ ಬ್ಲಾಸ್ಟ್ ನಡೆಸಲು ಎಲ್ಲಾ ಸಿದ್ಧತೆಗಳನ್ನು, ಬ್ಲಾಸ್ಟ್ ನಡೆಸುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ವಿದ್ಯುತ್ ತಂತಿ ತುಳಿದು ರೈತ ಸಾವು

ಕಿಕ್ಕೇರಿ,ಜು.4– ಹೋಬಳಿಯ ಗೋವಿಂದನಹಳ್ಳಿ ಗ್ರಾಮದಲ್ಲಿ ರೈತನೋರ್ವ ವಿದ್ಯುತ್ ತಂತಿ ತುಳಿದು ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ಗುರುವಾರ ನಡೆದಿದೆ.

ಗ್ರಾಮದ ಚಿಕ್ಕವೀರಪ್ಪನವರ ಪುತ್ರ ರೈತ ನಿಂಗರಾಜಪ್ಪ(39) ಮೃತ ವ್ಯಕ್ತಿ. ಜಾನುವಾರುಗಳಿಗೆ ಜಮೀನಿನಲ್ಲಿ ಹುಲ್ಲು ಬೆಳೆದಿದ್ದರು. ಎಂದಿನಂತೆ ಜಮೀನಿನಲ್ಲಿ ಹುಲ್ಲು ತರಲು ಹೋಗಿದ್ದಾಗ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ವಿದ್ಯುತ್ ಪ್ರವಹಿಸಿ ಸ್ಥಳದಲ್ಲಿಯೇ ಪ್ರಾಣಬಿಟ್ಟಿದ್ದಾರೆ. ಬಹಳ ಹೊತ್ತಾದರೂ ಮನೆಗೆ ಬಾರದಿರುವುದನ್ನು ಕಂಡು ಮನೆಯವರು ಜಮೀನಿನಲ್ಲಿ ಅಕ್ಕಪಕ್ಕದವರ ಸಹಾಯದಿಂದ ಹುಡುಕಾಟ ನಡೆಸಿದಾಗ ವಿದ್ಯುತ್ ತಂತಿ ತಗುಲಿ ಮೃತ ಪಟ್ಟಿದ್ದು ಕಂಡು ಬಂತು.

ವಿಷಯ ತಿಳಿದ ಕಿಕ್ಕೇರಿ ಇನ್‌ಸ್ಪೆಕ್ಟರ್ ರೇವತಿ, ವಿದ್ಯುತ್ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿದರು. ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ದೇಹವನ್ನು ಮರಣೋತ್ತರ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಇಂದು ಕುಮಾರಸ್ವಾಮಿ ಜನತಾ ದರ್ಶನ

ಸ್ಥಳ ಪರಿಶೀಲಿಸಿದ ಮಾಜಿ ಸಚಿವ ಪುಟ್ಟರಾಜು



ಸ್ಥಳ ಪರಿಶೀಲನೆ ನಡೆಸುತ್ತಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು

ಮಂಡ್ಯ,ಜು.4– ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆಯುವ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಜನತಾ ದರ್ಶನ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಗುರುವಾರ ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರ ಸಚಿವರಾದ ಬಳಿಕ ಮೊದಲ ಬಾರಿಗೆ ಮಂಡ್ಯದಲ್ಲಿ ಜನತಾ ದರ್ಶನ ನಡೆಸುತ್ತಿರುವ ಹೆಚ್.ಡಿ.ಕುಮಾರಸ್ವಾಮಿ, ಬೆಳಗ್ಗೆ 10 ಗಂಟೆಗೆ ಅಂಬೇಡ್ಕರ್ ಭವನದಲ್ಲಿ ಜನತಾ ದರ್ಶನ ಕಾರ್ಯಕ್ರಮ ನಡೆಸಿ ಸಾರ್ವಜನಿಕರ ಕುಂದು ಕೊರತೆ ಆಲಿಸಲಿದ್ದಾರೆ.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಿ.ಎಸ್.ಪುಟ್ಟರಾಜು, ಹೆಚ್.ಡಿ. ಕುಮಾರಸ್ವಾಮಿ ಅವರು ಲೋಕಸಭಾ ಸದಸ್ಯರಾದ ಮೇಲೆ ಮಂಡ್ಯಕ್ಕೆ ಕೇಂದ್ರ ಮಂತ್ರಿಯಾಗಿ ಬಂದಿದ್ದು, ನಾಳೆ (ಶುಕ್ರವಾರ) ಬೆಳಗ್ಗೆಯಿಂದ ಸಂಜೆವರೆಗೂ ಜನತಾ ದರ್ಶನ ಕಾರ್ಯಕ್ರಮ ನಡೆಯಲಿದೆ. ಜನಸಾಮಾನ್ಯರ ಜೊತೆ ಇದ್ದು ಸಮಸ್ಯೆ ಆಲಿಸಲಿದ್ದಾರೆ. ಕುಮಾರಸ್ವಾಮಿ ಅವರಿಗೆ ಜಿಲ್ಲೆಯ ಜನ ಆಶೀರ್ವಾದ ಮಾಡಿದ್ದಾರೆ. ಜನರ ನಿರೀಕ್ಷೆಯನ್ನು ಅವರು ಈಡೇರಿಸುವ ಕೆಲಸ ಮಾಡಲಿದ್ದು, ದೇಶದ ಕೆಲಸದ ಜೊತೆಗೆ ಮಂಡ್ಯದ ಜನರ ಋಣ ತೀರಿಸುವ ಅವಕಾಶ ಅವರಿಗೆ ಲಭಿಸಿದೆ. ನೂರಕ್ಕೆ ನೂರರಷ್ಟು ಜಿಲ್ಲೆಯ ಅಭಿವೃದ್ಧಿ ಮಾಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೇಬಿ ಬೆಟ್ಟದಲ್ಲಿ ಟ್ರಯಲ್ ಬ್ಲಾಸ್ಟ್‌ಗೆ ವಿರೋಧ ವಿಚಾರವಾಗಿ ಮಾತನಾಡಿದ ಪುಟ್ಟರಾಜು, ನಮ್ಮೆಲ್ಲರ ಬೆನ್ನೆಲುಬು ಕನ್ನಂಬಾಡಿ ಅಣೆಕಟ್ಟೆ, ಅದರ ಸುರಕ್ಷಿತೆಗೆ ಜಿಲ್ಲಾಡಳಿತ ಯಾವ ಕ್ರಮ ಕೈಗೊಳ್ಳುತ್ತಾರೋ ಅದರ ಪರ ನಾವು ಇರುತ್ತೇವೆ. ಅದರ ಬಗ್ಗೆ ವಿಶ್ಲೇಷಣೆ ಮಾಡಲ್ಲ. ಕನ್ನಂಬಾಡಿ ಅಣೆಕಟ್ಟೆ ಸುರಕ್ಷತೆ ಮುಖ್ಯ, ಜಿಲ್ಲಾಡಳಿತ ಕಾನೂನು ಬದ್ದವಾಗಿ ಸುರಕ್ಷತೆಯ ಜವಾಬ್ದಾರಿ ಹೊತ್ತಿದೆ. ಅವರ ಜೊತೆ ನಾವು ಇರುತ್ತೇವೆ. ಕುಮಾರಸ್ವಾಮಿ ಅವರು ಕೂಡ ಜಿಲ್ಲಾಡಳಿತಕ್ಕೆ ಸಹಕಾರ ಕೊಡಲಿದ್ದಾರೆ ಎಂದರು.

ಮೈಸೂರು ಮುಡಾ ಹಗರಣ ವಿಚಾರವಾಗಿ ಮಾತನಾಡಿ, ಇದರ ಬಗ್ಗೆ ಮಾಹಿತಿ ಇಲ್ಲ. ಕಾನೂನು ಚೌಕಟ್ಟಿನಲ್ಲಿ ಯಾರೂ ದೊಡ್ಡವರಲ್ಲ. ಯಾರೇ ಇದರಲ್ಲಿ ತಪ್ಪು ಮಾಡಿ ದ್ದರು ಕ್ರಮವಾಗುತ್ತದೆ. ಕಾನೂನು ಬದ್ಧವಾಗಿ ನಾವು ಬಿಜೆಪಿ ಜೊತೆ ಸೇರಿ ವಿರೋಧ ಪಕ್ಷ ದವರಾಗಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಐಟಿ ಸೆಲ್ ಜಿಲ್ಲಾಧ್ಯಕ್ಷ ನವೀನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೆಆರ್‌ಎಸ್ ಜಲಾಶಯದ ಭದ್ರತೆ ಪರಿಶೀಲಿಸಿದ ಮಂಡ್ಯ ಎಸ್ಪಿ



ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ನಂತರ ಕೆಆರ್‌ಎಸ್ ಅಣೆಕಟ್ಟೆಗೂ ಭೇಟಿ ನೀಡಿ ಭದ್ರತೆಯನ್ನು ಪರಿಶೀಲಿಸಿದರು. ಈ ವೇಳೆ ಸ್ಥಳೀಯ ಅಧಿಕಾರಿಗಳಿಂದ ಅಣೆಕಟ್ಟೆ ಭದ್ರತೆ ಬಗ್ಗೆ ಮಾಹಿತಿ ಪಡೆದರು.

ಹಾಸ್ಟೆಲ್‌ಗಳ ಮೂಲ ಸೌಕರ್ಯಕ್ಕೆ ಆದ್ಯತೆ

- ಬಿಸಿಎಂ ಹಾಸ್ಟೆಲ್‌ಗಳಿಗೆ ಶಾಸಕ ಪುಟ್ಟರಂಗಶೆಟ್ಟಿ ಭೇಟಿ
- ವಿದ್ಯಾರ್ಥಿಗಳ ಕುಂದುಕೊರತೆ ಆಲಿಕೆ



ಚಾಮರಾಜನಗರದ ಡಿ.ದೇವರಾಜಅರಸು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ವಿದ್ಯಾರ್ಥಿಗಳ ಕುಂದುಕೊರತೆ ಆಲಿಸಿದರು.

ಚಾಮರಾಜನಗರ, ಜು.4–ನಗರದ ಜಿಲ್ಲಾ ಅಂಬೇಡ್ಕರ್ ಕ್ರೀಡಾಂಗಣ ಸಮೀಪದ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಬಿ.ರಾಚಯ್ಯ ಜೋಡಿರಸ್ತೆಯ ವಿದ್ಯಾರ್ಥಿನಿಲಯ ಹಾಗೂ ಕರಿನಂಜನಪುರ ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಗುರುವಾರ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ವಿದ್ಯಾರ್ಥಿಗಳ ಕುಂದುಕೊರತೆ ಆಲಿಸಿದರು.


ಮೊದಲು ಡಿ.ದೇವರಾಜು ಹಿಂದುಳಿದ ವರ್ಗಗಳ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ ಶಾಸಕರು, ಕಂಪ್ಯೂಟರ್ ಕೊಠಡಿ, ಪೀಠೋಪಕರಣಗಳು, ಅಡುಗೆ ಕೊಠಡಿ, ಮಲಗುವ ಕೋಣೆ, ದಿನಸಿ ಉಗ್ರಾಣದ ಕೊಠಡಿ, ಊಟದ ಹಾಲ್, ಬೋಧನಾ ಸಭಾಂಗಣ, ಹಾಸ್ಟೆಲ್ ನಿರ್ವಹಣೆ ಬಗ್ಗೆ ಪರಿಶೀಲಿಸಿದರು. ಜೊತೆಗೆ ವಿದ್ಯಾರ್ಥಿಗಳ ಬಳಿ ತೆರಳಿ ಹಾಸ್ಟೆಲ್‌ಗೆ ಮೂಲಸೌಕರ್ಯ ಗಳನ್ನು ಒದಗಿಸುವ ಕುರಿತಂತೆ ಮಾಹಿತಿ ಪಡೆದರು.

ನಂತರ ಮಾತನಾಡಿದ ಅವರು, ಹಾಸ್ಟೆಲ್‌ಗಳಿಗೆ ಯಾವುದೇ ಸೌಲಭ್ಯ ಬೇಕಾದಲ್ಲಿ ತಮ್ಮನ್ನು ಸಂಪರ್ಕಿಸಿ, ವಿದ್ಯಾರ್ಥಿಗಳಿಗೆ ಉತ್ತಮ ಆಹಾರ ಒದಗಿಸಬೇಕು. ಮುಖ್ಯವಾಗಿ ಹಾಸ್ಟೆಲ್ ಸ್ವಚ್ಛತೆ ಬಗ್ಗೆ ಗಮನಹರಿಸಬೇಕು ಎಂದು ಹಾಸ್ಟೆಲ್‌ಗಳ ವಿಸ್ತರಣಾಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ವಿಸ್ತರಣಾಧಿಕಾರಿ ನಿಂಗರಾಜು, ಎಪಿಎಂಸಿ ಸದಸ್ಯ ಎ.ಎಸ್.ಪ್ರದೀಪ್, ತಾಪಂ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್, ಮುಖಂಡ ರವಿಗೌಡ ಹಾಜರಿದ್ದರು.

ಉಮೇಶ್ ಎಸ್‌ಪಿಕೆ ಕುರುಬರ ಸಂಘದ ಅಧ್ಯಕ್ಷ

ಉಪಾಧ್ಯಕ್ಷರಾಗಿ ಜಿ.ಮಹೇಶ್, ಗೌರವಾಧ್ಯಕ್ಷರಾಗಿ ಬೆಳ್ಳೇಗೌಡ ಅವಿರೋಧ ಆಯ್ಕೆ



ಚಾಮರಾಜನಗರ ತಾಲೂಕು ಕುರುಬರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಎಸ್‌ಪಿಕೆ ಉಮೇಶ್ ಹಾಗೂ ಉಪಾಧ್ಯಕ್ಷ ಜಿ.ಮಹೇಶ್ ಅವರನ್ನು ಅಭಿನಂದಿಸಲಾಯಿತು.

ಚಾಮರಾಜನಗರ, ಜು.4–ಚಾಮರಾಜನಗರ ತಾಲೂಕು ಕುರುಬರ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ನಡೆದಿದ್ದು, ಎರಡನೇ ಬಾರಿಗೆ ಅಧ್ಯಕ್ಷರಾಗಿ ಎಸ್‌ಪಿಕೆ ಉಮೇಶ್ ಅವಿರೋಧವಾಗಿ ಆಯ್ಕೆಯಾದರು.

ನಗರದ ಬಿ.ರಾಚಯ್ಯ ಜೋಡಿರಸ್ತೆಯ ಸಂಘದ ಕಚೇರಿ ಸಭಾಂಗಣದಲ್ಲಿ ಗುರುವಾರ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ಚುನಾವಣಾಧಿಕಾರಿ ಕೆ.ಎಂ.ತ್ಯಾಗರಾಜ್ ಪ್ರಸಾದ್ ಅವಿರೋಧ ಆಯ್ಕೆ ಘೋಷಿಸಿದರು. ಸಭೆಯಲ್ಲಿ ಸಂಘದ 29 ನಿರ್ದೇಶಕರು ಭಾಗವಹಿಸಿ, ಸಹಮತ ವ್ಯಕ್ತಪಡಿಸಿದರು.

ಪದಾಧಿಕಾರಿಗಳು: ಸಂಘದ ಗೌರವಾಧ್ಯಕ್ಷರಾಗಿ ಹಳೇಪುರ ಬೆಳ್ಳೇಗೌಡ, ಉಪಾಧ್ಯಕ್ಷರಾಗಿ ಹೆಬಚಳ್ಳಿ ಜಿ.ಮಹೇಶ್, ಪ್ರಧಾನ ಕಾರ್ಯದರ್ಶಿಯಾಗಿ ವಕೀಲ ಕೆ.ಪಿ. ನಾಗರಾಜು, ಸಹಕಾರ್ಯದರ್ಶಿಯಾಗಿ ಮಹದೇವಸ್ವಾಮಿ, ಖಜಾಂಚಿಯಾಗಿ ರಾಮಸಮುದ್ರದ ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿಗಳಾಗಿ ಗೋವಿಂದ, ಪ್ರಭು, ಕೆ.ಪುನೀತ್‌ಕುಮಾರ್, ಡಿ.ಮಂಜು, ಚನ್ನೇಗೌಡ, ರಾಜೇಶ್ ಆಯ್ಕೆಯಾದರು.

ಸಹಕಾರ ಸಂಘ ಸ್ಥಾಪನೆ ಒತ್ತು ಮುಂದಿನ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸಮಾಜದ ಅಭಿವೃದ್ಧಿ ಹಾಗೂ ಸಂಘದ ಪ್ರಗತಿ ಬಯಸಿ ಅಭಿವೃದ್ಧಿಯತ್ತ ನಮ್ಮ ಚಿತ್ತವನ್ನಿಟ್ಟು ಮುನ್ನಡೆಯೋಣ ಎಂದು ಸಂಘದ ಅಧ್ಯಕ್ಷ ಎಸ್‌ಪಿಕೆ ಉಮೇಶ್ ತಿಳಿಸಿದರು.

ಸಮಾಜದ ಪ್ರತಿಯೊಬ್ಬರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಸಹಕಾರ ಸಂಘ ರಚನೆ ಮಾಡಿ, ಆ ಮೂಲಕ ಅವರಿಗೆ ಸಾಲ ಸೌಲಭ್ಯ ನೀಡಿ, ಉದ್ಯಮ ಹಾಗೂ ವ್ಯವಹಾರಗಳಲ್ಲಿ ಅವರನ್ನು ಆರ್ಥಿಕ ಪ್ರಗತಿಗೊಳಿಸಲಾಗುವುದು ಎಂದರು.

ಸಭೆಯಲ್ಲಿ ನಿರ್ದೇಶಕರಾದ ಮರಿಸ್ವಾಮಿ, ಜಯರಾಮ್, ಎಂ.ಪಿ.ರಾಜು, ಬಿ.ಮಂಜು, ಶಿವಸ್ವಾಮಿ, ಉಷಾ ಎಸ್, ಜಿ.ನಟರಾಜು, ಕೆ.ಎಸ್.ಕುಮಾರ್, ಚಿಕ್ಕರಾಜು, ಎನ್.ಚಂದ್ರ, ಎಚ್.ಎಂ.ಶಿವಕುಮಾರ್, ಎಂ.ಮಹೇಶ್, ರೇವಣ್ಣ, ರಾಜೇಶ್ ಕೆ.ಬಂಗಾರೇಗೌಡ, ಪಿ.ಬಸವಣ್ಣ ಮಹದೇವ್, ಶಿವಕುಮಾರ್, ಮಹದೇವಸ್ವಾಮಿ, ಮಾಜಿ ಗೌರವಾಧ್ಯಕ್ಷ ಸೋಮಣ್ಣೇಗೌಡ ಭಾಗವಹಿಸಿದ್ದರು.



ನೂತನ ಎಸ್ಪಿಗೆ ಅಭಿನಂದನೆ...

ಚಾಮರಾಜನಗರ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಅವರನ್ನು ದಲಿತ ಮುಖಂಡರು ಅಭಿನಂದಿಸಿದರು. ದಲಿತ ಮುಖಂಡರಾದ ಬಸವನಪುರ ರಾಜಶೇಖರ, ಎಂ.ಶಿವಮೂರ್ತಿ, ಬಿ.ಚಾಮರಾಜು, ಕೆಸ್ತೂರು ಮರಪ್ಪ, ಹಸಗೂಲಿ ಸಿದ್ಧಯ್ಯ, ಸಿ.ಎಚ್. ರಂಗಸ್ವಾಮಿ, ಅಂಕಹಳ್ಳಿ ಸಿದ್ದಯ್ಯ, ಪುಟ್ಟಲಿಂಗಯ್ಯ, ಲೋಕೇಶ್, ಹನೂರು ಗುರುಸ್ವಾಮಿ, ಗುರುಲಿಂಗಯ್ಯ, ನಾಗೇಶ್, ರಾಜು, ಮಳವಳ್ಳಿ ಮಹದೇವಯ್ಯ, ವೆಂಕಟಮಾಧು, ಶಿವಣ್ಣ, ಕಾಮಗೆರೆ ಮಹದೇವ, ಭೈರನತ್ತ ಮಾದೇಶ್, ಕುಮಾರ್, ರಾಚಪ್ಪ ಇದ್ದರು.

ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಣೆ

ಚಾಮರಾಜನಗರ, ಜು.4– ನಗರಸಭೆ ಆಸ್ತಿ ತೆರಿಗೆ ಪಾವತಿ ರಿಯಾಯಿತಿ ಅವಧಿಯನ್ನು ಜು.31ರವರೆಗೆ ವಿಸ್ತರಿಸಲಾಗಿದೆ.

ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಹಾಗೂ ಸ್ವಯಂ ತೆರಿಗೆ ಪಾವತಿ ಉತ್ತೇಜಿಸುವ ನಿಟ್ಟಿನಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ ಅನ್ವಯ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದ್ದಲ್ಲಿ ಶೇ.5ರಷ್ಟು ರಿಯಾಯಿತಿಗೆ ಕಲ್ಪಿಸಿರುವ ಅವಕಾಶ ಅವಧಿಯನ್ನು ಜು.31ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ ಎಂದು ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು ಜಗಜೀವನರಾಮ್ ಪುಣ್ಯಸ್ಮರಣೆ

ಚಾಮರಾಜನಗರ, ಜು.4– ಮಾಜಿ ಉಪಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಮ್ ಅವರ 38ನೇ ಪುಣ್ಯಸ್ಮರಣೆಯನ್ನು ಜು.6ರಂದು ನಗರದಲ್ಲಿ ಆಚರಿಸಲಾಗುವುದು. ಪುಣ್ಯಸ್ಮರಣೆಯ ಅಂಗವಾಗಿ ಅಂದು ಬೆಳಗ್ಗೆ 11ಗಂಟೆಗೆ ನಗರದ ಜಿಲ್ಲಾಡಳಿತ ಭವನ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಜಿಲ್ಲಾಡಳಿತ ಭವನದ ನ್ಯಾಯಿಕ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಮ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

■ ಸತ್ಯಮೂರ್ತಿ ತೋಳಹುಣಸೆ

ಈ ವಾರ ತೆರೆ ಮೇಲೆ ಪ್ರೇಮಪತ್ರದ 'ಕಾಗದ'

ಮೊಬೈಲ್, ಇಂಟರ್‌ನೆಟ್ ಇದ್ಯಾವುದೂ ಇಲ್ಲದ ಕಾಲದಲ್ಲಿ ಪತ್ರಗಳೇ ಪ್ರೇಮಿಗಳ ಸಂಭಾಷಣೆಗೆ ಆಧಾರವಾಗಿದ್ದವು. ಅಂತಹ ಸಮಯದಲ್ಲಿ ನಡೆಯುವ ಹಿಂದೂ ಮುಸ್ಲಿಂ ಯುವ ಪ್ರೇಮಿಗಳ ಕಥೆಯನ್ನು ಈ ವಾರ ತೆರೆಗೆ ಬಂದಿರುವ ಕಾಗದ ಚಿತ್ರ ಹೇಳಲಿದೆ. ರಂಜಿತ್ ಅವರ ನಿರ್ದೇಶನದ ಈ ಚಿತ್ರವನ್ನು ಅರುಣ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. 2005ರ ಕಾಲಘಟ್ಟದಲ್ಲಿ ಎರಡು ಹಳ್ಳಿಗಳ ಮುಗ್ಧ ಪ್ರೇಮಿಗಳಿಬ್ಬರ ಧಾರುಣ ಕಥೆಯನ್ನು "ಕಾಗದ" ಚಿತ್ರದಲ್ಲಿ ನಿರ್ದೇಶಕ ರಂಜಿತ್ ಹೇಳಲು ಪ್ರಯತ್ನಿಸಿದ್ದಾರೆ.

ಆದಿತ್ಯ ಎಂಬ ನೂತನ ಪ್ರತಿಭೆ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಬಾಲನಟಿಯಾಗಿ ಹೆಸರು ಮಾಡಿರುವ ಅಂಕಿತ ಜಯರಾಂ "ಕಾಗದ" ಚಿತ್ರದಲ್ಲಿ ಬಡ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಆಯೇಶಾ ಎಂಬ ಯುವತಿಯಾಗಿ ನಟಿಸಿದ್ದಾರೆ. ನಾಯಕ ಆದಿತ್ಯ ಹಿಂದು ಯುವಕ, ಜಾತಿ ಮತ ಪ್ರತಿಷ್ಠೆಯ ಮಧ್ಯೆ ನಲುಗಿದ ಎರಡು ಮುಗ್ಧ ಹೃದಯಗಳ ಕಥೆಯಿದು. ನೇಹಾ ಪಾಟೀಲ್, ಬಲ ರಾಜ್ವಾಡಿ, ನೀನಾಸಂ ಅಶ್ವಥ್, ಗೌತಮ್, ಎಂಕೆ. ಮಠ, ಶಿವಮಂಜು ಮುಂತಾದವರು ಕಾಗದ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಚಿತ್ರದ ನಾಲ್ಕು ಹಾಡುಗಳಿಗೆ ಪ್ರದೀಪ್ ವರ್ಮ ಸಂಗೀತ ನೀಡಿದ್ದಾರೆ. ವೀನಸ್ ನಾಗರಾಜ್ ಮೂರ್ತಿ ಅವರು ಛಾಯಾಗ್ರಹಣ ಹಾಗೂ ಪವನ್‌ಗೌಡ ಅವರ ಸಂಕಲನ ಈ ಚಿತ್ರಕ್ಕಿದೆ.



ಹುಮಾ ಖುರೇಶಿ 'ಟಾಕ್ಸಿಕ್' ನಾಯಕಿ

ರಾಕಿಂಗ್‌ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ ಚಿತ್ರ ಟಾಕ್ಸಿಕ್. ಈ ಚಿತ್ರದ ನಾಯಕಿಯ ವಿಚಾರದಲ್ಲಿ ಹಲವಾರು ನಟೀಮಣಿಯರ ಹೆಸರುಗಳು ಓಡಾಡುತ್ತಿತ್ತು, ಆ ಪೈಕಿ ಬಾಲಿವುಡ್ ಬೆಡಗಿ ಕಿಯಾರಾ ಅಡ್ವಾಣಿಯ ಹೆಸರೂ ಇದೆ. ಇನ್ನು ಕಿಯಾರಾ ಅವರನ್ನು ಹೊರತುಪಡಿಸಿ, ಒಬ್ಬ ಲೇಡಿ ಸೂಪರ್‌ಸ್ಟಾರ್ ಕೂಡ ಟಾಕ್ಸಿಕ್‌ನಲ್ಲಿ ಅಭಿನಯಿಸಲಿದ್ದಾರೆ ಎಂಬ ಸುದ್ದಿಯಿದೆ. ಯಶ್ ಅಥವಾ ನಿರ್ದೇಶಕಿ ಗೀತು ಮೋಹನ್‌ದಾಸ್ ಈ ಬಗ್ಗೆ ಅಧಿಕೃತವಾಗಿ ಹೇಳಿಲ್ಲ, ಆದರೂ ಇವರ ಹೆಸರೇ ಚಾಲ್ತಿಯಲ್ಲಿದೆ.

ಈ ನಡುವೆ ಮತ್ತೊಬ್ಬ ಬಾಲಿವುಡ್ ಬೋಲ್ಡ್ ಅಂಡ್ ಬ್ಯೂಟಿಫುಲ್ ಹುಮಾ ಖುರೇಶಿ ಟಾಕ್ಸಿಕ್ ಚಿತ್ರದ ಮತ್ತೊಂದು ಪಾತ್ರಕ್ಕೆ ಆಯ್ಕೆಯಾಗಿದ್ದಾರೆ ಎಂಬ ಸುದ್ದಿ ಸದ್ಯಕ್ಕೆ ಗಾಂಧಿನಗರದಲ್ಲಿ ಹರಿದಾಡುತ್ತಿದೆ. ಅಂದ್ಹಾಗೇ ಹುಮಾ ಖುರೇಶಿ ಕೇವಲ ರೂಪವತಿ ಅಷ್ಟೇ ಅಲ್ಲ, ಅಭಿನಯದಲ್ಲೂ ಸೈ ಎನಿಸಿಕೊಂಡಿದ್ದಾರೆ. ಸೂಪರ್‌ಸ್ಟಾರ್ ರಜಿನಿಕಾಂತ್ ಅಭಿನಯದ ಕಾಲಾ ಸಿನಿಮಾ ಮೂಲಕ ಚಿತ್ರರಂಗಕ್ಕೆ ಬಂದಿದ್ದ ಹುಮಾ ಖುರೇಶಿ ಸದ್ಯಕ್ಕೆ ಜಾಲಿ ಎಲ್‌ಎಲ್‌ಬಿ 3 ಮತ್ತು ಗುಲಾಬಿ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇವರೀಗ ಟಾಕ್ಸಿಕ್ ಮೂಲಕ ಕನ್ನಡ ಚಿತ್ರರಂಗಕ್ಕೆ ಬರುತ್ತಿದ್ದಾರೆ ಎಂಬ ಮಾತಿದೆ. ಉಳಿದಂತೆ ಟಾಕ್ಸಿಕ್ ಚಿತ್ರದ ಚಿತ್ರೀಕರಣ ಇನ್ನೂ ಆರಂಭವಾಗಿಲ್ಲ. ಈ ನಡುವೆ ಬೆಂಗಳೂರಿನಲ್ಲಿ ಟಾಕ್ಸಿಕ್ ಚಿತ್ರಕ್ಕೆ ಕೋಟ್ಯಂತರ ವೆಚ್ಚದಲ್ಲಿ ಸೆಟ್‌ಗಳನ್ನು ಹಾಕಲಾಗಿದೆ. ಯಶ್ ಜೊತೆ ಸೇರಿ ಕೆ.ವಿ.ಎನ್.ಪ್ರೊಡಕ್ಷನ್ಸ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಸದ್ಯದಲ್ಲೇ ಚಿತ್ರದ ಪಾತ್ರವರ್ಗವನ್ನು ಪರಿಚಯಿಸುವ ಸಾಧ್ಯತೆಯಿದ್ದು, ಚಿತ್ರೀಕರಣ ಕೂಡ ಆರಂಭವಾಗಲಿದೆ.



'ಕಾದಾಡಿ' ಚಿತ್ರದಲ್ಲಿ ಆದಿತ್ಯ ಶಶಿಕುಮಾರ್, ಲಾವಣ್ಯ ಸಾಹುಕಾರ್



ಇಂದು ತೆರೆಗೆ ಶಶಿಕುಮಾರ್ ಪುತ್ರ ಆದಿತ್ಯನ 'ಕಾದಾಡಿ'

ಹಿರಿಯ ನಟ ಶಶಿಕುಮಾರ್ ಪುತ್ರ ಅಕ್ಷಿತ್ ಶಶಿಕುಮಾರ್ ಈಗಾಗಲೇ ಒಂದೆರಡು ಚಿತ್ರಗಳಲ್ಲಿ ನಾಯಕನಾಗಿ ನಟಿಸುವ ಮೂಲಕ ಗುರುತಿಸಿಕೊಂಡಿದ್ದಾರೆ. ಈ ವಾರ ಅವರ ನಟನೆಯ ಮತ್ತೊಂದು ಚಿತ್ರ ಕಾದಾಡಿ ಬಿಡುಗಡೆಯಾಗುತ್ತಿದೆ. ಅಕ್ಷಿತ್ ಈ ಚಿತ್ರದಿಂದ ಆದಿತ್ಯ ಶಶಿಕುಮಾರ್ ಆಗಿದ್ದಾರೆ. ಕ್ರೀಡೆ ಆಧಾರಿತ ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಕಾದಾಡಿ ಚಿತ್ರದಲ್ಲಿ ಲಾವಣ್ಯ ಸಾಹುಕಾರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಕನ್ನಡ, ತೆಲುಗು ಮತ್ತು ತಮಿಳು ಸೇರಿ 3 ಭಾಷೆಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಸತೀಶ್ ಮಾಲೆಂಪಾಟಿ ಅವರು ಕಥೆ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಅಲ್ಲದೆ ನಿರ್ಮಾಣದ ಜವಾಬ್ದಾರಿಯನ್ನೂ ಸಹ ಹೊತ್ತಿದ್ದಾರೆ. ಈ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಈ ವೇದಿಕೆಯಲ್ಲಿ ನಾಯಕ ನಟ ಆದಿತ್ಯ, ನಿರ್ದೇಶಕ ಸತೀಶ್ ಮಾಲೆಂಪಾಟಿ ಹಾಗೂ ವಿತರಕ ವಿಶ್ವನಾಥ್ ಹಾಜರಿದ್ದು, ಸಿನಿಮಾ ಕುರಿತಂತೆ ಮಾಹಿತಿ ಹಂಚಿಕೊಂಡರು.

ಮೊದಲು ನಾಯಕ ಆದಿತ್ಯ ಮಾತನಾಡುತ್ತ, ನಾನು ಅಭಿನಯಿಸಿದ ಮೂರನೇ ಚಿತ್ರವಿದು. ಹಿಂದಿನ ಎರಡೂ ಚಿತ್ರಗಳಿಗಿಂತ ಬೇರೆ ಥರದ ಪಾತ್ರವನ್ನು ಈ ಚಿತ್ರದಲ್ಲಿ ನಿಭಾಯಿಸಿದ್ದೇನೆ. ಆಟದಲ್ಲಿ ಮೇಲೆ ಬರಬೇಕು ಎಂದು ಹೋರಾಟ ಮಾಡುವ ಯುವಕನ ಕಥೆ ಇದಾಗಿದ್ದು, ಮನರಂಜನೆಗೆ ಬೇಕಾದ ಎಲ್ಲ ಅಂಶಗಳು ಈ ಚಿತ್ರದಲ್ಲಿವೆ. ಈ ಚಿತ್ರದ ಮೇಲೆ ನಾನು ತುಂಬಾ ಭರವಸೆ ಇಟ್ಟುಕೊಂಡಿದ್ದೇನೆ. ನಮ್ಮ ತಂದೆಗೆ ಪ್ರೋತ್ಸಾಹಿಸಿದ ಹಾಗೆ ನನ್ನನ್ನೂ ಬೆಳೆಸಿ ಎಂದು ಮಾಧ್ಯಮದವರಲ್ಲಿ ವಿನಂತಿಸಿಕೊಂಡರು. ನಿರ್ದೇಶಕ ಸತೀಶ್ ಮಾಲೆಂಪಾಟಿ ಮಾತನಾಡಿ, ನಾನು ಒಂದಷ್ಟು ಕಿರುಚಿತ್ರಗಳು ಅಲ್ಲದೆ ತೆಲುಗಿನಲ್ಲಿ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದು ಕನ್ನಡದಲ್ಲಿ ಮೊದಲ ಚಿತ್ರ, ಪಕ್ಕಾ ಕಮರ್ಷಿಯಲ್ ಕಾನ್ಸೆಪ್ಟ್ ಚಿತ್ರದಲ್ಲಿದೆ, ಮೊದಲು ಕನ್ನಡದಲ್ಲಿ ರಿಲೀಸ್ ಮಾಡಿ, ನಂತರ ತೆಲುಗು, ತಮಿಳಿನಲ್ಲಿ ರಿಲೀಸ್ ಮಾಡುವ ಯೋಜನೆಯಿದೆ ಎಂದು ಹೇಳಿಕೊಂಡರು.

ಲಾವಣ್ಯ ಸಾಹುಕಾರ, ಚಾಂದಿನಿ ತಮಿಳರಸನ್ ಈ ಚಿತ್ರದಲ್ಲಿ ಇಬ್ಬರು ನಾಯಕಿಯರಾಗಿ ನಟಿಸಿದ್ದು, ಉಳಿದಂತೆ ಪೋಸಾನಿ, ರವಿಕಾಳೆ, ಮಾರಿಮುತ್ತು, ಶ್ರವಣ್, ರಾಘವೇಂದ್ರ ಮುಂತಾದವರು ನಟಿಸಿದ್ದಾರೆ. ಚಿತ್ರದಲ್ಲಿ ಆರು ಸುಂದರ ಹಾಡುಗಳಿದ್ದು, ಭೀಮ್ಸ್ ಸಿಸಿಲಿಯೋ ಸಂಗೀತ ಸಂಯೋಜಿಸಿದ್ದಾರೆ. ಚಿ.ವಿಜಯಶ್ರೀ ಅವರ ಛಾಯಾಗ್ರಹಣ ಚಿತ್ರಕ್ಕಿದ್ದು, ಗೋವಾ, ಚಿಕ್ಕಮಗಳೂರು, ಹೈದರಾಬಾದ್, ಚೆನ್ನೈ ಸುತ್ತಮುತ್ತ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.





'ಬಿಲ್ಲಾರಿ' ರಾಜನ ಕಥೆ

ಕೆಲ ಚಿತ್ರಗಳು ತನ್ನ ಶೀರ್ಷಿಕೆಯ ಕಾರಣದಿಂದಲೇ ಕುತೂಹಲ ಹುಟ್ಟಿಸುತ್ತವೆ. ಅಂಥ ಮತ್ತೊಂದು ಚಿತ್ರವೇ ಬಿಲ್ಲಾರಿ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆಯಿತು. ರಿಶ್ವಿಕ್ ಶೆಟ್ಟಿ ಕಥೆ ಬರೆದು ನಿರ್ಮಾಣದ ಜೊತೆಗೆ ಚಿತ್ರದ ನಾಯಕ ನಾಗೂ ನಟಿಸುತ್ತಿದ್ದಾರೆ. ಗೋಕಾಕ್ ಮೂಲದ ಪಿ.ಎಲ್. ಭರಮಣ್ಣ ಚಿತ್ರ ಕಥೆ ರಚಿಸಿ ನಿರ್ದೇಶನ ಮಾಡುತ್ತಿದ್ದಾರೆ. ಶಿಲ್ಪಗೌಡ ಚಿತ್ರದ ಸಹ ನಿರ್ಮಾಪಕಿ.

ಸುದ್ದಿಗಾರರರೊಂದಿಗೆ ಮಾತನಾಡಿದ ನಿರ್ದೇಶಕ ಭರಮಣ್ಣ, ಬಿಲ್ಲಾರಿ ಎಂಬ ಪದಕ್ಕೆ ಬೇರೆ ಬೇರೆ ಅರ್ಥವಿದ್ದರೂ ನಮ್ಮ ಸಿನಿಮಾದಲ್ಲಿ ಅದನ್ನು ನಾಯಕನ ಹೆಸರಾಗಿ ಬಳಸಿಕೊಂಡಿದ್ದೇವೆ. ಬಿಲ್ಸ್ ಬುಡಕಟ್ಟು ಜನಾಂಗದ ರಾಜನ ಬಗ್ಗೆ ಮಾಡಿರೋ ಐತಿಹಾಸಿಕ ಕಥೆಯನ್ನು ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಹೇಳಲು ಟ್ರೈ ಮಾಡಿದ್ದೇವೆ ಭಾರತದಲ್ಲಿ ಬಿಲ್ಸ್ ಜನಾಂಗದವರ ಜನಸಂಖ್ಯೆ ಸುಮಾರು ಹನ್ನೊಂದು ಲಕ್ಷದಷ್ಟಿದ್ದು, ಗುಜರಾತ್ ಹಾಗೂ ರಾಜಸ್ಥಾನದಲ್ಲಿ ಅವರು ಹೆಚ್ಚಾಗಿ ವಾಸವಿದ್ದಾರೆ. ಚಿತ್ರಕ್ಕೆ ಬೆಂಗಳೂರು, ಅರಸೀಕೆರೆ, ಹಾಸನ, ಅಣ್ಣಿಗೇರಿ, ಗಜೇಂದ್ರಗಡ, ಯಾಣದಂಥ ಸುಂದರ ತಾಣಗಳಲ್ಲಿ ಚಿತ್ರೀಕರಿಸುವ ಯೋಜನೆಯಿದೆ ಎಂದು ವಿವರಿಸಿದರು.


ಚಿತ್ರದಲ್ಲಿ ರಿಶ್ವಿಕ್ ಶೆಟ್ಟಿ ಅವರೇ ಬಿಲ್ ರಾಜನಾಗಿ ಕಾಣಿಸಿಕೊಂಡಿದ್ದಾರೆ. ಮೈಸೂರು ಮೂಲದ ಚೈತ್ರಾ ಲೋಕನಾಥ್ ಚಿತ್ರದ ನಾಯಕಿ, ಭಟ್ಟರ ಮಗಳು. ಉಳಿದಂತೆ ನಾಗೇಂದ್ರ ಅರಸ್, ಪ್ರಕಾಶ್ ತುಮ್ಮಿನಾಡು, ಎಂ.ಕೆ. ಮಠ, ಕೆಂಪೇಗೌಡ, ಬಲರಾಮ್ ಪಂಚಾಲ್, ಚಂದ್ರಪ್ರಭಾ, ಕಾಂತಾರ ನವೀನ್ ಬೊಂದೆಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಬಿಲ್ಲಾರಿ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳಿದ್ದು ಸುಭಾಷ್ ಅವರ ಸಂಗೀತ ಸಂಯೋಜನೆಯಿದೆ. ಪ್ರೇಮಗೀತೆಯೊಂದಕ್ಕೆ ಪ್ರಮೋದ್ ಮರವಂತೆ ಅವರ ಸಾಹಿತ್ಯವಿದೆ. ಉಳಿದಂತೆ ಅಗಸ್ತ್ಯ ಯು.ಗೌಡ ಅವರ ಛಾಯಾಗ್ರಹಣ, ತಿರುಪತಿ ಅವರ ಕಲಾನಿರ್ದೇಶನ ಈ ಚಿತ್ರಕ್ಕಿದೆ.

ದಟ್ಟ ಕಾಡಲ್ಲಿ 'ಅಡವಿಕಟ್ಟೆ'ಯ ಹಾರರ್ ಕಥೆ

ಆಕ್ಷನ್, ಫ್ಯಾಮಿಲಿ ಚಿತ್ರಗಳಿಗಿಂತ ಹಾರರ್ ಸಿನಿಮಾಗಳು ಹೆಚ್ಚು ಕುತೂಹಲ ಹುಟ್ಟಿಸುತ್ತವೆ ಅಂಥದೇ ಮತ್ತೊಂದು ಚಿತ್ರ ಅಡವಿಕಟ್ಟೆ. ಸಂಜೀವ್ ಗಾವಂಡಿ ಅವರ ನಿರ್ದೇಶನದ ಈ ಚಿತ್ರದಲ್ಲಿ ನಾಗರಾಜು, ಹಿರಿಯನಟ ಅಭಿಜಿತ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೈಲರ್‌ನ್ನು ಡಿ.ಕೆ.ಸುರೇಶ್ ಬಿಡುಗಡೆ ಮಾಡಿ ನಂತರ ಮಾತನಾಡುತ್ತ, ಕನ್ನಡದಲ್ಲಿ ಸಾಕಷ್ಟು ಉತ್ತಮ ಕಂಟೆಂಟ್ ಚಿತ್ರಗಳು ಬರುತ್ತಿದೆ. ಅಂಥಾ ಚಿತ್ರಗಳ ಸಾಲಿಗೆ ಈ ಚಿತ್ರವೂ ಸೇರಲಿ ಎಂದು ಶುಭ ಹಾರೈಸಿದರು.

ನಾಯಕ ನಾಗರಾಜು ಮಾತನಾಡುತ್ತ, ಕನಕಪುರ ಬಳಿಯ ಹಳ್ಳಿಯಿಂದ ಬಂದ ನನಗೆ ಸಿನಿಮಾದಲ್ಲಿ ನಟಿಸಬೇಕೆನ್ನುವುದು ಬಹುದಿನಗಳ ಕನಸು. ಅದೀಗ ನನಸಾಗಿದೆ. ನನ್ನ ಪಾತ್ರಕ್ಕೆ ಎರಡು ಶೇಡ್ ಇದ್ದು, ಅಂಥಾ ಕ್ಯಾರೆಕ್ಟರನ್ನು ಯಾರೊಬ್ಬರೂ ಸಹ ನಿರೀಕ್ಷೆ ಮಾಡಿರಲ್ಲ. ತುಂಬಾ ಚೆನ್ನಾಗಿ ಬಂದಿದೆ ಎಂದರು. ಹಿರಿಯನಟ ಅಭಿಜಿತ್ ಮಾತನಾಡಿ, ನನ್ನದು ಒಂದು ವಿಶೇಷ ಪಾತ್ರ ಎಂದರು. ನಂತರ ನಿರ್ದೇಶಕ ಸಂಜೀವ್ ಗಾವಂಡಿ ಮಾತನಾಡುತ್ತ, ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಹಾರರ್ ಜಾನರ್ ಚಿತ್ರ.

ಸಿನಿಪದಬಂಧ-533



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ರಾಮ್ ಕುಮಾರ್ ಎಲ್ಲಿದ್ದಾರೆ? ಕಲ್ಲು ಎಸೆಯಬಾರದು 5
5. ಈ 'ಹಣ್ಣು' ಹುಳಿ 2
7. ಜಿ.ವಿ.ಅಯ್ಯರ್ ಅವರ ಅಂಚೆ ನೌಕರ 5
8. ನಿಲ್ಲು ನಿಲ್ಲೇ 'ಚಿಟ್ಟೆ' ಬೇಡ ಬೇಡ ಬೆಂಕಿಯ ಸಂಗ 3
9. ಶಿವರಾಜ್‌ಕುಮಾರ್ ನೆಂಟರಿಷ್ಟರಿಗೆ ನಾಗಣ್ಣ ನಿರ್ದೇಶಕ 5
11. ಶಿವಣ್ಣ ಇರುವ ಪ್ರದೇಶದ ಸುತ್ತ ನೀರಿದೆ 4
13. ಪ್ರೇಮೋತ್ಸವ ಚಿತ್ರದ ನಾಯಕಿ 4
14. ಡಿ.ಶಂಕರ್‌ಸಿಂಗ್ ನಿರ್ದೇಶನದಲ್ಲಿ ಬೂಟಾಟಿಕೆಯವನಿದ್ದಾನೆ 5
17. ಅನಂತ್ ನಾಗ್ – ಭಾರತಿ ಅಭಿನಯಕ್ಕೆ ಕವಿತಾ ಲಂಕೇಶ್ ನಿರ್ದೇಶಕಿ 7
19. ಟೈಗರ್ ಪ್ರಭಾಕರ್ "ಸೂರ್ಯ"ನಂತಿದ್ದಾನೆ 3
20. ಅಂಬರೀಷ್ ಅಭಿನಯದಲ್ಲಿ ಬಲಿಯಾದ ಚಿತ್ರ 3
21. ಅನಂತ್ – ಖುಷ್ಬೂವಿನ ಆಗಸ 3



ವಿಜೇತರು: ವಿಜಯಕೃಷ್ಣ ಚಿನಿವಾರ್, ನಂ. 41, 14ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ, ಮೈಸೂರು.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 532ರ ಉತ್ತರ

ಜೀ	ವ	ನ	ದಿ		ಅಂ					
ವ		ಟ		ಬಂ	ಗಾ	ರ	ದ	ಮ	ನೆ	
ನ			ಮಾ		ರ			ಕ್ಕ		ತುಂ
ಜೋ	ಡಿ	ಜೀ	ವ		ಕ		ಗಾ	ಳಿ	ಮಾ	ತು
ಕಾ			ಮಾ			ಸಿ		ರ		ರು
ಲಿ		ಶಿ	ವ	ರಂ	ಜಿ	ನಿ		ಲ		
	ರಾ		ಮ			ಮಾ		ವ್ವ		ಸೀ
	ಜ	ಲ	ದು	ರ್ಗ		ತಾ	ಯಿ	ಮ	ಮ	ತೆ
	ಸಿಂ		ವೆ		ಸೀ	ರೆ		ನೆ		ಯ
	ಹ		ಮಾ			ಯ		ತುಂ		ರು
		ಹಾ	ಡು	ಗಾ	ರ	ರು		ಬ	ಡ್ಡಿ	

ಮೇಲಿನಿಂದ ಕೆಳಕ್ಕೆ

1. ವಾಯುವಿನ ವಿರುದ್ಧ ಪ್ರತಿಕ್ರಿಯಿಸಿ ಮೆಲ್ಲೆತ್ತುವ, ಎಳೆಯುವ ಬಲ ಇದಕ್ಕಿದೆ ಎಂದು ಗೋಲ್ಡನ್ ಸ್ಟಾರ್‌ಗೂ ಗೊತ್ತಿದೆ 4
2. "_ _ _ _ _ _ _ _ _ _ ಮುತ್ತಾಗಿ ಬಿತ್ತು ಈ ರಾತ್ರಿ ಹೊತ್ತು ಮೈಯೆಲ್ಲಾ ಜುಮೆಂದಿತು..." 10
3. ಫ್ರೆಂಚ್ ಕ್ರಾಂತಿಕಾರನ ಹೆಸರನ್ನು ನೆನಪಿಸುವ ನಟ 5
4. ಶ್ರೀನಾಥ್ – ಮಂಜುಳಾರ ಪ್ರೀತಿ ಬೆಸೆದುಕೊಂಡಿದೆ 5
6. ಪ್ರಭಾಕರ್ – ನಳಿನಿಯ ರಜತ ಸರ್ಪ 4
10. ಭಲೇ ಎನಿಸಿಕೊಂಡ "ಗೂಳಿ" 3
12. ಅಬ್ಬಾಸ್, ಮಾಧವನ್, ಪ್ರೇಮ ಅಭಿನಯದಲ್ಲಿ ನೀರವತೆ ಮೂರು ಬಾರಿ ಬಂದಿದೆ 6
13. "ಹುಟ್ಟಿದೋರು ಯಾರೂ ಸಾಯ್ದೆ ಹೋದ್ರೆ ಹೆಂಗೆ ಹೇಳ್ರಣ್ಣ.....", ಗೀತೆಯ ಚಿತ್ರ 5
15. ಗೆಲುವಿನ ಸರ ಧರಿಸಿರುವ ನಟಿ 4
16. ರವಿಚಂದ್ರನ್ – ಕಸ್ತೂರಿ ಅಭಿನಯದ ಬುದ್ಧಿವಂತ 2
18. ಗಂಗಾಳ ಜೊತೆಯಾಗಿ ಹರಿದ ನದಿ 3

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಮುಂಬೈನಲ್ಲಿ ಅಭಿಮಾನಿ ಸಾಗರದಲ್ಲಿ ಮಿಂದೆದ್ದ ಟೀಂ ಇಂಡಿಯಾ





ವಿಜಯೋತ್ಸವದಲ್ಲಿ ಜನಸಾಗರದ ನಡುವೆ ಟೀಂ ಇಂಡಿಯಾ ಆಟಗಾರರು. ಬಲಚಿತ್ರದಲ್ಲಿ ಅಸಂಖ್ಯಾತ ಅಭಿಮಾನಿಗಳ ಕಾಣಬಹುದು.

ಮುಂಬೈ, ಜು.4– ಟಿ–20 ವಿಶ್ವಕಪ್ ಗೆದ್ದು ತವರಿಗೆ ಮರಳಿದ ಟೀಮ್ ಇಂಡಿಯಾಕ್ಕೆ ದೆಹಲಿಯಲ್ಲಿ ಬೆಳಗ್ಗೆ ಭವ್ಯ ಸ್ವಾಗತ ನೀಡಿ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದಿಸಿದ ಬಳಿಕ ಸಂಜೆ ಮುಂಬೈನಲ್ಲೂ ಅಭೂತಪೂರ್ವ ಸ್ವಾಗತ ನೀಡಲಾಯಿತು.

ಅರಬ್ಬಿ ಸಮುದ್ರ ತೀರದ ಮರೀನ್ ಡ್ರೈವ್‌ನಲ್ಲಿ ಲಕ್ಷಾಂತರ ಜನರ ಮಧ್ಯೆ ನೆಚ್ಚಿನ ಕ್ರಿಕೆಟಿಗರ ಭವ್ಯ ಮೆರವಣಿಗೆ ಸಾಗಿತು. ಕಿಕ್ಕಿರಿದು ಸೇರಿದ್ದ ಕ್ರಿಕೆಟ್‌ಪ್ರೇಮಿಗಳ ಜೈಕಾರ ಮುಗಿಲು ಮುಟ್ಟಿತ್ತು. ಮತ್ತೊಂದೆಡೆ, ವಾಂಖೆಡೆ ಮೈದಾನ ಹರ್ಷೋದ್ಗಾರಗಳಿಂದ ಪ್ರತಿಧ್ವನಿಸಿತು.

ವಿಜಯೋತ್ಸವದ ಪರೇಡ್‌ಗೆ 'ವಾಟರ್ ಸೆಲ್ಯೂಟ್': ಸ್ವದೇಶಕ್ಕೆ ಬರುತ್ತಿದ್ದಂತೆ ವಿಶ್ವ ಚಾಂಪಿಯನ್ ಕ್ರಿಕೆಟಿಗರು ಮೊದಲು ಪ್ರಧಾನಿ ಮೋದಿ ನಿವಾಸಕ್ಕೆ ಭೇಟಿ ನೀಡಿದರು. ಅಲ್ಲಿಂದ ವಿಜಯೋತ್ಸವ ಪರೇಡ್‌ಗಾಗಿ ವಿಮಾನದಲ್ಲಿ ಮುಂಬೈಗೆ ಸಂಜೆ ಆಗಮಿಸಿದರು. ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಂಜೆಯ ವೇಳೆಗೆ ಬಂದಿಳಿದ ಟೀಂ ಇಂಡಿಯಾ ಆಟಗಾರರಿದ್ದ ವಿಸ್ತಾರ ವಿಮಾನಕ್ಕೆ 'ವಾಟರ್ ಸೆಲ್ಯೂಟ್' ನೀಡಲಾಯಿತು.

ಕಿಕ್ಕಿರಿದ ಕ್ರಿಕೆಟ್ ಅಭಿಮಾನಿಗಳು: ನಂತರ ಮರೀನ್ ಡ್ರೈವ್‌ಗೆ ವಿಶ್ವ ಚಾಂಪಿಯನ್ನರು ಆಗಮಿಸಿದರು. ಇಲ್ಲಿನ ನಾರಿಮನ್ ಪಾಯಿಂಟ್‌ನಿಂದ ವಾಂಖೆಡೆ ಮೈದಾನದವರೆಗೆ ಒಂದು ಕಿ.ಮೀ. ದೂರ ಆಕರ್ಷಕ ವಿಜಯೋತ್ಸವ ಪರೇಡ್ ಸಾಗಿತು. ವಿಶ್ವಕಪ್ ವಿಜೇತರಿಗೆ ಸ್ವಾಗತ ಕೋರಲು ಹಾಗೂ ಕಪ್ ಕಣ್ತುಂಬಿಕೊಳ್ಳಲು ಕ್ರಿಕೆಟ್ ಅಭಿಮಾನಿಗಳು ಮಧ್ಯಾಹ್ನದಿಂದಲೇ ಆಗಮಿಸತೊಡಗಿದ್ದರು. ಮುಂಬೈನ ಮೂಲೆ–ಮೂಲೆಗಳಿಂದಲೂ ಬಂದು ಸೇರಿದರು. ಮಕ್ಕಳು, ಯುವಕರು, ಮಹಿಳೆಯರು, ಹಿರಿಯ ನಾಗರಿಕರಾದಿಯಾಗಿ ವಯಸ್ಸಿನ ಎಲ್ಲೆ ಮೀರಿದ ಜನಸಾಗರ ಅರಬ್ಬಿ ಸಮುದ್ರದ ತೀರದಲ್ಲಿ ಜಮಾಯಿಸಿತ್ತು.

2 ಗಂಟೆ ಪರೇಡ್ ವಿಳಂಬ: ಕ್ರಿಕೆಟಿಗರ ವಿಜಯೋತ್ಸವದ ಮೆರವಣಿಗೆಗಾಗಿ ವಿಶೇಷವಾದ ತೆರೆದ ಡೆಕ್ ಬಸ್ ಸಿದ್ಧಪಡಿಸಲಾಗಿತ್ತು. ಪರೇಡ್ 2 ಗಂಟೆ ತಡವಾಗಿ ಆರಂಭವಾದರೂ, ರಸ್ತೆಗಳಲ್ಲಿ ಅಭಿಮಾನಿ ಸಾಗರ ಕರಗಲಿಲ್ಲ. 7 ಗಂಟೆ ಸುಮಾರಿಗೆ ಬಸ್‌ನಲ್ಲಿ ವಿಶ್ವಕಪ್ ಸಹಿತ ಮೆಚ್ಚಿನ, ನೆಚ್ಚಿನ ಆಟಗಾರರು ಕಾಣಿಸಿಕೊಳ್ಳುತ್ತಿದ್ದಂತೆ ಅಭಿಮಾನಿಗಳು ರೋಮಾಂಚನ ಗೊಂಡರು. ಆಟಗಾರರು ಟ್ರೋಫಿಯನ್ನು ಅಭಿಮಾನಿಗಳತ್ತ ತೋರಿಸುತ್ತಾ ಉತ್ಸಾಹ ಹೆಚ್ಚಿಸಿದರು.

ತುಂಬಿ ತುಳುಕಿದ ವಾಂಖೆಡೆ: ಚಾಂಪಿಯನ್ನರು ಬಸ್‌ನಲ್ಲಿ ಸಾಗುತ್ತಿದ್ದಂತೆ ಆಕಾಶ ಗಾಢವಾದ ಮಾನ್ಸೂನ್ ಮೋಡ ಗಳಿಂದ ಕವಿದು ತುಂತುರು ಮಳೆ ಹನಿಗಳ ಸುರಿಸಿತು. ಈ ಮೂಲಕ ಭಾರತೀಯ ಕ್ರಿಕೆಟಿಗರು ಪ್ರಕೃತಿಯ ಸ್ವಾಗತವನ್ನೂ ಸ್ವೀಕರಿಸಿದರು. ಮತ್ತೊಂದೆಡೆ, ಮಳೆಯ ನಡುವೆಯೇ ಅಭಿಮಾನಿಗಳು ಛತ್ರಿಗಳನ್ನು ಹಿಡಿದು ಮೈದಾನದತ್ತ ಜೈಕಾರ ಹಾಕುತ್ತಾ ಹೆಜ್ಜೆ ಹಾಕಿದರು.

17 ವರ್ಷಗಳ ನಂತರ ಮುಂಬೈ ಬೀದಿಗಳಲ್ಲಿ ವಿಜಯೋತ್ಸವ: ಸ್ಟೇಡಿಯಂಗೆ ಅಭಿಮಾನಿಗಳಿಗೆ ಉಚಿತ ಪ್ರವೇಶಾವಕಾಶ ನೀಡಲಾಯಿತು. ಹೀಗಾಗಿ ಸಾವಿರಾರು ಜನರು ಸಂಜೆ 5 ಗಂಟೆಯ ಸುಮಾರಿಗೆ ಗೇಟ್‌ಗಳ ಹೊರಗೆ ಕಾಯುತ್ತಿದ್ದರು. ಗೇಟ್‌ಗಳನ್ನು ತೆರೆಯುತ್ತಿದ್ದಂತೆ ಅಭಿಮಾನಿಗಳು ನುಗ್ಗಿದರು. ಅಪಾರ ಜನರಿಂದ ತುಂಬಿ ತುಳುಕಿದ್ದ ವಾಂಖೆಡೆಯಲ್ಲಿ ಡಿಜೆ ಸದ್ದು ಕೂಡ ಜೋರಾಗಿತ್ತು.

ರೋಕೊಗೆ ವಿಶೇಷ ಗೌರವ ನೀಡಿದ ವಿಸ್ತಾರ ವಿಮಾನ



ಮುಂಬೈ: ಐಸಿಸಿ ಟಿ20 ವಿಶ್ವಕಪ್ ಗೆದ್ದ ಹಿರಿಯ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ವಿಸ್ತಾರ ಏರ್ ಲೈನ್ಸ್ ವಿಭಿನ್ನ ರೀತಿಯಲ್ಲಿ ಗೌರವ ಸಲ್ಲಿಸಿದೆ. ಭಾರತ ತಂಡ ದೆಹಲಿಯಿಂದ ವಿಸ್ತಾರ ವಿಮಾನದ ಮೂಲಕ ಮುಂಬೈಗೆ ಪ್ರಯಾಣಿಸಿತು.

ಆದರೆ ವಿಮಾನಯಾನ ಸಂಸ್ಥೆಯು ತನ್ನ ವಿಮಾನದ ಕಾಲ್ ಸೈನ್ ಮೂಲಕ ದಿಗ್ಗಜ ಆಟಗಾರರಿಗೆ ಗೌರವ ನೀಡಿದೆ. ಟೀಂ ಇಂಡಿಯಾ ಆಟಗಾರರು ಹೊಸದಿಲ್ಲಿಯಿಂದ ಮುಂಬೈಗೆ ಪ್ರಯಾಣಿಸಿದ ವಿಮಾನ ಯುಕೆ 1845. ಇದು ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಜೆರ್ಸಿ ಸಂಖ್ಯೆಗಳು.

ವಿರಾಟ್ ಕೊಹ್ಲಿ ಅವರ ಜೆರ್ಸಿ ಸಂಖ್ಯೆ 18 ಆಗಿದ್ದರೆ, ರೋಹಿತ್ ಶರ್ಮಾ ಅವರ ಜೆರ್ಸಿ ಸಂಖ್ಯೆ 45. ಇದನ್ನು ಜೋಡಿಸಿ ವಿಮಾನಯಾನ ಸಂಸ್ಥೆಯು ಟೀಂ ಇಂಡಿಯಾದ ದಿಗ್ಗಜರಿಗೆ ಗೌರವ ಸಲ್ಲಿಸಿದೆ.

ವಿಮಾನವು ದೆಹಲಿಯಿಂದ ಮಧ್ಯಾಹ್ನ 2:55 ಕ್ಕೆ ಟೇಕಾಫ್ ಆಗಿದ್ದು, ಸಂಜೆ 5:25 ಕ್ಕೆ ಮುಂಬೈಯಲ್ಲಿ ಇಳಿದಿದೆ. ವಿಸ್ತಾರ ವಿಮಾನವು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ವಿಮಾನ ನಿಲ್ದಾಣದ ಟರ್ಮಿನಲ್ 2 ರಲ್ಲಿ ಇಳಿದಿದೆ.

ಆಟಗಾರರಿಗೆ ಸನ್ಮಾನ: 125 ಕೋಟಿ ಬಹುಮಾನ ವಿತರಣೆ



ಮುಂಬೈನ ವಾಂಖೆಡೆ ಮೈದಾನದಲ್ಲಿ ಟಿ–20 ವಿಶ್ವಕಪ್ ವಿಜೇತ ಟೀಂ ಇಂಡಿಯಾ ಆಟಗಾರರಿಗೆ ಬಿಸಿಸಿಐ ವತಿಯಿಂದ 125 ಕೋಟಿ ರೂ.ಗಳ ಬಹುಮಾನದ ಚೆಕ್ ವಿತರಿಸಲಾಯಿತು.

ಮುಂಬೈ, ಜು.4– ಅದ್ದೂರಿಯಾಗಿ ನಡೆದ ಗೆಲುವಿನ ಪರೇಡ್ ಬಳಿಕ, ಟಿ20 ವಿಶ್ವಕಪ್ ವಿಜೇತ ಟೀಮ್ ಇಂಡಿಯಾ ಆಟಗಾರರಿಗೆ ಬಿಸಿಸಿಐ ವತಿಯಿಂದ ವಾಂಖೆಡೆ ಸ್ಟೇಡಿಯಂನಲ್ಲಿ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ ಬಿಸಿಸಿಐ ತಾನು ಘೋಷಣೆ ಮಾಡಿದ್ದ 125 ಕೋಟಿ ರೂಪಾಯಿಯ ಬಹುಮಾನ ಮೊತ್ತದ ಚೆಕ್ ಅನ್ನು ವಿಶ್ವಕಪ್ ವಿಜೇತ ತಂಡಕ್ಕೆ ಹಸ್ತಾಂತರ ಮಾಡಿತು. ಬಳಿಕ ಟ್ರೋಫಿ ಗೆದ್ದ ತಂಡದ ಆಟಗಾರರು ವಂದೇ ಮಾತರಂ ಹಾಡಿಗೆ ಇಡೀ ಮೈದಾನದ ಸುತ್ತ ವಿಕ್ಟರಿ ಲ್ಯಾಪ್ ಮಾಡಿತು. ಸ್ಟೇಡಿಯಂನಲ್ಲಿ ನೆರೆದಿದ್ದ ಅಪಾರ ಜನಸ್ತೋಮ ವಿಜೇತ ತಂಡದ ಆಟಗಾರರ ಹೆಸರು ಕೂಗಿ ಸಂಭ್ರಮಿಸಿದರು. ವಿರಾಟ್ ಕೊಹ್ಲಿ ಮಾತನಾಡಿ, ಟಿ20 ವಿಶ್ವಕಪ್ ಗೆದ್ದ ನಂತರ ನಾನು ಮತ್ತು ರೋಹಿತ್ ಇಬ್ಬರೂ ಕಣ್ಣೀರು ಹಾಕಿದ್ದೆವು. ಇಡೀ ಟೂರ್ನಿಯಲ್ಲಿ ಸ್ಮರಣೀಯ ಬೌಲಿಂಗ್ ಮಾಡಿದ ಜಸ್‌ಪ್ರೀತ್ ಬುಮ್ರಾ ಅವರನ್ನು ಪ್ರಶಂಸೆ ಮಾಡಿದರು. ಅಲ್ಲದೆ, ಜಸ್‌ಪ್ರೀತ್ ಬುಮ್ರಾನಂಥ ವೇಗಿ ಯುಗಕ್ಕೆ ಒಬ್ಬರು ಸಿಗುತ್ತಾರೆ. ಅವರು ನಿಜಕ್ಕೂ ವಿಶ್ವದ 8ನೇ ಅಚ್ಚರಿ ಎಂದರೂ ತಪ್ಪಲ್ಲ ಎಂದರು.

ನಿರ್ಧಾರ ಬದಲಿಸಿದ ಫೋನ್ ಕಾಲ್: ಕಾರ್ಯಕ್ರಮದಲ್ಲಿ ಮಾತನಾಡಿದ ಕೋಚ್ ರಾಹುಲ್ ದ್ರಾವಿಡ್, 2023ರ ಏಕದಿನ ವಿಶ್ವಕಪ್ ಸೋಲಿನ ಬಳಿಕ ಕೋಚ್ ಸ್ಥಾನದಿಂದ ಕೆಳಗಿಳಿಯಲು ನಿರ್ಧಾರ ಮಾಡಿದ್ದೆ. ಈ ಹಂತದಲ್ಲಿ ಕ್ಯಾಪ್ಟನ್ ರೋಹಿತ್ ಶರ್ಮ ಫೋನ್ ಮಾಡಿದ್ದರಿಂದ ನನ್ನ ನಿರ್ಧಾರ ಬದಲಾಯಿಸಿದೆ. ಅಂದು ಕರೆ ಮಾಡಿದ ರೋಹಿತ್ ಶರ್ಮ, ಏಕದಿನ ವಿಶ್ವಕಪ್ ಸೋಲಿನಿಂದ ಬೇಸರವಾಗಿರುವುದು ನಿಜ. ಆದರೆ, ಇನ್ನೊಂದು 6–7 ತಿಂಗಳಲ್ಲಿ ಟಿ20 ವಿಶ್ವಕಪ್ ಇದೆ. ನಮ್ಮಿಬ್ಬರ ಕೊನೆಯ ಅವಕಾಶ ಎನ್ನುವಂತೆ ಒಟ್ಟಾಗಿ ಹೋರಾಟ ಮಾಡೋಣ ಎಂದಿದ್ದರು. ಆ ಬಳಿಕ ನನ್ನ ನಿರ್ಧಾರ ಬದಲಾಯಿಸಿದೆ. ರೋಹಿತ್ ಶರ್ಮಗೆ ಥ್ಯಾಂಕ್ಸ್. ಇದೀಗ ನನ್ನ ಸುದೀರ್ಘ ದಿನಗಳ ಕನಸು ನನಸಾಗಿದೆ ಎಂದು ದ್ರಾವಿಡ್ ಹೇಳಿದರು.

ಅದರೊಂದಿಗೆ ಟಿ20 ವಿಶ್ವಕಪ್‌ನಲ್ಲಿ ಆಡಿದ ಟೀಮ್ ಬಗ್ಗೆ ಮಾತನಾಡಿದ ರಾಹುಲ್ ದ್ರಾವಿಡ್, ಈ ಟೀಮ್‌ನಲ್ಲಿರುವ ಅಚಲವಾದ ಮನೋಭಾವಕ್ಕೆ ವಿಶ್ವಕಪ್ ಟ್ರೋಫಿ ಸಿಗಲೇಬೇಕಿತ್ತು. ಇದಕ್ಕೆ ಅರ್ಹ ತಂಡವಾಗಿತ್ತು ಎಂದು ಹೇಳಿದ್ದಾರೆ. ರೋಹಿತ್ ಶರ್ಮಾ ಫೈನಲ್ ಓವರ್‌ನ ಕ್ಷಣಗಳ ಬಗ್ಗೆ ಮಾತನಾಡಿದರು. ಸೂರ್ಯಕುಮಾರ್ ಯಾದವ್ ಪಡೆದುಕೊಂಡ ಡೇವಿಡ್ ಮಿಲ್ಲರ್ ಅವರ ಬ್ರಿಲಿಯಂಟ್ ಕ್ಯಾಚ್ ತಾವೆಂದೂ ಮರೆಯೋದಿಲ್ಲ ಎಂದರು. ಅದರೊಂದಿಗೆ ಹಾರ್ದಿಕ್ ಪಾಂಡ್ಯ ಅವರ ಫೈನಲ್ ಓವರ್‌ನ ಬಗ್ಗೆ ಮಾತನಾಡಲು ಆರಂಭಿಸಿದಾಗ, ಇಡೀ ವಾಂಖೆಡೆ ಪ್ರೇಕ್ಷಕರು ವಾಂಖೆಡೆ, ವಾಂಖೆಡೆ.. ಎಂದು ಕರತಾಡನ ಮಾಡಲು ಆರಂಭಿಸಿದರು.

ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ನೀಡಿ

ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ವೈದ್ಯರಿಗೆ ಶಾಸಕ ಡಿ.ರವಿಶಂಕರ್ ಸಲಹೆ



ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಜು.4– ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ಉತ್ತಮ ಚಿಕಿತ್ಸೆ ದೊರೆಯಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡು ಉತ್ತಮ ಆರೋಗ್ಯ ಸೇವೆ ನೀಡಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಕಚೇರಿಯಲ್ಲಿ ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಆಸ್ಪತ್ರೆ ಮುಂಭಾಗದ ಆವರಣವನ್ನು ಕಾಂಕ್ರಿಟೀಕರಣ ಮಾಡಲು ಮತ್ತು ಇತರ ಅಗತ್ಯ ಕಾಮಗಾರಿಗಾಗಿ ಸರ್ಕಾರದಿಂದ 1 ಕೋಟಿ ಅನುದಾನ ಬಿಡುಗಡೆ ಮಾಡಿಸಲಾಗಿದೆ ಎಂದರು.

ರಕ್ಷಾ ಸಮಿತಿ ಸದಸ್ಯರು ಆಗ್ಗಿಂದ್ದಾಗೆ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರ ಜತೆ ನಿರಂತರ ಸಂಪರ್ಕ ಇಟ್ಟುಕೊಂಡು ಇಲ್ಲಿನ ಸಮಸ್ಯೆಗಳನ್ನು ಆಲಿಸಬೇಕು ಮತ್ತು ಆಸ್ಪತ್ರೆಗೆ ಆಗಬೇಕಾಗಿರುವ ಕೆಲಸಗಳ ಬಗ್ಗೆ ನನಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ವ್ಯಾಪಕವಾಗಿ ಹರಡುತ್ತಿರುವ ಡೆಂಗ್ಯೂ ಜ್ವರ ತಡೆಗಟ್ಟಲು ಸಾಧ್ಯವಿರುವ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಈ ವಿಚಾರದಲ್ಲಿ ವೈದ್ಯರು ನಿರ್ಲಕ್ಷ್ಯ ಮಾಡಬಾರದೆಂದು ತಾಕೀತು ಮಾಡಿದ ಶಾಸಕರು ಆಸ್ಪತ್ರೆಗೆ ಬರುವ ರೋಗಿಗಳ ಸಹಾಯಕರು ಮತ್ತು ಸಂಬಂಧಿಕರಿಗೆ ವಿಶ್ರಾಂತಿ ಕೊಠಡಿ ನಿರ್ಮಾಣ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು ಎಂದು ಆಡಳಿತ ವೈದ್ಯಾಧಿಕಾರಿಗೆ ಸೂಚಿಸಿದರು.

ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಸಾರ್ವಜನಿಕರಿಂದ ನನಗೆ ಯಾವುದೇ ದೂರು ಬಾರದಂತೆ ಆಡಳಿತಾಧಿಕಾರಿಗಳು ಮತ್ತು ವೈದ್ಯರು ಕೆಲಸ ನಿರ್ವಹಿಸಬೇಕು. ಜನರಿಗೆ ಅನುಕೂಲ ಕಲ್ಪಿಸಲು ನಾನು ಸರ್ಕಾರದಿಂದ ಸಾಕಷ್ಟು ಅನುದಾನ ತರುತ್ತೇನೆ. ನೀವು ಅದರ ಸದ್ಬಳಕೆ ಮಾಡಿಕೊಂಡು ಜನತೆಗೆ ಉತ್ತಮ ಸೇವೆ ನೀಡಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಬಿ.ಜೆ. ನವೀನ್ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ. ನಟರಾಜು, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಎಂ.ಲೋಕೇಶ್, ಕೆಂಚಿಮಂಜು, ಹೆಚ್.ಹೆಚ್.ನಾಗೇಂದ್ರ, ಎಸ್.ಸಾಗರ್, ನಾಗರತ್ನಮ್ಮ ಸೇರಿದಂತೆ ಆಸ್ಪತ್ರೆ ವೈದ್ಯರು ಹಾಜರಿದ್ದರು.

ವ್ಯಕ್ತಿ ಕೊಲೆ ಪ್ರಕರಣ: ಓರ್ವ ಆರೋಪಿ ಬಂಧನ

ಮತ್ತೋರ್ವನ ಬಂಧನಕ್ಕೆ ಮುಂದುವರೆದ ಕಾರ್ಯಾಚರಣೆ



ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಪೋಲೀಸರನ್ನು ಕಾಣಬಹುದು.

ನಂಜನಗೂಡು, ಜು.4– ನಗರದ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಬಳಿ ಮಲಗಿದ್ದ ವ್ಯಕ್ತಿಯೋರ್ವನನ್ನು ಕೊಲೆ ಮಾಡಿ ಹಣ ದೋಚಿ ಪರಾರಿಯಾಗಿದ್ದ ಆರೋಪಿಗಳಿಬ್ಬರ ಪೈಕಿ ಓರ್ವನನ್ನು ಬಂಧಿಸುವಲ್ಲಿ ಪಟ್ಟಣ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ನಂಜನಗೂಡು ನಗರದ ಶ್ರೀರಾಂಪುರ ಬಡಾವಣೆ ನಿವಾಸಿ ಶಿವಕುಮಾರ್ ಅಲಿಯಾಸ್ ಅಪ್ಪಿ ಅಲಿಯಾಸ್ ಕರಿಚಿರತೆ ಬಂಧಿತ ಆರೋಪಿ. ಪ್ರಕರಣದ ಮತ್ತೋರ್ವ ಆರೋಪಿ ಕೂಡನಹಳ್ಳಿ ಗ್ರಾಮದ ರವಿ ಪತ್ತೆಗಾಗಿ ಪೊಲೀಸರು ಕ್ರಮಕ್ಕೆ ಮುಂದಾಗಿದ್ದಾರೆ.

ಪ್ರಕರಣ ಸಂಬಂಧ ತನಿಖೆ ಕೈಗೊಂಡಿದ್ದ ಪೊಲೀಸರು, ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಬಳಿ ಬುಧವಾರ ಸಂಜೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಆರೋಪಿ ಶಿವಕುಮಾರ್‌ನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ, ಆತ ಹಾಗೂ ಕೂಡನಹಳ್ಳಿ ರವಿ ಇಬ್ಬರೂ ಜೂ.28ರ ಮಧ್ಯಾಹ್ನ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಸ್ನಾನಘಟ್ಟದ ಬಳಿ ಒಂಟಿಯಾಗಿರುವವರನ್ನು ಗುರ್ತಿಸಿ ಹಣ ಹಾಗೂ ಚಿನ್ನ ದೋಚಿ ಪರಾರಿಯಾಗಲು ಹೊಂಚು ಹಾಕುತ್ತಿದ್ದ ವೇಳೆ ಸಮೀಪದ ಹದಿನಾರು ಕಾಲು ಮಂಟಪದ ಬಳಿ ವ್ಯಕ್ತಿಯೋರ್ವ ಬೈಕ್ ನಿಲ್ಲಿಸಿಕೊಂಡು ಅಲ್ಲೇ ಕಲ್ಲಿನ ಮೇಲೆ ಮಲಗಿರುವುದನ್ನು ಗಮನಿಸಿದ್ದಾರೆ. ಬಳಿಕ ಮಲಗಿದ್ದ ವ್ಯಕ್ತಿಯ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿ ಆತನ ಜೇಬಿನಲ್ಲಿದ್ದ 50 ಸಾವಿರ ಹಣ ಕಸಿದು ಪರಾರಿಯಾಗಿರುವುದು ಬೆಳಕಿಗೆ ಬಂದಿದೆ. ಇದೀಗ ಕೊಲೆಯಲ್ಲಿ ಭಾಗಿಯಾಗಿದ್ದ ಓರ್ವ ಆರೋಪಿ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ತಲೆ ಮರೆಸಿಕೊಂಡಿರುವ ಮತ್ತೋರ್ವ ಆರೋಪಿ ಪತ್ತೆಗೆ ಮುಂದಾಗಿದ್ದಾರೆ.

ನಂಜನಗೂಡು ಪೊಲೀಸ್ ಉಪ ವಿಭಾಗದ ಡಿವೈಎಸ್ಪಿ ರಘು ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆಯಲ್ಲಿ ಪಟ್ಟಣ ಪೊಲೀಸ್ ಇನ್ಸ್‌ಪೆಕ್ಟರ್ ಬಸವರಾಜು, ಪ್ರಕಾಶ್, ಸಿದ್ದಪ್ಪ, ಅಪರಾಧ ವಿಭಾಗದ ಪೊಲೀಸ್ ಸಿಬ್ಬಂದಿಗಳಾದ ಶಿವಕುಮಾರ್, ತಿಮ್ಮಯ್ಯ, ಶರಣಪ್ಪ ಪ್ರಕಾಶ್, ಸುಮಂತ್, ಬಸವರಾಜು, ನೇತ್ರಾವತಿ ಹಾಗೂ ನಾಗರಾಜು ಭಾಗಿಯಾಗಿದ್ದರು.

ಬೀಚನಹಳ್ಳಿಯಲ್ಲಿ ಲಯನ್ಸ್ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮ

ಲಯನ್ಸ್ ಜಿಲ್ಲೆಯ ಮಾದರಿ ಸಂಸ್ಥೆ: ಎಸ್.ಮತಿದೇವಕುಮಾರ್

ಹೆಚ್.ಡಿ.ಕೋಟೆ, ಜು.4– ಕಳೆದ 42 ವರ್ಷಗಳಿಂದ ತಾಲೂಕು ಲಯನ್ಸ್ ಸಂಸ್ಥೆ ಸೇವೆ ಸಲ್ಲಿಸುತ್ತಾ ಬಂದಿದ್ದು, ಜಿಲ್ಲೆಗೆ ಮಾದರಿ ಸಂಸ್ಥೆಯಾಗಿ ಹೊರಹೊಮ್ಮಿರುವುದಲ್ಲದೇ ಹಲವು ಬಾರಿ ಅನೇಕ ಬಹುಮಾನ ಪಡೆದಿದೆ ಎಂದು ಲಯನ್ಸ್‌ನ ಎರಡನೇ ರಾಜ್ಯಪಾಲ ಎಸ್.ಮತಿದೇವಕುಮಾರ್ ತಿಳಿಸಿದರು.

ತಾಲೂಕಿನ ಬೀಚನಹಳ್ಳಿಯ ಪ್ರವಾಸಿ ಮಂದಿರದ ಆವರಣದಲ್ಲಿ ಹೆಚ್.ಡಿ.ಕೋಟೆ ಲಯನ್ಸ್ ಸಂಸ್ಥೆ ವತಿಯಿಂದ ಲಯನ್ ಭಾಸ್ಕರ್ ಮತ್ತು ತಂಡದವರಿಗೆ ಪ್ರತಿಜ್ಞಾ ವಿಧಿ ಬೋಧನೆ ಮಾಡಿ ಮಾತನಾಡಿದರು.

ಲಯನ್ ಸಮಾಲೋಚಕ ಹಾಗೂ ತರಬೇತಿದಾರ ಡಾ.ಅಚ್ಯುತರಾವ್ ಮಾತನಾಡಿ, ಖಾಸಗಿ ಕಂಪನಿಗಳು ಉದ್ಯೋಗ ನೀಡಲು ಶಿಕ್ಷಣ ಸಂಸ್ಥೆಯಲ್ಲಿ ನೀಡುವ ಅಂಕಪಟ್ಟಿ, ಪದವಿಗಳನ್ನು ಪರಿಗಣಿಸುತ್ತಿಲ್ಲ. ಅವರೇ ಉದ್ಯೋಗ ನೀಡಲು ಹಲವು ಪರೀಕ್ಷೆಗಳನ್ನು ಮಾಡುತ್ತಿದ್ದು, ಸಾಮಾನ್ಯ ಜ್ಞಾನದತ್ತ ಎಲ್ಲರೂ ಚಿತ್ತ ಹರಿಸಬೇಕು. ಆ ನಿಟ್ಟಿನಲ್ಲಿ ಲಯನ್ಸ್ ಸಂಸ್ಥೆ ಗಮನ ಹರಿಸಿ ಹಳ್ಳಿಗಳ ಕಡೆ ಇರುವ ಶಾಲೆಗಳಲ್ಲಿ ಮಕ್ಕಳನ್ನು ದತ್ತು ಪಡೆದು ಜ್ಞಾನ ನೀಡುವುದರತ್ತ ದಾಪುಗಾಲಿಡುತ್ತಿದೆ ಎಂದರು.

ಅಧ್ಯಕ್ಷರಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದ ಬೀಚನಹಳ್ಳಿ ಭಾಸ್ಕರ್ ಮಾತನಾಡಿ, ನಾನು ಜನತೆಯೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ಹಲವು ಸಮಾಜಮುಖಿ ಕಾರ್ಯ ಕೈಗೊಂಡಿದ್ದೇನೆ. ಇನ್ನೂ ಹೆಚ್ಚಿನ ರೀತಿಯಲ್ಲಿ ನನ್ನ ಸೇವೆ ಲಯನ್ಸ್ ಸಂಸ್ಥೆ ಮೂಲಕ ನಡೆಯಲಿದೆ ಎಂದರು.



ಬೀಚನಹಳ್ಳಿಯ ಪ್ರವಾಸಿ ಮಂದಿರದಲ್ಲಿ ಹೆಚ್.ಡಿ.ಕೋಟೆ ಲಯನ್ಸ್ ಸಂಸ್ಥೆ ನೂತನ ಅಧ್ಯಕ್ಷ ಭಾಸ್ಕರ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ನೂತನ ಅಧ್ಯಕ್ಷರಾಗಿ ಬೀಚನಹಳ್ಳಿ ಭಾಸ್ಕರ್, ಮಾರುಕಟ್ಟೆ ಅಭಿವೃದ್ಧಿ ಅಧ್ಯಕ್ಷರಾಗಿ ವೀರಪ್ಪ ಆರ್.ಪಿ., ಸೇವಾ ಕಾರ್ಯಗಳ ಸಮಿತಿ ಅಧ್ಯಕ್ಷರಾಗಿ ಆರ್. ನಟರಾಜು, ಸದಸ್ಯತ್ವ ಅಭಿವೃದ್ಧಿ ಅಧ್ಯಕ್ಷ ಸುರೇಂದ್ರ ಡಿ.ಗೌಡ, ಖಜಾಂಚಿಯಾಗಿ ಸಿ.ಬಸವರಾಜು, ಎಲ್‌ಸಿಎ ಕೋ ಆರ್ಡಿನೇಟರ್ ಆಗಿ ನಾಗಣ್ಣ, ಕ್ಲಬ್ ಆಡಳಿತಾಧಿಕಾರಿ ನಾರಾಯಣ್‌ಗೌಡ, ಕಾರ್ಯದರ್ಶಿಯಾಗಿ ಅಶೋಕ್, ಉಪಾಧ್ಯಕ್ಷರಾಗಿ ಮಟಕೆರೆ ರಾಜೇಶ್, ಅಶೋಕ್, ನಿರ್ದೇಶಕ ರಾಗಿ ಚಲುವರಾಜು, ಪ್ರಕಾಶ್‌ಗೌಡ, ನಾಗನಾಯಕ, ಟಿ.ವೀರಪ್ಪ, ವೈ.ಟಿ.ಮಹೇಶ್ ಅವರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ 7ರ ಅಧ್ಯಕ್ಷ ಉಮೇಶ್, ವಲಯ 1ರ ಅಧ್ಯಕ್ಷ ಎಚ್.ವಿ.ರವಿರತ್ನಾಕರ, ನಿಕಟಪೂರ್ವ ಅಧ್ಯಕ್ಷ ಈರೇಗೌಡ, ನರಸೀಪುರ ರವಿ, ಸುರೇಂದ್ರ ಡಿ.ಗೌಡ, ಎಲ್ಐಸಿ ಬಸವರಾಜು, ಎಂ.ಸಿ.ದೊಡ್ಡನಾಯಕ, ಡಿ.ಆರ್.ಮಹೇಶ್, ವೈ.ಟಿ.ಮಹೇಶ್, ಬ್ಯಾಂಕ್ ವೀರಪ್ಪ, ಸಿ.ಎನ್.ನಾಗಣ್ಣ, ಯೋಗನರಸಿಂಹೇಗೌಡ, ಮಟಕೆರೆ ರಾಜೇಶ್, ನಾರಾಯಣಗೌಡ, ಬಿ.ಪಿ. ಭಾಸ್ಕರ್, ನಾಗನಾಯಕ, ದೇವದಾಸ್, ಚಲುವೇಗೌಡ, ಮೂರ್ತಿ, ಕಬಿನಿ ಹೇಮಂತ್, ಮೆಸ್ ಮಂಜು, ಸರಗೂರು ನಾಗರಾಜು, ರಂಗಸ್ವಾಮಿ, ಬಂಕ್ ಚಲುವ, ನಟರಾಜು, ಅಶೋಕ್, ಗೋವಿಂದರಾಜು, ಪ್ರಕಾಶ್, ಬಸವರಾಜಪ್ಪ, ಸೋಮಣ್ಣ, ನಾಗಣ್ಣ, ಸರಸ್ವತಿ ಭಾಸ್ಕರ್, ರೋಜ, ಮಂಜುಳಾ, ಅಂಕನಾಯಕ, ಸಿದ್ದನಾಯಕ, ರವಿ, ಆಕಾಶ್ ಇದ್ದರು.

ಕೃಷ್ಣಶೆಟ್ಟಿ ನಿಧನ



ಸರಗೂರು, ಜು.4– ಪಟ್ಟಣದ ನಿವಾಸಿ, ನಿವೃತ್ತ ಕೆಇಬಿ ನೌಕರ ಕೃಷ್ಣಶೆಟ್ಟಿ(75) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ನಡೆಯಿತು.

ಹರೀಶ್



ಕೆ.ಆರ್.ನಗರ, ಜು.4– ಪಟ್ಟಣದ ಕಂಠೇನಹಳ್ಳಿ ಬಡಾವಣೆ ನಿವಾಸಿ ಹರೀಶ್ (43) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ತಂದೆ, ತಾಯಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸಂಜೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಜು.13ರ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ

ಅಧಿಕ ಪ್ರಕರಣಗಳ ಇತ್ಯರ್ಥಕ್ಕೆ ವಕೀಲರ ಸಹಕಾರ ಅಗತ್ಯ

● ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗಡೆ ಸಲಹೆ ● ಲಾಗೈಡ್‌ನಿಂದ ಹೊಸ ಕಾನೂನು ಮಾಹಿತಿ ಪುಸ್ತಕಗಳ ಉಚಿತ ವಿತರಣೆ



ಮೈಸೂರು ವಕೀಲರ ಸಂಘದ ಸಭಾಂಗಣದಲ್ಲಿ ಗುರುವಾರ ಮೂರು ಹೊಸ ಕ್ರಿಮಿನಲ್ ಕಾನೂನುಗಳ ಮಾಹಿತಿವುಳ್ಳ ಪುಸ್ತಕಗಳ ವಿತರಣಾ ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಉದ್ಘಾಟಿಸಿದರು

ಮೈಸೂರು,ಜು.4(ಪಿಎಂ)– ರಾಷ್ಟ್ರೀಯ ಲೋಕ ಅದಾಲತ್ ಇದೇ ಜು.13ರಂದು ನಡೆಯಲಿದ್ದು, ಈ ಬಾರಿಯ ಲೋಕ ಅದಾಲತ್‌ನಲ್ಲಿ ಆದಷ್ಟು ಹೆಚ್ಚಿನ ಸಂಖ್ಯೆಯ ಪ್ರಕರಣಗಳು ಇತ್ಯರ್ಥಗೊಳ್ಳಲು ವಕೀಲರ ಸಹಕಾರ ಅಗತ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗಡೆ ಹೇಳಿದರು.

ಮೈಸೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಮೈಸೂರು ವಕೀಲರ ಸಂಘದ ಸಭಾಂಗಣದಲ್ಲಿ ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಬಳಗದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಮೂರು ಹೊಸ ಕ್ರಿಮಿನಲ್ ಕಾನೂನುಗಳ ಕುರಿತ ಪುಸ್ತಕಗಳನ್ನು, (ಭಾರತೀಯ ನ್ಯಾಯ ಸಂಹಿತೆ-2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತ–2023, ಭಾರತೀಯ ಸಾಕ್ಷ್ಯ ಅಧಿನಿಯಮ–2023 ಪುಸ್ತಕಗಳು) ವಕೀಲರಿಗೆ ಉಚಿತವಾಗಿ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಲೋಕ ಅದಾಲತ್ ರ್‍ಯಾಂಕಿಂಗ್‌ನಲ್ಲಿ ಮೈಸೂರು ಜಿಲ್ಲೆಯು ಬೆಂಗಳೂರನ್ನು ಹಿಂದಿಕ್ಕಬೇಕೆಂಬುದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಆಶಯವಾಗಿದೆ. ಇದಕ್ಕೆ ವಕೀಲ ಸಮುದಾಯ ಎಲ್ಲಾ ಸಹಕಾರ ನೀಡಬೇಕೆಂದು ಇಡೀ ಜಿಲ್ಲೆಯ ಎಲ್ಲಾ ನ್ಯಾಯಾಧೀಶರ ಪರವಾಗಿ ಮನವಿ ಮಾಡುತ್ತೇನೆ. ಆ ಮೂಲಕ ಹೆಚ್ಚಿನ ಪ್ರಕರಣಗಳನ್ನು ವಿಲೇವಾರಿ ಮಾಡಬೇಕಿದೆ ಎಂದರು.

ಹೊಸ ಮೂರು ಕ್ರಿಮಿನಲ್ ಕಾನೂನುಗಳು ಜಾರಿಗೊಂಡಿರುವ ಈ ಸಂದರ್ಭದಲ್ಲಿ ಹಳೆ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಬೇಕಿದೆ. ಲಾಗೈಡ್ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರು ಭರವಸೆಯಂತೆ ಹೊಸ ಕಾನೂನುಗಳ ಪುಸ್ತಕಗಳನ್ನು ವಕೀಲರಿಗೆ ನೀಡುತ್ತಿದ್ದಾರೆ. ಈ ಪುಸ್ತಕಗಳು ವಕೀಲರಿಗೆ ಹೆಚ್ಚು ಉಪಯೋಗ ಆಗಲಿದೆ ಎಂದು ತಿಳಿಸಿದರು.

ಮೈಸೂರು ನ್ಯಾಯಾಲಯದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಡಿ.ಪುಟ್ಟಸ್ವಾಮಿ ಮಾತನಾಡಿ, ವಕೀಲರ ಸಂಘದಲ್ಲಿ ಹೊಸ ಕಾನೂನು ಸಂಬಂಧ ತಿಂಗಳ ಕಾಲ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ. ಹೊಸ ಕಾನೂನುಗಳು ಈಗಾಗಲೇ ಜಾರಿಗೊಂಡಿವೆ. ಇದರ ಬಗ್ಗೆ ರಾಷ್ಟ್ರದಲ್ಲಿ ಒಂದು ಸಂಚಲನ ಮೂಡಿದೆ. ಈ ನೂತನ ಕಾನೂನುಗಳಿಗೆ ನಾವು ಹೊಂದಿಕೊಳ್ಳಬೇಕಿದೆ. ವಕೀಲರ ಜೊತೆಗೆ ನ್ಯಾಯಾಧೀಶರಾದ ನಾವು ಹೊಸ ಕಾನೂನುಗಳನ್ನು ಅರಿತುಕೊಳ್ಳುವ ಪ್ರಯತ್ನದಲ್ಲಿದ್ದೇವೆ. ವಕೀಲರು ಹಾಗೂ ನ್ಯಾಯಾಧೀಶರು ಜೊತೆಯಾಗಿ ಈ ನೂತನ ಕಾನೂನುಗಳ ಅಧ್ಯಯನಕ್ಕೆ ಕಾರ್ಯಪ್ರವೃತ್ತರಾಗಬೇಕಿದೆ. ಜು.13ರಂದು ಎರಡನೇ ಶನಿವಾರ ಆದಾಗ್ಯೂ ಲೋಕ ಅದಾಲತ್‌ನಲ್ಲಿ ನಾವೆಲ್ಲರೂ ಭಾಗಿಯಾಗುವ ಮೂಲಕ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕಿದೆ ಎಂದು ಹೇಳಿದರು.

ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಮಾತನಾಡಿ, ನಾನು ಜೂ.13ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಆಶ್ವಾಸನೆ ನೀಡಿದಂತೆ ಇಂದು ಪುಸ್ತಕಗಳನ್ನು ವಿತರಣೆ ಮಾಡಲಾಗುತ್ತಿದೆ. ಅಂದು 100 ಪುಸ್ತಕಗಳನ್ನು ನೀಡುವುದಾಗಿ ಪ್ರಕಟಿಸಿದ್ದೆ. ಆದರೆ ಹೆಚ್ಚುವರಿಯಾಗಿ 300 ಪುಸ್ತಕಗಳನ್ನು ಕೊಡಲಾಗುತ್ತಿದೆ ಎಂದು ತಿಳಿಸಿದರು.

ಹಿರಿಯ ವಕೀಲ ಹರೀಶ್‌ಕುಮಾರ್ ಹೆಗ್ಡೆ ಮಾತನಾಡಿ, ಈಗ ಕಾನೂನುಗಳ ಹೊಸ ಶಕೆ ಆರಂಭವಾಗಿದೆ. ಐಪಿಸಿ, ಸಿಆರ್‌ಪಿಸಿ ಹಾಗೂ ಎವಿಡೆನ್ಸ್ ಆಕ್ಟ್ ನಮಗೆ ಪಠಣ ಆಗಿದೆ. ಅಧ್ಯಯನ ಮಾಡಿ ಇಷ್ಟು ವರ್ಷಗಳ ಕಾಲ ಸೆಕ್ಷನ್‌ಗಳನ್ನು ಅರ್ಥೈಸಿಕೊಂಡಿದ್ದು, ಜೊತೆಗೆ ಸುಪ್ರಿಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಕೊಟ್ಟಿರುವ ತೀರ್ಪುಗಳನ್ನು ಇಟ್ಟುಕೊಂಡು ಕೇಸುಗಳನ್ನು ನಡೆಸಿಕೊಂಡು ಬಂದಿದ್ದೇವೆ. ಸಾಮಾನ್ಯ ಮನುಷ್ಯನಿಗೂ ಐಪಿಸಿ ಮತ್ತು ಸಿಆರ್‌ಪಿಸಿ ಬಗ್ಗೆ ಜ್ಞಾನ ಇದೆ. ಏಕೆಂದರೆ ಇವು 160 ವರ್ಷಗಳಿಗೂ ಹಳೆಯ ಕಾನೂನುಗಳಾಗಿವೆ. ಈಗ ಐಪಿಸಿಯಲ್ಲಿದ್ದ 511 ಸೆಕ್ಷನ್‌ಗಳನ್ನು 358 ಸೆಕ್ಷನ್‌ಗಳಿಗೆ ಇಳಿಸಲಾಗಿದೆ ಎಂದು ಹೇಳಿದರು.

ನೆನ್ನೆ ಯೂಟ್ಯೂಬ್‌ನಲ್ಲಿ ನೋಡಿದ್ದು, ಅದರಲ್ಲಿ ದೆಹಲಿ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರೊಬ್ಬರು ಹೊಸ ಕಾನೂನಿನಲ್ಲಿ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಆ ಪ್ರಕಾರ 15 ದಿನಗಳಿಗೆ ಇದ್ದ ಪೊಲೀಸ್ ಕಸ್ಟಡಿಯನ್ನು 90 ದಿನಗಳವರೆಗೆ ಹೆಚ್ಚಿಸಲಾಗಿದೆ. ಹೊಸ ಕಾನೂನುಗಳಿಗೆ ಹೊಂದಿಕೊಳ್ಳಲು ಸ್ವಲ್ಪ ಸಮಯವೂ ಬೇಕಾಗುತ್ತದೆ. ಇದಕ್ಕಾಗಿ ವಕೀಲರು ಕಠಿಣ ಪರಿಶ್ರಮ ಹಾಕಬೇಕಾಗುತ್ತದೆ ಎಂದರು.

ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಮಾತನಾಡಿ, ಜು.13ರಂದು ನಡೆಯುವ ಲೋಕ ಅದಾಲತ್‌ಗೆ ವಕೀಲ ಸಮುದಾಯ ಅಗತ್ಯ ಸಹಕಾರ ನೀಡಲಿದೆ ಎಂದು ಪ್ರಕಟಿಸಿದರು. ಮೈಸೂರು ನ್ಯಾಯಾಲಯದ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಪಿ.ಜೆ.ಸೋಮಶೇಖರ್, ನ್ಯಾಯಾಧೀಶರಾದ ಸಾವಿತ್ರಿ ಶಿವಪುತ್ರ ಕುಜ್ಜಿ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎ.ಜಿ.ಸುಧೀರ್, ಖಜಾಂಚಿ ಹೆಚ್.ಬಿ.ಭರತ್, ಕಾರ್ಯಕಾರಿ ಸಮಿತಿ ಸದಸ್ಯರಾದ ಜೆ.ಲೋಕೇಶ್, ಪ್ರದೀಪ್ ಬಿಡ್ಡನ್ ಮತ್ತಿತರರು ಹಾಜರಿದ್ದರು.

ಲೋಕ್ ಅದಾಲತ್‌ನಲ್ಲಿ ರಾಜೀ ಮಾಡಲರ್ಹ ಪ್ರಕರಣಗಳು

- 138 ಎನ್‌ಐ ಆಕ್ಟ್ (ಚೆಕ್ ಬೌನ್ಸ್)
- ಮೋಟಾರು ವಾಹನ ಅಪಘಾತ ಪ್ರಕರಣಗಳು (ಎಂವಿಸಿ ಮತ್ತು ಎಂವಿಸಿ–ಇಎಕ್ಸ್)
- ಸಾಲ ವಸೂಲಾತಿ ದಾವೆಗಳು ಮತ್ತು ವ್ಯಾಜ್ಯ ಪೂರ್ವ ದಾವೆಗಳು (ಪಿಎಲ್‌ಸಿ)
- ಕೌಟುಂಬಿಕ (ವಿಚ್ಛೇದನ ಹೊರತುಪಡಿಸಿ) ಹಾಗೂ ಜೀವನಾಂಶ ಪ್ರಕರಣಗಳು
- ರಾಜೀಯಾಗುವಂತಹ ಕ್ರಿಮಿನಲ್ ಪ್ರಕರಣಗಳು
- ರಾಜಿಯಾಗುವಂತಹ ಸಿವಿಲ್ ಮತ್ತು ಎಲ್ಲಾ ರೀತಿಯ ಪ್ರಕರಣಗಳು

ಪ್ರಸ್ತುತ 1 ಲಕ್ಷದ 15 ಸಾವಿರ ಪ್ರಕರಣಗಳು ಲೋಕ ಅದಾಲತ್‌ನಲ್ಲಿ ಮಂಡನೆಗೆ ಅರ್ಹ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗಡೆ ಮಾಹಿತಿ

ಮೈಸೂರು,ಜು.4(ಪಿಎಂ)– ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಪ್ರಸ್ತುತ 1 ಲಕ್ಷದ 15 ಸಾವಿರ ಪ್ರಕರಣಗಳು ಲೋಕ ಅದಾಲತ್‌ನಲ್ಲಿ ಮಂಡನೆಗೆ ಅರ್ಹವಾಗಿವೆ ಆದರೆ ಕೆಲ ಕಾರಣಗಳಿಂದಾಗಿ ಸುಮಾರು 30 ಸಾವಿರ ಪ್ರಕರಣಗಳನ್ನು ಈ ಬಾರಿಯ ಅದಾಲತ್‌ನಲ್ಲಿ ತೆಗೆದುಕೊಳ್ಳಲು ಸಾಧ್ಯವಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗಡೆ ಹೇಳಿದರು.

ಮೈಸೂರು ನ್ಯಾಯಾಲಯದ ಆವರಣದಲ್ಲಿರುವ ಮೈಸೂರು ವಕೀಲರ ಸಂಘದ ಸಭಾಂಗಣದಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 1 ಲಕ್ಷದ 15 ಸಾವಿರ ಪ್ರಕರಣಗಳು ರಾಜಿಗೆ ಅರ್ಹವಾಗಿವೆ. ಆದರೆ ಕೆಲವೊಂದರಲ್ಲಿ ನೋಟಿಸ್ ಜಾರಿಯಾಗಿರುವುದಿಲ್ಲ. ಇನ್ನು ಆರಂಭದ ಹಂತದಲ್ಲಿ ಇರುವುದೂ ಇರುತ್ತವೆ. ಅಂತಹವುಗಳನ್ನು ಗಮನಿಸಿದಾಗ, 30 ಸಾವಿರದಷ್ಟು ಪ್ರಕರಣಗಳನ್ನು ಅದಾಲತ್‌ನಲ್ಲಿ ತೆಗೆದುಕೊಳ್ಳಲು ಅವಕಾಶವಿದೆ. ಅಲ್ಲದೆ, ಕೋರ್ಟ್‌ನಲ್ಲಿ ದಾಖಲಾಗದ ಪ್ರಕರಣಗಳನ್ನೂ ತೆಗೆದುಕೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಲೋಕ ಅದಾಲತ್‌ನಲ್ಲಿ ಸಿವಿಲ್ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ ಶುಲ್ಕವನ್ನು ಕಕ್ಷಿದಾರರು ವಾಪಸ್ ಪಡೆಯಬಹುದು. ಲೋಕ ಅದಾಲತ್‌ನಲ್ಲಿ ಇತ್ಯರ್ಥಗೊಂಡ ಪ್ರಕರಣ ಸಂಬಂಧ ಮೇಲ್ಮನವಿ ಸಲ್ಲಿಸಲು ಅವಕಾಶವಿಲ್ಲ. ಆದರೆ ವಾದಿ–ಪ್ರತಿವಾದಿ ಇಬ್ಬರು ಗೆದ್ದಿದ್ದೇವೆ ಎಂಬ ಭಾವನೆ ಮೂಡಲಿದೆ ಎಂದರು.

ನ್ಯಾಯ ವಿತರಣೆಯಲ್ಲಿ ವಕೀಲರ ಪಾತ್ರ ಮಹತ್ವದ್ದಾಗಿದೆ. ಅವರಿಗೆ ತಮ್ಮ ಕಕ್ಷಿದಾರರ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಹೀಗಾಗಿ ಕಕ್ಷಿದಾರರಿಗೆ ಸೂಕ್ತ ಮಾರ್ಗದರ್ಶನ ನೀಡಿ ಲೋಕ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣ ಬಗೆಹರಿಸುವಲ್ಲಿ ವಕೀಲರ ಪಾತ್ರ ದೊಡ್ಡದಿದೆ. ಸಾರ್ವಜನಿಕರಿಗೆ ಇದೊಂದು ವಿಶೇಷ ಅವಕಾಶ. ಕಕ್ಷಿದಾರರು ತಮ್ಮ ವಕೀಲರೊಂದಿಗೆ ರಾಜೀ ಸಂಬಂಧ ಚರ್ಚಿಸಿ ಲೋಕ ಅದಾಲತ್‌ನಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು ಎಂದು ತಿಳಿಸಿದರು.

ನಕಲಿ ಷೇರು ಮಾರುಕಟ್ಟೆಯಲ್ಲಿ 66 ಲಕ್ಷ ಕಳೆದುಕೊಂಡ ನಿವೃತ್ತ ಅಧಿಕಾರಿ



ಮೈಸೂರು, ಜು.4(ಎಸ್‌ಬಿಡಿ)– ನಕಲಿ ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸಿ ನಿವೃತ್ತ ಅಧಿಕಾರಿ ಬರೋಬ್ಬರಿ 66 ಲಕ್ಷ ರೂ. ಕಳೆದುಕೊಂಡಿದ್ದಾರೆ. ಮೈಸೂರಿನ ವಿಜಯನಗರದ 62 ವರ್ಷದ ನಿವೃತ್ತ ಅಧಿಕಾರಿ ಮೋಸ ಹೋಗಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಎರಡು ತಿಂಗಳ ಹಿಂದೆ ಫೇಸ್‌ಬುಕ್‌ನಲ್ಲಿ ಟ್ರೇಡಿಂಗ್ ಕುರಿತ ಜಾಹೀರಾತು ಕಾಣಿಸಿದೆ. ಆ ಜಾಹೀರಾತಿನಲ್ಲಿದ್ದ ಲಿಂಕ್ ಮೇಲೆ ಕ್ಲಿಕ್ ಮಾಡಿದ ತಕ್ಷಣ C-88 MONEY SUKH STUDY GROUP ವಾಟ್ಸಾಪ್ ಗ್ರೂಪ್‌ಗೆ ಅವರ ಮೊಬೈಲ್ ನಂಬರ್ ಸೇರ್ಪಡೆಯಾಗಿದೆ. ಆ ಗ್ರೂಪ್‌ನಲ್ಲಿ ಷೇರು ಮಾರುಕಟ್ಟೆ ಬಗ್ಗೆ ಮಾಹಿತಿ ನೀಡಲಾಗುತ್ತಿತ್ತು. ಅಲ್ಲದೆ ಆ ಗ್ರೂಪ್‌ನಲ್ಲಿ ಸದಸ್ಯರ ಸೋಗಿನಲ್ಲಿ ವಂಚಕರು ತಾವು ಹಣ ಹೂಡಿಕೆ ಮಾಡಿ, ಲಾಭ ಪಡೆದಿರುವುದಾಗಿ ಸ್ಕ್ರೀನ್ ಶಾಟ್ ಹಂಚಿಕೊಳ್ಳುತ್ತಿದ್ದರು.

ಇದನ್ನು ನಂಬಿದ ಈ ವ್ಯಕ್ತಿ, ಗ್ರೂಪ್ ಅಡ್ಮಿನ್ ಸಂಪರ್ಕಿಸಿದಾಗ ಒಂದು ಲಿಂಕ್ ಕಳುಹಿಸಿ, ಟ್ರೇಡ್ ಖಾತೆ ತೆರೆಯಲು ತಿಳಿಸಿದ್ದಾನೆ. ಅದರಂತೆ ಆ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ MONEY SUKH SECURITIES' ಅಪ್ಲಿಕೇಶನ್ ಇನ್ಸ್ಟಾಲ್ ಆಗಿದೆ. ಆ ಮೂಲಕ ಟ್ರೇಡಿಂಗ್ ಖಾತೆ ತೆರೆದ ವ್ಯಕ್ತಿ, ಆರಂಭದಲ್ಲಿ 1 ಲಕ್ಷ ರೂ. ಹಣ ಹೂಡಿಕೆ ಮಾಡಿ, ಷೇರುಗಳನ್ನು ಖರೀದಿ ಮಾಡಿದ್ದಾರೆ. ಬಳಿಕ ಗ್ರೂಪ್ ಅಡ್ಮಿನ್ ಸೂಚಿಸಿದಾಗ ಷೇರುಗಳನ್ನು ಮಾರಾಟ ಮಾಡಿದ್ದು, 4991 ರೂ. ಹಣ ಲಾಭ ಬಂದಿದೆ. ಆ ಹಣವನ್ನು ಖುಷಿಯಿಂದ ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಇದರಿಂದ ನಂಬಿಕೆ ಮತ್ತಷ್ಟು ಹೆಚ್ಚಾಗಿ ಹಲವು ಹಂತಗಳಲ್ಲಿ ಒಟ್ಟು 66,25,116 ರೂ. ಹೂಡಿಕೆ ಮಾಡಿದ್ದಾರೆ. ಆ ಹೂಡಿಕೆಗೂ ಲಾಭ ಬಂದಿರುವುದಾಗಿ ಆ್ಯಪ್‌ನಲ್ಲಿ ಪ್ರದರ್ಶನವಾಗುತ್ತದೆ. ಆದರೆ ಆ ಹಣವನ್ನು ವಿತ್‌ಡ್ರಾ ಮಾಡಲು ರಿಕ್ವೆಸ್ಟ್ ಕಳುಹಿಸಿದರೆ ರಿಜೆಕ್ಟ್ ಆಗುತ್ತಿದೆ ಈ ಬಗ್ಗೆ ವಿಚಾರಿಸಿದಾಗ ಮೋಸ ಹೋಗಿರುವುದು ಗೊತ್ತಾಗಿದೆ ಎಂದು ಹಣ ಕಳೆದುಕೊಂಡ ವ್ಯಕ್ತಿ, ದೂರಿನಲ್ಲಿ ತಿಳಿಸಿದ್ದಾರೆ.

ನೀಟ್-ಯುಜಿ, ಯುಜಿಸಿ-ಸಿಇಟಿ, ನೀಟ್-ಪಿಜಿಯಲ್ಲಿ ವ್ಯಾಪಕ ಹಗರಣ

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಎಐಡಿಎಸ್‌ಓ ಪ್ರತಿಭಟನೆ



ಮೈಸೂರು ವಿಶ್ವವಿದ್ಯಾನಿಲಯದ ದೊಡ್ಡ ಗಡಿಯಾರದ ಬಳಿ ಗುರುವಾರ ಎಐಡಿಎಸ್‌ಓ ಕಾರ್ಯಕರ್ತರು ನೀಟ್–ಯುಜಿ, ಯುಜಿಸಿ–ಎನ್‌ಇಟಿ, ಮತ್ತು ನೀಟ್–ಪಿಜಿ ಹಗರಣ ಕುರಿತು ನಿಷ್ಪಕ್ಷಪಾತ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಪ್ರತಿಭಟಿಸಿದರು.

ಮೈಸೂರು,ಜು.4(ಎಂಟಿವೈ)– ನೀಟ್–ಯುಜಿ, ಯುಜಿಸಿ–ಎನ್‌ಇಟಿ ಮತ್ತು ನೀಟ್–ಪಿಜಿ ಹಗರಣ ಕುರಿತು ನಿಷ್ಪಕ್ಷಪಾತ ನ್ಯಾಯಾಂಗ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ (ಎಐಡಿಎಸ್‌ಓ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ದೊಡ್ಡ ಗಡಿಯಾರದ ಮುಂದೆ ಗುರುವಾರ ಪ್ರತಿಭಟನೆ ನಡೆಸಿದ ಎಐಡಿಎಸ್‌ಓ ಕಾರ್ಯಕರ್ತರು ನೀಟ್–ಯುಜಿ, ಯುಜಿಸಿ–ಎನ್‌ಇಟಿ ಮತ್ತು ನೀಟ್–ಪಿಜಿ ಹಗರಣ ಸಾವಿರಾರು ವಿದ್ಯಾರ್ಥಿಗಳ ಜೀವನದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ. ಪ್ರಭಾವಿಗಳು ನಡೆಸಿರುವ ಹಗರಣದಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದ್ರೋಹ ಬಗೆದಂತಾಗಿದೆ. ಈ ಹಿನ್ನೆಲೆಯಲ್ಲಿ ಈ ಹಗರಣ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಎನ್‌ಟಿಎ ಅನ್ನು ರದ್ದು ಮಾಡಬೇಕು. ರಾಜ್ಯ ಮಟ್ಟದಲ್ಲಿಯೇ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ವೇಳೆ ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷ ನಿತಿನ್ ಮಾತನಾಡಿ, ನೀಟ್–2024ರ ಫಲಿತಾಂಶದಲ್ಲಿ, ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆದಿರುವುದರ ಬೆನ್ನಲ್ಲೇ ಇದೀಗ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಕೆಲವು ದಿನಗಳ ಹಿಂದೆ ಯುಜಿಸಿ–ಎನ್‌ಇಟಿ ಪರೀಕ್ಷೆಯನ್ನು ಪರೀಕ್ಷೆ ಮುಗಿದ ಕೇವಲ 24 ಗಂಟೆಯಲ್ಲೇ ರದ್ದುಗೊಳಿಸಲಾಗಿದೆ. ಸಿಎಸ್‌ಐಆರ್ ನೆಟ್ ಮುಂದೂಡಲಾಗಿದೆ. ಈ ಎಲ್ಲಾ ಘಟನೆಗಳು ನೀಟ್–ಯುಜಿ–2024 ಹಗರಣದ ಹಿನ್ನೆಲೆಯಲ್ಲಿ ಸಂಭವಿಸಿದ್ದಾಗಿದೆ. ಇದು ದೇಶದಲ್ಲಿಯೇ ಶಿಕ್ಷಾ ಕ್ಷೇತ್ರದಲ್ಲಿ ನಡೆದ ಅತೀ ದೊಡ್ಡ ಹಗರಣವಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿ ವಹಿಸದೇ ನಿರ್ಲಕ್ಷ್ಯ ತೋರಿಸುತ್ತಿರುವುದು ಖಂಡನೀಯ. ಇದು ಕೇಂದ್ರ ಸರ್ಕಾರ ಮತ್ತು ಎನ್‌ಟಿಎಯ ವಿದ್ಯಾರ್ಥಿ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಇದರ ವಿರುದ್ಧ ದೇಶದ ವಿವಿಧೆಡೆ ಪ್ರತಿಭಟನೆಗಳು ಮುಂದುವರೆದಿವೆ. ವಿದ್ಯಾರ್ಥಿಗಳ ಹೋರಾಟದಿಂದಾಗಿ ಸರ್ಕಾರ ಎನ್‌ಟಿಎಯ ಮಹಾನಿರ್ದೇಶಕರನ್ನು ತೆಗೆದುಹಾಕುವ ಮೂಲಕ ಹಗರಣವನ್ನು ಮರೆಮಾಡಲು ಪ್ರಯತ್ನಿಸುತ್ತಿದೆ. ಆದರೆ ಎನ್‌ಟಿಎ ರದ್ದುಗೊಳಿಸುವ ಮತ್ತು ಉನ್ನತ ಮಟ್ಟದ ನ್ಯಾಯಾಂಗ ತನಿಖೆಯ ಬೇಡಿಕೆಗಳು ಇನ್ನೂ ಈಡೇರಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಅಧ್ಯಕ್ಷ ಸುಭಾಷ್, ಚಂದ್ರಕಲಾ, ಸ್ವಾತಿ, ಹಾಗೂ ಮಾನಸ ಗಂಗೋತ್ರಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಭಾರಿ ಭ್ರಷ್ಟಾಚಾರ ಖಂಡಿಸಿ ಬಿಜೆಪಿ ಕಾರ್ಯಕರ್ತರಿಂದ ಮುಡಾ ಮುತ್ತಿಗೆ ಯತ್ನ

ಮಾರ್ಗ ಮಧ್ಯೆ ಹಲವರ ಬಂಧನ; ಬಳಿಕ ಬಿಡುಗಡೆ



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿ ಮುಡಾಗೆ ಮುತ್ತಿಗೆ ಹಾಕಲು ಬರುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಮಾರ್ಗ ಮಧ್ಯೆ ಬಂಧಿಸಿದರು.

ಮೈಸೂರು, ಜು.4(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಡೆದಿರುವ ಹಗರಣದ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮುಡಾ ಮುತ್ತಿಗೆಗೆ ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿ ಮುಂಭಾಗದಿಂದ ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ ಮೂಲಕ ಮೆರವಣಿಗೆಯಲ್ಲಿ ಮುಡಾ ಕಚೇರಿಗೆ ಬರುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು, ಮಹಾರಾಜ ಕಾಲೇಜು ಗೇಟ್ ಬಳಿಯೇ ತಡೆದ ಪೊಲೀಸರು, ಮುತ್ತಿಗೆಗೆ ಅವಕಾಶ ನೀಡಲಾಗದು ಎಂದು ತಿಳಿಸಿದರು. ಆದರೂ ಬಿಜೆಪಿ ಕಾರ್ಯಕರ್ತರು ಮುನ್ನುಗ್ಗಲು ಪ್ರಯತ್ನಿಸಿದಾಗ 50ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ, ಬಳಿಕ ಎಲ್ಲರ ವಿಳಾಸ ಪಡೆದು ಮಧ್ಯಾಹ್ನದ ನಂತರ ಬಿಡುಗಡೆ ಮಾಡಿದರು.

4 ಸಾವಿರ ಕೋಟಿ ರೂ. ಹಗರಣ: ಬಿಜೆಪಿ ಕಚೇರಿ ಬಳಿ ಪ್ರತಿಭಟನಾ ಮೆರವಣಿಗೆ ಆರಂಭಕ್ಕೂ ಮುನ್ನ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ. 50:50 ಅನುಪಾತದಡಿ ನಿವೇಶನ ಹಂಚಿಕೆ ಸೇರಿದಂತೆ ವಿವಿಧ ನಿವೇಶನಗಳ ಮಾರಾಟದಲ್ಲಿ ಹಗರಣ ನಡೆದಿದೆ. ಸುಮಾರು ನಾಲ್ಕು ಸಾವಿರ ಕೋಟಿ ರೂ. ಹಗರಣ ನಡೆದಿದ್ದು, ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹಗರಣದಲ್ಲಿ ಭಾಗಿಯಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ವಸತಿಹೀನರಿಗೆ ನಿವೇಶನ ಕೊಡಬೇಕಾದ ಮುಡಾ ಹಗರಣದಲ್ಲಿ ಮುಳುಗಿದೆ. ಈ ಹಗರಣದಲ್ಲಿ ಸರ್ಕಾರವೇ ಭಾಗಿಯಾಗಿರುವುದರಿಂದ ಸತ್ಯಾಸತ್ಯತೆ ಬಹಿರಂಗವಾಗಬೇಕಾದರೆ ಸಿಬಿಐ ತನಿಖೆಗೆ ಒಳಪಡಿಸಬೇಕು. ಇದರಲ್ಲಿ ಭಾಗಿಯಾಗಿರುವ ಪ್ರಭಾವಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಪ್ರತಿಷ್ಠಿತರಿಗೆ ಮಂಜೂರಾಗಿರುವ ಇಂತಹ ನಿವೇಶನವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಸಿಎಂ ಪತ್ನಿ ಹೆಸರಿಗೆ ಮಂಜೂರು ಮಾಡಿರುವ ನಿವೇಶನಗಳನ್ನು ಸಹ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಜೋಗಿ ಮಂಜು, ರಾಕೇಶ್, ಮಹೇಶ್‌ರಾಜೇ ಅರಸ್, ನವೀನ್ ಕುಮಾರ್, ಬಿ.ಎಂ.ರಘು, ಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಜಿಗರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಿಲ್ (ಹಿಂ)	4 ಪ್ರದರ್ಶನಗಳು
ಸಂಗಂ	
ಕಾದಾಡಿ (ಕ)	4 ಪ್ರದರ್ಶನಗಳು
ಲಿಡೋ	
ಜಿಗರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರುಡನ್ (ತ)	4 ಪ್ರದರ್ಶನಗಳು
ಪ್ರಭಾ	
ಕಾಗದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.11ಕ್ಕೆ, ಸಂ.4.30ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.35ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1.45ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4.05ಕ್ಕೆ, ಕಿಲ್ (ಹಿಂ): ರಾ.7.35ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ) (ತೆ): ಬೆ.11.45ಕ್ಕೆ, ಕಲ್ಕಿ 2898 ಎಡಿ (ಕ): ಮ.3.15ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಕಿಲ್ (ಹಿಂ): ಬೆ.11, ಕಲ್ಕಿ 2898 ಎಡಿ (3ಡಿ) (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಮ.1ಕ್ಕೆ, ಕಾಗದ (ಕ): ಸಂ.4ಕ್ಕೆ, ಬಿಗ್ ಬೆನ್ (ಮ): ಸಂ.6.55ಕ್ಕೆ, ಕುಂಡಲ ಪುರಾಣಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಮ.2.30ಕ್ಕೆ, ರಾ.9.30ಕ್ಕೆ, ಕಲ್ಕಿ 2898 ಎಡಿ (ಕ): ಸಂ.6ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ (3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆ ಅರ್ಜುನ ಸ್ಮಾರಕಕ್ಕೆ ಶಂಕುಸ್ಥಾಪನೆ

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ

ಬೆಂಗಳೂರು, ಜು.4– ಅರ್ಜುನ ಆನೆ ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಾಣಕ್ಕೆ ಜು.6ರಂದು ಶಂಕುಸ್ಥಾಪನೆ ನೆರವೇರಲಿದೆ.

ಹಾಸನ ಜಿಲ್ಲೆ, ಯಸಳೂರು ಅರಣ್ಯ ವಲಯದ ಡಬ್ಬಲಿಕಟ್ಟೆ ನೆಡುತೋಪಿನಲ್ಲಿರುವ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ಅಂದು ಮಧ್ಯಾಹ್ನ 12.30ಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು. ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಸ್ಥಳೀಯ ಶಾಸಕರು, ಸಂಸದರು ಸೇರಿದಂತೆ ಹಲವು ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಸಳೂರು ಬಳಿ ಕಳೆದ ಡಿಸೆಂಬರ್ 4ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ, ಮದವೇರಿ ದಾಳಿ ಮಾಡಿದ ಆನೆಯೊಂದಿಗೆ ವೀರಾವೇಶದಿಂದ ಹೋರಾಡಿ ಹುತಾತ್ಮನಾದ ದಸರಾ ಆನೆ ಅರ್ಜುನನಿಗೆ ಸ್ಮಾರಕ ನಿರ್ಮಿಸುವುದಾಗಿ ಸರ್ಕಾರ ಘೋಷಿಸಿತ್ತು. ಅದರಂತೆ ಶನಿವಾರ ಭೂಮಿಪೂಜೆ ನೆರವೇರಿಸಲಾಗುವುದು. ಅರ್ಜುನ ಆನೆಯ ನೆಲೆಯಾಗಿದ್ದ ನಾಗರಹೊಳೆ ಅರಣ್ಯ ವ್ಯಾಪ್ತಿಯ ಬಳ್ಳೆಯಲ್ಲೂ ಸ್ಮಾರಕ ನಿರ್ಮಾಣಕ್ಕೆ ಶೀಘ್ರವೇ ಶಂಕುಸ್ಥಾಪನೆ ನೆರವೇರಲಿದೆ ಎಂದಿದ್ದಾರೆ.

ಈ ಎರಡೂ ಸ್ಮಾರಕಗಳಲ್ಲಿ ಅರ್ಜುನ ಪ್ರತಿಕೃತಿ ಪ್ರತಿಷ್ಠಾಪಿಸಲಾಗುವುದು. ಜೊತೆಗೆ ಅರ್ಜುನ ಮೈಸೂರು ದಸರಾದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಸಾಗಿದ ಫೋಟೋಗಳು, ಕಾಡಾನೆ ಹುಲಿ ಮತ್ತು ಚಿರತೆ ಸೆರೆ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡ ಫೋಟೋಗಳನ್ನು ಅಳವಡಿಸುವ ಮೂಲಕ ಜನ ಮಾನಸದಲ್ಲಿ ಅರ್ಜುನನ ಕೊಡುಗೆ ಚಿರಸ್ಥಾಯಿಯಾಗುವಂತೆ ಮಾಡಲಾಗುವುದು ಎಂದು ಖಂಡ್ರೆ ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	100.33 ಅಡಿ
ಒಳಹರಿವು	11189 ಕ್ಯೂಸೆಕ್
ಹೊರಹರಿವು	540 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2281 ಅಡಿ
ಒಳಹರಿವು	8500 ಕ್ಯೂಸೆಕ್
ಹೊರಹರಿವು	2000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2844 ಅಡಿ
ಒಳಹರಿವು	231 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್



ಹಸಿರು ನಮ್ಮ ಉಸಿರು

ಕರ್ತವ್ಯಲೋಪ: ಸಂಚಾರ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಅಮಾನತು

ಮೈಸೂರು, ಜು.4– ಕರ್ತವ್ಯಲೋಪ ದಡಿ ಮೈಸೂರಿನ ಸಂಚಾರ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಅಮಾನತ್ತಾಗಿದ್ದಾರೆ.



ನರಸಿಂಹರಾಜ ಸಂಚಾರ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಸೋಮಶೇಖರ್ ಅವರನ್ನು ಅಮಾನತು ಮಾಡಿ, ನಗರ ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಆದೇಶಿಸಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ 2023ರ ನವೆಂಬರ್ 28ರಂದು ರಾತ್ರಿ 10.30ರ ಸಮಯದಲ್ಲಿ ನರಸಿಂಹರಾಜ ಸಂಚಾರ ಠಾಣೆ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಹೆಡ್‌ಕಾನ್ಸ್‌ಟೇಬಲ್ ಸೋಮಶೇಖರ್, ಮಂಡ್ಯದ ಕಡೆಯಿಂದ ಬಂದ ಡಸ್ಟರ್ ಕಾರನ್ನು ನಿಲ್ಲಿಸಿ, ತಪಾಸಣೆ ನಡೆಸಿದ್ದಾರೆ. ಆ ಕಾರಿನ ಚಾಲಕ ಮದ್ಯಪಾನ ಮಾಡಿದ್ದರಿಂದ ವಾಹನವನ್ನು ವಶಪಡಿಸಿಕೊಂಡು, ಠಾಣೆ ಬಳಿ ತಂದು ನಿಲ್ಲಿಸಲಾಗಿತ್ತು.

ಬಳಿಕ ಠಾಣೆಗೆ ಬಂದ ಕಾರು ಚಾಲಕನಿಗೆ 10 ಸಾವಿರ ದಂಡ ಪಾವತಿಸುವಂತೆ ಸಿಬ್ಬಂದಿ ಸೋಮಶೇಖರ್ ತಿಳಿಸಿದ್ದಾರೆ. ಚಾಲಕ ದಂಡ ಪಾವತಿಸಲು ಮುಂದಾದಾಗ ರಮೇಶ್‌ಗೌಡ ಎಂಬುವವರಿಗೆ ಗೂಗಲ್ ಪೇ ಮಾಡುವಂತೆ ಸೂಚಿಸಿದ್ದರಿಂದ ಚಾಲಕ ಹಾಗೆಯೇ ಮಾಡಿದ್ದಾನೆ. ಸ್ವಲ್ಪ ಸಮಯದ ನಂತರ ರಮೇಶ್‌ಗೌಡ ಅವರಿಂದ 5 ಸಾವಿರ ರೂ.ಗಳನ್ನು ಚಾಲಕನಿಗೆ ವಾಪಸ್ ಗೂಗಲ್ ಪೇ ಮಾಡಿಸಿ, 5 ಸಾವಿರ ರೂ. ಸಾಕು ಬಿಡಿ ಎಂದು ಹೇಳಿ ಸೋಮಶೇಖರ್ ಆತನ ವಾಹನವನ್ನು ಬಿಟ್ಟು ಕಳುಹಿಸಿದ್ದಾರೆ.

ತಪಾಸಣೆ ಸಂದರ್ಭದಲ್ಲಿ ಚಾಲಕ ವಾಹನದ ದಾಖಲೆಗಳನ್ನು ಹಾಜರುಪಡಿಸದಿದ್ದರೂ 10 ಸಾವಿರ ರೂ. ಹಣಕ್ಕೆ ಬೇಡಿಕೆಯಿಟ್ಟಿದ್ದಾರೆ. ಈ ಬಗ್ಗೆ ಸ್ಥಳದಲ್ಲೇ ಇದ್ದ ಇನ್ಸ್‌ಪೆಕ್ಟರ್ ರೇಖಾಬಾಯಿ ಅವರಿಗೂ ವರದಿ ಮಾಡಿಲ್ಲ. ಚಾಲಕನಿಂದ ದಂಡ ಸ್ವೀಕರಿಸಿದ್ದಕ್ಕೆ ರಶೀದಿಯನ್ನೂ ನೀಡಿಲ್ಲ. ಮೈಸೂರಿನ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಅವರ ಅರ್ಜಿ ಆಧಾರದಲ್ಲಿ ಪೂರ್ವಭಾವಿ ವಿಚಾರಣೆ ನಡೆಸಿದಾಗ ಸೋಮಶೇಖರ್ ಕರ್ತವ್ಯ ಲೋಪ ವೆಸಗಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ದರ್ಶನ್‌ಗೆ ನಾನು ಮದರ್ ಇಂಡಿಯಾ, ಕೊಲೆ ಮಾಡುವ ವ್ಯಕ್ತಿ ಅವನಲ್ಲ

ಮೌನ ಮುರಿದ ಮಾಜಿ ಸಂಸದೆ ಸುಮಲತಾ

ಬೆಂಗಳೂರು, ಜು.4– ಚಿತ್ರದುರ್ಗ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಜೈಲುಪಾಲಾಗಿದ್ದಾರೆ. ದರ್ಶನ್ ಬಂಧನವಾಗಿ ಸುಮಾರು ಹಲವಾರು ದಿನಗಳು ಕಳೆಯುತ್ತಿದ್ದು, ದರ್ಶನ್‌ಗೆ ಬಹಳ ಆಪ್ತರಾದ ಮಾಜಿ ಸಂಸದೆ ಸುಮಲತಾ ಸೈಲೆಂಟ್ ಆಗಿದ್ದದ್ದು ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಸುಮಲತಾ ಅವರು ತಮ್ಮ ಇನ್ಸ್ಟಾಗ್ರಾಮ್ ಖಾತೆಯಲ್ಲಿ 'ಸತ್ಯಮೇವ ಜಯತೆ' ಎಂಬ ಹೆಸರಿಲ್ಲಿ ಪೋಸ್ಟ್ ಮಾಡಿ ಮೌನ ಮುರಿದಿದ್ದಾರೆ.



ದರ್ಶನ್ ಯಾವಾಗಲೂ ನನ್ನನ್ನು ಮದರ್ ಇಂಡಿಯಾ ಎಂದು ಕರೆಯುತ್ತಾರೆ ಮತ್ತು ನಾನು ಬದುಕಿರುವವರೆಗೂ ಅವನು ನನ್ನ ಹಿರಿಯ ಮಗನಾಗಿರುತ್ತಾನೆ ಎಂದಿರುವ ಅವರು, ಮೊದಲಿಗೆ ತಮ್ಮ ಮಗ ಮತ್ತು ಪತಿಯನ್ನು ಹೃದಯವಿದ್ರಾವಕ ರೀತಿಯಲ್ಲಿ ಕಳೆದುಕೊಂಡಿರುವ ರೇಣುಕಾಸ್ವಾಮಿ ಅವರ ಹೆತ್ತವರು ಮತ್ತು ಪತ್ನಿಗೆ ನನ್ನ ಸಂತಾಪವನ್ನು ಸೂಚಿಸುತ್ತೇನೆ ಮತ್ತು ಈ ದುರಂತವನ್ನು ಎದುರಿಸಲು ಮತ್ತು ಆ ನೋವನ್ನು ಭರಿಸಲು ಶಕ್ತಿಯನ್ನು ದೇವರು ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ನನ್ನ ಮತ್ತು ದರ್ಶನ್ ಸ್ಟಾರ್ ಮತ್ತು ಸೂಪರ್‌ಸ್ಟಾರ್ ಆಗುವ ಮೊದಲು ನಾನು ಅವರನ್ನು 25 ವರ್ಷಗಳಿಂದ ಬಲ್ಲೆ. ಯಾವುದೇ ಸ್ಟಾರ್‌ಡಂಗಿಂತ ಹೆಚ್ಚಾಗಿ, ಅವರು ನನ್ನ ಕುಟುಂಬದ ಸದಸ್ಯ ಮತ್ತು ಯಾವಾಗಲೂ ನನಗೆ ಮಗನಂತೆ. ಯಾವ ತಾಯಿಯೂ ತನ್ನ ಮಗುವನ್ನು ಈ ರೀತಿಯ ಪರಿಸ್ಥಿತಿಯಲ್ಲಿ ನೋಡುವುದನ್ನು ಸಹಿಸುವುದಿಲ್ಲ. ನಾನು ದರ್ಶನ್ ಅವರನ್ನು ಪ್ರೀತಿಸುವ ಹೃದಯ ಹೊಂದಿರುವ, ಅತ್ಯಂತ ಕಾಳಜಿಯುಳ್ಳ ಮತ್ತು ಉದಾರ ವ್ಯಕ್ತಿ ಎಂದು ತಿಳಿದಿದ್ದೇನೆ. ಪ್ರಾಣಿಗಳ ಬಗ್ಗೆ ಅವನ ಸಹಾನುಭೂತಿ ಮತ್ತು ಸಹಾಯ ಮಾಡುವ ಮನೋಭಾವವು ಯಾವಾಗಲೂ ಅವನ ಸ್ವಭಾವದ ಭಾಗವಾಗಿದೆ ಎಂದು ಸುಮಲತಾ ಹೇಳಿದ್ದಾರೆ.

ಈ ಕೃತ್ಯವನ್ನು ಮಾಡುವ ವ್ಯಕ್ತಿತ್ವ ದರ್ಶನ್ ಅವರದ್ದಲ್ಲ ಎಂದು ನಾನು ನಂಬಿದ್ದೇನೆ. ಇಂತಹ ಅಪರಾಧದಲ್ಲಿ ಆರೋಪಿಯಾಗಿ ದರ್ಶನ್ ನಿಂತಿರುವುದನ್ನು ನೋಡುವುದು ನನಗೆ ತುಂಬಾ ನೋವಿನ ಸಂಗತಿ. ಆರೋಪಿಯಾಗಿರುವುದು ಎಂದರೆ ಅವನು ಅಪರಾಧಿ ಎಂದು ಅರ್ಥವಲ್ಲ ಎಂಬುದನ್ನು ನೆನಪಿನಲ್ಲಿಡೋಣ. ಬೇರೆಯವರಂತೆ ಕಾನೂನಾತ್ಮಕವಾಗಿ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಹಕ್ಕು ಅವರಿಗೂ ಇದೆ.

ಅವರ ತಾಯಿಯಾಗಿ ನಾನು ಸತ್ಯ ಹೊರಬರಲಿ ಮತ್ತು ಎಲ್ಲರಿಗೂ ನ್ಯಾಯ ಸಿಗಲಿ ಎಂದು ದೇವರಲ್ಲಿ ನಿರಂತರವಾಗಿ ಪ್ರಾರ್ಥಿಸುತ್ತಿದ್ದೇನೆ. ಅವರು ತಮ್ಮನ್ನು ತಾವು ನಿರಪರಾಧಿ ಎಂದು ಸಾಬೀತುಪಡಿಸಿ ಹೊರಬರುತ್ತಾರೆ ಮತ್ತು ಚಿತ್ರೀಕರಣ, ಸಾಮಾನ್ಯ ಜೀವನವನ್ನು ಪುನರಾರಂಭಿಸುತ್ತಾರೆ ಎಂದು ನಾನು ಭರವಸೆ ಹೊಂದಿದ್ದೇನೆ ಎಂದು ಸುಮಲತಾ ಬರೆದುಕೊಂಡಿದ್ದಾರೆ.

ಹೃದಯಾಘಾತದಿಂದ 10ನೇ ತರಗತಿ ವಿದ್ಯಾರ್ಥಿನಿ ಸಾವು

ಉಡುಪಿ, ಜು.4– ಹೃದಯಾಘಾತದಿಂದ 10ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಸಾವನ್ನಪ್ಪಿದ್ದಾಳೆ. ಈ ಘಟನೆ ಉಡುಪಿ ಜಿಲ್ಲೆಯ ಮೂಡುಬೆಳ್ಳೆಯಲ್ಲಿ ನಡೆದಿದೆ.

ಭಾಗ್ಯಶ್ರೀ (16) ಹೃದಯಾಘಾತದಿಂದ ಮೃತಪಟ್ಟಿದ್ದಾಳೆ. ಮೂಡುಬೆಳ್ಳೆ ಸಂತ ಲಾರೆನ್ಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ.

ಪಳ್ಳಿ ದಾದಬೆಟ್ಟು ನಿವಾಸಿ ಜಯರಾಮ ಆಚಾರ್ಯ– ಚಂದ್ರಿಕಾ ದಂಪತಿ ಪುತ್ರಿ ಭಾಗ್ಯಶ್ರೀ ಬೆಳಿಗ್ಗೆ ಮನೆಯಲ್ಲಿ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಕೆಯನ್ನು ಉಡುಪಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಆಕೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ.

ಇತ್ತೀಚೆಗೆ ಕೊಡಗಿನಲ್ಲಿ ಯುವತಿಯೊಬ್ಬಳು ಹೀಗೇ ಹೃದಯಾಘಾತಕ್ಕೆ ಬಲಿಯಾಗಿದ್ದಳು. ಮಡಿಕೇರಿ ತಾಲೂಕಿನ ನೆಲಜಿ ಗ್ರಾಮದ ಮಣವಟ್ಟಿರ ಪೊನ್ನಪ್ಪ ಅವರ ಮಗಳು ನಿಲಿಕ ಪೊನ್ನಪ್ಪ (24) ಮೃತ ದುರ್ದೈವಿ. ಕರ್ತವ್ಯಕ್ಕೆಂದು ಮನೆಯಿಂದ ಹೊರಟಾಗ ಹೃದಯ ಬಡಿತವೇ ನಿಂತು ಹೋಗಿದೆ. ಎದೆ ನೋವೆಂದು ಒದ್ದಾಡಿದ ನಿಲಿಕ ಕುಸಿದು ಬಿದ್ದಿದ್ದಳು ಕೂಡಲೇ ಅಲ್ಲಿದ್ದವರು ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಆದರೆ ಅದಾಗಲೇ ಆಕೆಯ ಪ್ರಾಣಪಕ್ಷಿ ಹಾರಿ ಹೋಗಿತ್ತು ಎಂದು ವೈದ್ಯರು ದೃಢಪಡಿಸಿದ್ದರು.





